ಲಂಕೇಶ್

ಫೆಬ್ರವರಿ 18, 2009 ರೂ. 12/-




ಕಿರಾತಕ ಮುತಾಲಿಕ

ಪ್ರೇಮಕ್ಕೂ ಪರ್ಮಿಟ್ಟಾ?

ಗಣಿತ
ಷ್ಟಿಗೆ
ಾರ
ಣ್ಣು?

ತಾಯಿ ಮಗನ ನಿಗೂಢ ಬದುಕು






ಭಾಷ್ ಡೀಕೆ
ಆಚಾರ್ಯ



ಆಧುನಿಕ ಯಯಾತಿ
ಶರಣಬಸಪ್ಪ ಅಪ್ಪ



ಜೆಡಿಎಸ್ ಬಾಗಿಲಲ್ಲಿ
ಯತ್ನಾಳ್



ಭಲೇ
ಬಸವರಾಜು


ಪಬ್-ಪಬ್ಲಿಕ್-ರಿಪಬ್ಲಿಕ್!

ಚಾರ್ವಾಕ
ಶಿವಸುಂದರ್

"ಸಣ್ಣ ವಿಷಯಾನ ಮಾಧ್ಯಮದವರು ಎಷ್ಟು ದೊಡ್ಡದು ಮಾಡ್ತಿದಾರೆ ಸಾ.."ಎಂದು ಹಿರಿಯ ದಲಿತ ಕಾರ್ಯಕರ್ತರೊಬ್ಬರು ಶ್ರೀರಾಮ ಸೇನೆ ನಡೆಸಿದ ಪಬ್ ದಾಳಿಯ ಬಗ್ಗೆ ದಲಿತ ಸಂಘರ್ಷ ಸಮಿತಿಯ ಕರಪತ್ರವನ್ನು ನೋಡಿ ಉದ್ಗಾರ ತೆಗೆದಾಗ ತಕ್ಷಣಕ್ಕೆ ಏನೂ ಹೇಳಲಾಗಲಿಲ್ಲ. ಪಬ್ ದಾಳಿಯೆಂಬ ಸಣ್ಣ ವಿಷಯವನ್ನು ಕಾಂಗ್ರೆಸ್ ಪಕ್ಷ ಬಿಜೆಪಿಯನ್ನು ಬದ್‌ನಾಮ್ ಮಾಡಲು ದೊಡ್ಡದು ಮಾಡುತ್ತಿದೆ ಎಂದು ಮುತಾಲಿಕ್ ಕೂಡಾ ಹೇಳುತ್ತಿದ್ದಾನೆ. ಅವನ ಪ್ರಕಾರ ಮಹಿಳೆಯರನ್ನು ಹದ್ದುಬಸ್ತಿಗೆ ತರಲು ಮತ್ತು ಭಾರತದ ಸಂಸ್ಕೃತಿಯನ್ನು ಉಳಿಸಲು ಕೆಲವು ಮಹಿಳೆಯರಿಗೆ ಒದೆ ಬಿದ್ದಿದ್ದರೆ ಅದು ದೊಡ್ಡ ವಿಷಯವೇನಲ್ಲ.

ಆದರೆ ಆ ಹಿರಿಯ ದಲಿತ ಮಿತ್ರರು ಕೇಳಿದ ಪ್ರಶ್ನೆ ಮೇಲ್ನೋಟಕ್ಕೆ ಅದೇ ರೀತಿ ಇದ್ದರೂ ಆ ಪ್ರಶ್ನೆಯ ನೆಲೆ ಸಂಪೂರ್ಣ ತದ್ವಿರುದ್ಧವಾದದ್ದು. ಅವರು ಕೇಳಿದ ಪ್ರಶ್ನೆಗೆ ಉತ್ತರ ಸುಲಭವಿರಬಹುದು. ಆದರೆ ಅವರು ಕೇಳದೆ ಹೋದ ಹಲವು ಪ್ರಶ್ನೆಗಳನ್ನು ಇಂದು ಹೆಚ್ಚುತ್ತಿರುವ ಫ್ಯಾಸಿಸ್ಟ್ ದಾಳಿಯ ವಿರುದ್ಧ ಹೋರಾಟ ಮಾಡಬೇಕೆಂದುಕೊಂದಿರುವ ಪ್ರತಿಯೊಬ್ಬರೂ ಹಾಕಿಕೊಳ್ಳಲೇಬೇಕಿದೆ.

ಆ ದಲಿತ ಮಿತ್ರರು ಖಂಡಿತಾ ಮಹಿಳೆಯರ ಮೇಲೆ ಶ್ರೀರಾಮ ಸೇನೆ ಮಾಡಿದ ದಾಳಿಯನ್ನು ಸಮರ್ಥಿಸುವವರಲ್ಲ. ಬದಲಿಗೆ ಅದರ ವಿರುದ್ಧ ಈವರೆಗೆ ನಡೆದ ಹಲವು ಹೋರಾಟಗಳಲ್ಲಿ ಭಾಗವಹಿಸುತ್ತಾ ಬಂದವರೇ. ಹಾಗಿದ್ದರೂ ಸಣ್ಣ ವಿಷಯಾನ ಮಾಧ್ಯಮದವರು ಇಷ್ಟೊಂದು ದೊಡ್ಡದು ಮಾಡುತ್ತಿದ್ದಾರೆ ಎಂದು ಏಕೆ ಅನಿಸಿರಬಹುದು?



ಮಂಗಳೂರಿನ ಪಬ್‌ನಲ್ಲಿದ್ದ ಮಹಿಳೆಯರ ಮೇಲೆ ಮಾಡಿದ ದಾಳಿಯ ಹಿಂದಿದ್ದವರ ಸಿದ್ಧಾಂತ ತಥಾಕಥಿತ ಪಾಶ್ಚಿಮಾತ್ಯ ಸಂಸ್ಕೃತಿಯ ದಾಳಿಯಿಂದ ಈ ದೇಶದ ಸನಾತನ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು. ಈ ಸನಾತನ ಸಂಸ್ಕೃತಿಯೆಂದರೆ ಮನುಸ್ಮೃತಿಯಲ್ಲಿ ವಿವರವಾಗಿ ದಾಖಲಿಸಿರುವಂತೆ ಈ ದೇಶದ ಮಹಿಳೆಯರು ಯಾವುದೇ ಹಕ್ಕು ಅಥವಾ ಸ್ವಾತಂತ್ರ್ಯವಿಲ್ಲದೆ ಪುರುಷರ ನೆರಳಾಗಿ, ಅಡಿಯಾಳಾಗಿ ಬಾಳುವುದು. ಪತಿಯೇ ಪರದೈವ ಎಂಬಂತೆ ಏನೇ ಶೋಷಣೆ ಆದರೂ ಧರಿತ್ರಿಯಂತೆ ಸಹಿಸಿಕೊಂಡು ಬಾಳುವುದು. ಅದೇ ರೀತಿ ಈ ದೇಶದ ದಲಿತ-ಶೂದ್ರರೂ ಸಹ ಯಾವುದೇ ಹಕ್ಕುಗಳಿಲ್ಲದೆ ಮೇಲ್ಜಾತಿಗಳ ಸೇವೆ ಮಾಡುತ್ತಾ ಬದುಕುವುದು.

ಪಬ್ ಮೇಲೆ ದಾಳಿ ಮಾಡಿದ್ದು ಅಲ್ಲಿ ಅಶ್ಲೀಲ ನೃತ್ಯ ಮಾನಭಂಗ ಇತ್ಯಾದಿ ನಡೆಯುತ್ತಿತ್ತು ಎಂದು ಮುತಾಲಿಕ ಗಳಿಗೆಗೊಂದು ಸುಳ್ಳು ಹೇಳುತ್ತಿದ್ದರೂ ಅದರ ಹಿಂದಿನ ಅಸಲಿ ಕಾರಣ ಮಹಿಳೆಯರು ಸನಾತನ ಸಂಸ್ಕೃತಿಯ ಅಂದರೆ ಪುರುಷಸೂಕ್ತದ ಲಕ್ಷ್ಮಣರೇಖೆಯನ್ನು ದಾಟಿದ್ದು. ಪಬ್ ಸಂಸ್ಕೃತಿ ಭಾರತೀಯ ಸಂಸ್ಕೃತಿಗೆ ವಿರೋಧವಾದದ್ದು ಎಂದು ಮುತಾಲಿಕ ಹೇಳುತ್ತಿರುವುದರ ಅರ್ಥ ಪಬ್‌ಗಳೇ ಇರಬಾರದೆಂದಲ್ಲ. ಪಬ್‌ಗೆ ಮಹಿಳೆಯರು ಹೋಗಬಾರದು ಎಂದು. ಭಾರತೀಯರು ವಿದೇಶಿ ಮದ್ಯಗಳನ್ನು ಕುಡಿಯಬಾರದು ಎಂದಲ್ಲ, ಭಾರತೀಯ ಮಹಿಳೆಯರು ಕುಡಿಯಬಾರದು ಎಂದು. ಅಂದರೆ ಸಾರಾಂಶದಲ್ಲಿ ಸಂಘಪರಿವಾರದ ವಿರೋಧ ಇರುವುದು ಪಾಶ್ಚಿಮಾತ್ಯ ಸಂಸ್ಕೃತಿಗಲ್ಲ. ಅವರೂ ಕೂಡಾ ಅದರ ಫಲಾನುಭವಿಗಳೇ. ಸ್ಯಾಟಲೈಟ್ ಟಿವಿ, ಸಮೂಹ ಮಾಧ್ಯಮ, ಮೊಬೈಲ್, ಕಂಪ್ಯೂಟರ್ ಇವುಗಳೆಲ್ಲ ಪಾಶ್ಚಿಮಾತ್ಯ ತಂತ್ರಜ್ಞಾನವಾದ್ದರಿಂದ ಬೇಡವೆಂದು ಅವರೆಂದಿಗೂ ವಿರೋಧಿಸಿಲ್ಲ. ಅಷ್ಟೇಕೆ ವಿದೇಶಿ ಬಂಡವಾಳ ಭಾರತಕ್ಕೆ ಲಗ್ಗೆ ಹೂಡಿ ಇಲ್ಲಿನ ಸಂಪನ್ಮೂಲಗಳನ್ನೆಲ್ಲಾ ಲೂಟಿ ಹೊಡೆಯುವುದಕ್ಕೂ ಅವರ ವಿರೋಧವಿಲ್ಲ. ಆದ್ದರಿಂದಲೇ ಅಲ್ಲೇ ಮಂಗಳೂರಿನಲ್ಲೇ ವಿಶೇಷ ಆರ್ಥಿಕ ವಲಯದ ಹೆಸರಲ್ಲಿ ಪಾಶ್ಚಿಮಾತ್ಯ ಬಂಡವಾಳ ಈ ದೇಶದ ರೈತರನ್ನೇ ಒಕ್ಕಲೆಬ್ಬಿಸಿ ಅವರ ಕೃಷಿ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದ್ದರೂ ಅದರ ವಿರುದ್ಧ ಚಕಾರವೆತ್ತುವುದಿಲ್ಲ. ಈ ದೇಶದ ಮಹಿಳೆಯರ ಮೇಲೆ ದಾಳಿ ಮಾಡುವಷ್ಟು ಪೌರುಷವಿರುವ ಈ ಶ್ರೀರಾಮಸೇನೆ ಪಾಶ್ಚಿಮಾತ್ಯ ಬಂಡವಾಳದ ಮೇಲೆ ಯಾವುದೇ ಯುದ್ಧ ಸಾರದೆ ಮೂಲೆಯಲ್ಲಿ ಮುದುರಿ ಕೂತಿರುತ್ತದೆ. ಅಷ್ಟೆಲ್ಲಾ ಏಕೆ? ದೇಶೀ ಸಾರಾಯಿ ನಿಷೇಧ ಮಾಡಿದ ಬಿಜೆಪಿ ಸರ್ಕಾರ ಇಂದು ಅದರ ಬದಲಿಗೆ ಹಳ್ಳಿಹಳ್ಳಿಗಳಲ್ಲಿ ಪಾಕೆಟ್‌ನಲ್ಲಿ ವಿದೇಶಿ ಮದ್ಯವನ್ನು ಹಂಚಿ ನಾಡಿನ ಕುಟುಂಬಗಳ ನೆಮ್ಮದಿಗೆ ಕೊಳ್ಳಿ ಹಚ್ಚುತ್ತಿದ್ದರೂ ಈ ಸೇನೆ ಅದರ ಬಗ್ಗೆ ಎಂದಿಗೂ ಚಕಾರವೆತ್ತಿಲ್ಲ.

ಈ ದೇಶದ ಕುಲ ಸಂಸ್ಕೃತಿಗಳಿಗೆ ಆಧಾರವಾಗಿರುವ ನೇಕಾರಿಕೆ, ಒಕ್ಕಲುತನ, ಕುಂಬಾರಿಕೆ, ಕಮ್ಮಾರಿಕೆ- ಎಲ್ಲವೂ ನಾಶವಾಗುವ ಆರ್ಥಿಕ ನೀತಿಯನ್ನು ತಂದದ್ದು ಮತ್ತು ಅಂಥ ನೀತಿಗಳನ್ನು ಜಾರಿಗೆ ತರುವಾಗ ಅದಕ್ಕೆ ಕುಮ್ಮಕ್ಕು ಕೊಟ್ಟದ್ದು ಇದೇ ಸಂಘಪರಿವಾರವೇ. ಒಂದೆಡೆ ಜನತೆಯ ಬದುಕಿನ ಆಧಾರವಾಗಿರುವ ಆರ್ಥಿಕತೆಯನ್ನೆಲ್ಲಾ ಅಮೆರಿಕೀಕರಣವಾಗಲು ಬಿಟ್ಟು ಸಂಸ್ಕೃತಿ ಮಾತ್ರ ಭಾರತೀಯವಾಗಿರಬೇಕು ಎನ್ನುವ ಈ ಕಪಿಸೇನೆಗಳ ಮತ್ತು ಅವರ ಸೂತ್ರಧಾರಿಗಳಾದ ಸಂಘಪರಿವಾರದ ಅಸಲಿ ಹುನ್ನಾರ ಸ್ವಾಭಿಮಾನಿ ಜನ ಸಂಸ್ಕೃತಿಯನ್ನು ಅಳಿಸಿ ಜನರನ್ನು ಅಡಿಯಾಳಾಗಿರಿಸಿಕೊಳ್ಳುವ ಗುಲಾಮ ಸಂಸ್ಕೃತಿಯನ್ನು ಅಥವಾ ಬ್ರಾಹ್ಮಣೀಯ ಸಂಸ್ಕೃತಿಯನ್ನು ಜಾರಿಗೆ ತರುವುದೇ ಆಗಿದೆ.

ಆರ್ಥಿಕತೆ ಪಾಶ್ಚಿಮಾತ್ಯವಾಗಿರಬೇಕು. ಆದರೆ ಅದರೊಂದಿಗೆ ಬರುವ ಗ್ರಾಹಕ, ಕೊಳ್ಳುಬಾಕ ಸಂಸ್ಕೃತಿ ಮಾತ್ರ ಬೇಡ. ಇದು ಅದರ ತೋರಿಕೆಯ ಸಿದ್ಧಾಂತದಲ್ಲೂ ಇರುವ ವಿರೋಧಾಭಾಸ. ಈ ಅಮೆರಿಕೀಕರಣಗೊಳ್ಳುತ್ತಿರುವ ಆರ್ಥಿಕತೆ ತನ್ನೊಂದಿಗೆ ಅತ್ಯಂತ ಸ್ವಾರ್ಥಪೂರಿತ, ಸ್ವಯಂ ಕೇಂದ್ರಿತ ಮೌಲ್ಯಗಳನ್ನೂ ತರುತ್ತದಲ್ಲದೆ ಅದರ ಜೊತೆಗೆ ಜಾತಿ, ಲಿಂಗ ಇನ್ನಿತ್ಯಾದಿ ಅಡಚಣೆಗಳಿಲ್ಲದೆ ಎಲ್ಲರೂ ತನ್ನ ಸರಕುಗಳಿಗೆ ಗ್ರಾಹಕರಾಗುವುದನ್ನು ಬಯಸುತ್ತದೆ. ಕೊಳ್ಳಬಲ್ಲ ಕೆಲವರನ್ನು ಸೃಷ್ಟಿಸಿ ಅವರನ್ನು ಮನೆಯ ಗಡಿಗಳಿಂದ, ಕಟ್ಟುಪಾಡುಗಳಿಂದ ಹೊರತಂದು ಮಾರುಕಟ್ಟೆಗೆ ದೂಡುತ್ತದೆ. ಜನರ ವಿರಾಮವನ್ನೂ, ಮೋಜನ್ನೂ ಸರಕೀಕರಣ ಮಾಡಿ ಅದನ್ನು ವ್ಯವಸ್ಥಿತ ಉದ್ಯಮ ಮಾಡಿಕೊಳ್ಳುತ್ತದೆ. ಈಗಾಗಲೇ ಹೇಳಿದಂತೆ ಇವೆಲ್ಲಕ್ಕೂ ಬಿಜೆಪಿ ಸರ್ಕಾರವೇ ಕಾನೂನುಬದ್ಧ ಪರವಾನಗಿ ಕೊಟ್ಟಿದೆ. ಇದು ಅನಿವಾರ್ಯವಾಗಿ ಸಮಾಜದಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ಹೆಚ್ಚಿಸುತ್ತದೆ. ಅದು ಹುಟ್ಟಿಹಾಕುವ ಪ್ರತಿರೋಧವನ್ನು ಹತ್ತಿಕ್ಕಲು ಅತ್ಯಂತ ಪ್ರತಿಗಾಮಿ ಶಕ್ತಿಗಳನ್ನು ಬೆಳೆಸುತ್ತದೆ. ನಮ್ಮಲ್ಲಿ ಸಂಘಪರಿವಾರ ದೇಸೀ ಹೆಸರಲ್ಲಿ ವಿದೇಶಿ ಅಮೆರಿಕರಣದ ವಾಹಕವಾಗಿರುವುದು ಹೀಗೆ.

ಹೀಗಾಗಿ ಶ್ರೀರಾಮ ಸೇನೆ ಕೂಡಾ ಈ ನಾಡಿನ ಜನ ಸಂಸ್ಕೃತಿಯನ್ನು ನಾಶ ಮಾಡಲೆಂದೇ ಹುಟ್ಟಿರುವ ಸೇನೆ. ಅಮೆರಿಕೀಕರಣವನ್ನು ಈ ನಾಡಿನ ಮೇಲೆ ಸುಗಮವಾಗಿ ಹೇರಲು ಸಹಾಯವಾಗುವಂತೆ ಬ್ರಾಹ್ಮಣೀಯ ಸಂಸ್ಕೃತಿಯನ್ನು ಈ ನಾಡಿನ ಜನತೆಯ ಮೇಲೆ ಹೇರಲೆಂದೇ ಹುಟ್ಟಿರುವ ಸೇನೆ. ಇದಕ್ಕೆ ದುಡಿಯುವ ಜನ, ಶೋಷಿತ ಜನ ಸಮಾನತೆಯ ನೆಲೆಯಲ್ಲಿ ಪ್ರತಿಭಟನೆ ಮಾಡಿದರೆ ದೇಶದ್ರೋಹ ಎನಿಸುತ್ತದೆ. ಆದ್ದರಿಂದಲೇ ದಲಿತರು ಜಜ್ಜೆರಾದಲ್ಲಿ ಸ್ವಾವಲಂಬಿಗಳಾಗಿ ವ್ಯಾಪಾರಕ್ಕಿಳಿದರೆ ಭೀಕರವಾಗಿ ಕೊಂದುಹಾಕುತ್ತದೆ. ಖೈರ್ಲಾಂಜಿಯಲ್ಲಿ ದಲಿತ ಭೂತ್‌ಮಾಂಗೆ ಕುಟುಂಬ ಹಳ್ಳಿಯ ಸವರ್ಣೀಯ ಜಾತಿ ವ್ಯವಸ್ಥೆಯ ಗುಲಾಮರಾಗಿ ಬದುಕದೆ ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಸ್ವಲ್ಪ ಮುನ್ನಡೆ ಸಾಧಿಸಿದ್ದಕ್ಕೆ ಆ ಕುಟುಂಬದ ಸುರೇಖ ಮತ್ತು ಪ್ರಿಯಾಂಕ ಎಂಬ ದಲಿತ ಹೆಣ್ಣುಮಕ್ಕಳನ್ನು ಸಾಮೂಹಿಕವಾಗಿ ಅತ್ಯಾಚಾರ ಮಾಡಿ ಮರ್ಮಾಂಗದಲ್ಲಿ ಆಯುಧಗಳನ್ನು ತೂರಿಸಿ ಕೊಂದುಹಾಕುತ್ತದೆ. ಅದರ ವಿರುದ್ಧ ಪ್ರತಿಭಟಿಸಿದವರನ್ನು ಭಯೋತ್ಪಾದಕರೆಂದು ಕೊಂದುಹಾಕುತ್ತದೆ. ಕಂಬಾಲಪಲ್ಲಿ, ಕೀಲ್ವೇನ್ಮಣಿ, ಕರಂಚೇಡು, ಚುಂಡೂರು ಇವೆಲ್ಲ ಶೋಷಣೆಯನ್ನು ಮತ್ತು ಸವರ್ಣೀಯ ಹಿಂದೂ ಧರ್ಮದ ಚೌಕಟ್ಟನ್ನು ಸಮಾನತೆಯ ನೆಲೆಯಲ್ಲಿ ಮುರಿದು ತಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡವರ ಮೇಲೆ ನಡೆಸಿದ ಯುದ್ಧಗಳಾಗಿವೆ. ಕರಾವಳಿಯಲ್ಲಿ ತಮ್ಮ ಅಧೀನದಲ್ಲಿರದೆ ಸ್ವಾವಲಂಬಿಗಳಾಗುತ್ತಿರುವ ಅಲ್ಪಸಂಖ್ಯಾತರ ಮೇಲೆ ಮತ್ತು ಮಹಿಳೆಯರ ಮೇಲೆ ನಡೆಸುತ್ತಿರುವ ದಾಳಿಗಳೂ ಇದೇ ಬಗೆಯದಾಗಿವೆ.

ಈ ಹಿನ್ನೆಲೆಯಲ್ಲಿ ಆ ದಲಿತ ಮಿತ್ರರು ಕೇಳುತ್ತಿರುವ ಪ್ರಶ್ನೆಗೆ ಮರಳೋಣ. ಪಬ್ ಮೇಲೆ, ಮೇಲ್‌ಮಧ್ಯಮ ವರ್ಗದವರ ಮೇಲೆ ದಾಳಿ ನಡೆದರೆ ಇಡೀ ಮಾಧ್ಯಮಕ್ಕೆ ಅದರಲ್ಲೂ ವಿಶೇಷವಾಗಿ ಇಂಗ್ಲಿಷ್ ಮಾಧ್ಯಮಕ್ಕೆ ಕರುಳು ಚುರುಕ್ ಅನ್ನುತ್ತದೆ. ಜೆಸ್ಸಿಕಾ ಲಾಲ್, ಆರುಷಿ ಪ್ರಕರಣದಲ್ಲಿ ಇಡಿ ಸಮಾಜವನ್ನೇ ಅನ್ಯಾಯದ ವಿರುದ್ಧ ಜಾಗೃತಗೊಳಿಸುವಲ್ಲಿ ಶ್ಲಾಘನೀಯ ಕೆಲಸವನ್ನೇ ಮಾಡಿದ ಮಾಧ್ಯಮಗಳು ಅಂಥ ಶಕ್ತಿಗಳಿಂದ ಭೀಕರವಾಗಿ ಕೊಲೆಯಾದ ಬಡ ದಲಿತರನ್ನು ಸುದ್ದಿಗೂ ಅರ್ಹವೆಂದು ಪರಿಗಣಿಸುವುದಿಲ್ಲವೇಕೆ? ಪಬ್‌ನಲ್ಲಿ ಮೇಲ್‌ಮಧ್ಯಮ ವರ್ಗದ ಮಹಿಳೆಯರು ತಿಂದದ್ದೂ ಒದೆಗಳು. ಅದು ಖಂಡನಾರ್ಹ. 18 ನಿಮಿಷಕ್ಕೊಂದು ಅತ್ಯಾಚಾರ, ದಿನಕ್ಕೆರಡು ಕೊಲೆಗಳಂತೆ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ಹೋಲಿಸಿದರೆ ಮಂಗಳೂರಿನಲ್ಲಿ ನಡೆದದ್ದು ಸಣ್ಣ ವಿಷಯ ಅನಿಸಿದರೆ ತಪ್ಪೇನು? ಪಬ್‌ನಲ್ಲಿ ಕುಡಿಯುವುದು ಮಹಿಳೆಯ ಸ್ವಾತಂತ್ರ್ಯ-ಅದಕ್ಕೆ ಅಡ್ಡಿ ಪಡಿಸುವ ಅಧಿಕಾರ ಶ್ರೀರಾಮಸೇನೆಗೆ ಕೊಟ್ಟವರ್ಯಾರು ಎಂದು ಮಾಧ್ಯಮದವರು ಕೇಳುತ್ತಿರುವ ಪ್ರಶ್ನೆ ಸರಿಯಾದದ್ದೇ. ಅದಕ್ಕಾಗಿ ಅವರು ತಮ್ಮ ಪ್ರಸಾರ ಸಮಯದ ಬಹುಪಾಲನ್ನು ಎತ್ತಿಟ್ಟಿರುವುದು ಸರಿಯೇ. ಆದರೆ ಅದೇ ರೀತಿ "ಹಾಜಬ್ಬ, ಹಸನಬ್ಬ ಕಾನೂನುಬದ್ಧವಾಗಿ ದನಗಳ ವ್ಯಾಪಾರ ಮಾಡುತ್ತಿದ್ದದ್ದು ಅವರ ಹಕ್ಕು, ಅವರನ್ನು ಬೆತ್ತಲು ಮಾಡಿ ಥಳಿಸಲು ಭಜರಂಗ ದಳಕ್ಕೆ ಅಧಿಕಾರ ಕೊಟ್ಟವರು ಯಾರು" ಎಂದೂ ಮಾಧ್ಯಮಗಳು ಕೇಳಬೇಕಿತ್ತಲ್ಲವೇ?

ಇದೇ ಕರಾವಳಿಯಲ್ಲಿ ಬಡ, ಮಧ್ಯಮ ವರ್ಗದ ಮುಸ್ಲಿಂ ಮತ್ತು ಹಿಂದೂ ಹೆಣ್ಣು ಮಕ್ಕಳು ಮಾತಾಡುತ್ತಿದ್ದರೆ ಅವರ ಮೇಲೆ ದಾಳಿ ಮಾಡಿ ಕೆಲವು ಹೆಣ್ಣು ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದಾಗಲೂ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಾಡಿದ ಧಕ್ಕೆ ಎಂದು ಮಾಧ್ಯಮಗಳು ಮತ್ತು ಮೇಲ್ ಮಧ್ಯಮ ವರ್ಗದವರು ಮತ್ತು ನಗರದ ಕ್ಯಾಂಡಲ್ ಪ್ರೊಟೆಸ್ಟ್‌ವಾಲಾಗಳು ಪ್ರತಿಭಟಿಸಬೇಕಿತ್ತಲ್ಲವೇ?

ಈಗಲಾದರೂ ಆ ಪ್ರಜ್ಞೆ ಎಲ್ಲಾ ವರ್ಗಗಳಲ್ಲೂ ಮತ್ತು ಮಾಧ್ಯಮಗಳಲ್ಲೂ ಬರಬೇಕಿದೆ. ಈ ಹಿಂದೂತ್ವವಾದಿ ಫ್ಯಾಸಿಸ್ಟ್ ಶಕ್ತಿಗಳು ಇಡೀ ಸಮಾಜಕ್ಕೆ, ಸಮಾನತೆ ಮತ್ತು ಸ್ವಾತಂತ್ರ್ಯದ ಮೌಲ್ಯಗಳಿಗೆ ವಿರುದ್ಧವಾಗಿದ್ದಾರೆ. ಖೈರ್ಲಾಂಜಿಯಲ್ಲಿ ಸುರೇಖಾಳನ್ನು ಕೊಂದಾಗ, ಜಜ್ಜೆರಾದಲ್ಲಿ ದಲಿತರನ್ನು ಹೊಡೆದು ಸಾಯಿಸಿದಾಗ, ಹಾಜಬ್ಬ ಹಸನಬ್ಬರನ್ನು ಬೆತ್ತಲು ಮಾಡಿದಾಗಲೇ ಮಾಧ್ಯಮಗಳು ಮತ್ತು ಇಡೀ ನಾಗರಿಕ ಸಮಾಜ ಎಚ್ಚೆತ್ತುಕೊಂಡಿದ್ದರೆ ಪಬ್ ದಾಳಿ ನಡೆಯುತ್ತಿರಲಿಲ್ಲ.

ಇದೇ ಫೆಬ್ರವರಿ 14ರಂದು ರಾಖಿ, ತಾಳಿ ಇಟ್ಟುಕೊಂಡು ಪುರೋಹಿತರೊಡನೆ ಗಸ್ತು ತಿರುಗುವುದಾಗಿ ಇದೇ ಫ್ಯಾಸಿಸ್ಟ್ ಶಕ್ತಿಗಳು ಘೋಷಿಸಿವೆ. ಈ ಮನುವಿನ ಸೇನಾನಿಗಳು ಇತಿಹಾಸದುದ್ದಕ್ಕೂ ಮಹಿಳೆಯರ ಮೇಲೆ ಭಯೋತ್ಪಾದನೆ ಮಾಡಿರುವುದು ರಾಖಿ ಮತ್ತು ತಾಳಿಗಳಿಂದಲೇ! ಈ ಪುಂಡರೇ ಹುಬ್ಬಳ್ಳಿಯಲ್ಲಿ, ಮಾಲೆಗಾಂವ್‌ನಲ್ಲಿ ಅಲ್ಪಸಂಖ್ಯಾತರ ಮೇಲೆ ಬಾಂಬ್ ಸಿಡಿಸಿ ಭಯೋತ್ಪಾದನೆ ನಡೆಸುತ್ತಿದ್ದಾರೆ. ಮೇಲ್ ವರ್ಗದ ಸಮಾಜ ರಾಖಿ-ತಾಳಿ ಭಯೋತ್ಪಾದನೆಯ ವಿರುದ್ಧ ಒಂದಾಗುವಂತೆ ಇತರ ಭಯೋತ್ಪಾದನೆಯ ವಿರುದ್ಧವೂ ಒಂದಾಗಬೇಕು. ಅಲ್ಲವೇ? ■

No Comments

"ಎಲ್ಲಾ ಧರ್ಮಗಳ ಸಾರ ಒಂದೇ. ಆದರೆ ಪುರೋಹಿತರು ಮತ್ತು ಪಂಡಿತರು ತಾವು ಹೇಳುವುದೇ ನಿಜವೆಂದು ನಂಬಿಸುತ್ತಾರೆ.".

- ಪಂಡಿತಾರಾಧ್ಯ ಸ್ವಾಮಿಗಳು

"ಹಿಂದೆ ಪ್ರಶಸ್ತಿಗಳನ್ನು ಕೊಡುತ್ತಿದ್ದರು. ಈಗ ನಾವೇ ಪಡೆದುಕೊಳ್ಳುವ ಪರಿಸ್ಥಿತಿ ಬಂದಿದೆ."

- ರಮೇಶ್ ಭಟ್

"ಶಾಸ್ತ್ರೀಯ ಭಾಷೆ ಎಂದರೇನು ಅನ್ನುವುದೇ ಯಾರಿಗೂ ಗೊತ್ತಿಲ್ಲ. ಮೊದಲು ಕನ್ನಡ ಉಳಿಯುತ್ತದಾ ಎಂಬ ಪ್ರಶ್ನೆ ಕೇಳಿಕೊಳ್ಳೋಣ. ಕಳೆದುಹೋದ ಪ್ರಾಂತ್ಯಗಳನ್ನು ಮರಳಿ ಪಡೆದುಕೊಳ್ಳುವುದಕ್ಕಿಂತ ಇರುವ ಪ್ರಾಂತ್ಯಗಳನ್ನು ಉಳಿಸಿ-ಬೆಳೆಸುವುದು ಮುಖ್ಯ."

- ಕೋ. ಚನ್ನಬಸಪ್ಪ

"ಈ ಮುತಾಲಿಕ್ ಬೇಕಾದಾಗಲೆಲ್ಲಾ ನಮ್ಮ ಹುಡುಗನನ್ನು ಕರೆಸಿಕೊಳ್ಳುತ್ತಾ ಬಳಸಿಕೊಳ್ಳುತ್ತಿದ್ದರು. ಈಗ ತನಗೂ ಅವರಿಗೂ ಸಂಬಂಧವೇ ಇಲ್ಲ ಎನ್ನುತ್ತಿದ್ದಾರೆ."

- ಹುಬ್ಬಳ್ಳಿ ಬಾಂಬ್ ಬ್ಲಾಸ್ಟ್ ಕೇಸಿನಲ್ಲಿ ಬಂಧಿತನಾಗಿರುವ ಶ್ರೀ ರಾಮ ಸೇನೆಯ ಕಾರ್ಯಕರ್ತ ನಾಗರಾಜ ಜಂಬಗಿ ಅವರ ತಾಯಿ

ನಂಬಿದರೆ ನಂಬಿ ಬಿಟ್ರೆಬಿಡಿ



"ಗುರುಪಾದಪ್ಪ ನಾಗಮಾರಪಲ್ಲಿಯವರು ಆಪರೇಷನ್ ಕಮಲದ ಕಾರಣಕ್ಕಾಗಿ ಬಿಜೆಪಿ ಸೇರಿದವರಲ್ಲ, ಅವರು ಬಿಜೆಪಿಯ ಚಿಂತನೆಗಳನ್ನು ಒಪ್ಪಿಕೊಂಡೇ ನಮ್ಮ ಪಕ್ಷ ಸೇರಿದ್ದಾರೆ."

- ಯಡಿಯೂರಪ್ಪ

"ನನ್ನ ಐವತ್ತು ವರ್ಷಗಳ ರಾಜಕೀಯ ಜೀವನದಲ್ಲಿ ನಾನೆಂದಿಗೂ ನ್ಯಾಯಾಂಗ ನಿಂದನೆಯಾಗುವಂತಹ ರಾಜಕಾರಣ ಮಾಡಿಲ್ಲ."

- ದೇವೇಗೌಡ

"ಸರ್ಕಾರದ ಹೊಸ ಆದೇಶದ ಪ್ರಕಾರ ಅಂತರ್ಜಾತಿ ವಿವಾಹವಾದಲ್ಲಿ ತಂದೆ ಪರಿಶಿಷ್ಟ ಜಾತಿಗೆ ಸೇರಿದ್ದರೆ ಮಾತ್ರ ಅವರ ಮಕ್ಕಳಿಗೆ ಪರಿಶಿಷ್ಟ ವರ್ಗದ ಪ್ರಮಾಣಪತ್ರ ನೀಡಲಾಗುವುದು. ಏಕೆಂದರೆ ಕುಟುಂಬದಲ್ಲಿ ತಂದೆಯ ಪ್ರಭಾವ ಜಾಸ್ತಿ ಇರುತ್ತದೆ."

- ಯಡ್ಡಿ ಸರ್ಕಾರದ ಹೊಸ ಆದೇಶ



"ಮಕ್ಕಳ ಚಿತ್ರಗಳಿಗೆ ಪ್ರಶಸ್ತಿ ಕೊಡಲು ಮಕ್ಕಳದ್ದೇ ತೀರ್ಪುಗಾರರ ಸಮಿತಿ ಇರಬೇಕು."

- ನಂಜುಂಡೇಗೌಡ, "ನಾನೇ ಗಾಂಧಿ"? ಚಿತ್ರ ನಿರ್ದೇಶಕ

"ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ ಮತ್ತು ಸಂಘಟಿಸಿದ ನನ್ನ ಹಲವಾರು ವರ್ಷಗಳ ಅನುಭವದಲ್ಲಿ ಇಷ್ಟು ಅವ್ಯವಸ್ಥಿತವಾದ ಸಮ್ಮೇಳನವನ್ನು ನಾನು ಎಲ್ಲಿಯೂ ನೋಡಿರಲಿಲ್ಲ. ಮತ್ತು ಇದಕ್ಕೆ ಪ್ರಧಾನ ಕಾರಣ ಈ ಜಿಲ್ಲೆಯ ಎರಡು ಮಠಾಧೀಶರ ನಡುವಿನ ವೈಮನಸ್ಯವೇ!"

- ಚಂಪಾ, ಚಿತ್ರದುರ್ಗದ ಸಾಹಿತ್ಯ ಸಮ್ಮೇಳನದ ಬಗ್ಗೆ

ವರ್ಣಾಶ್ರಮ ಪಾಲನೆಗೆ ಹೊಸ ನೆಪ!

"ಮಗುವಿನ ಕೌಶಲ್ಯಕ್ಕೆ ಮತ್ತು ಪ್ರತಿಭೆಗೆ ತಕ್ಕಂತೆ ಶಿಕ್ಷಣ ಕೊಡಲು ಸರ್ಕಾರ ಸಿದ್ಧವಾಗುತ್ತಿದೆ."

-ವಿಶ್ವೇಶ್ವರ ಹೆಗಡೆ ಕಾಗೇರಿ

ಪ್ರೇಮ-ಪಾಶ- ಮತ್ತು ಪಾಶವೀ ಮುತಾಲಿಕ

"ಈ ಮುತಾಲಿಕ ಅವಿವಾಹಿತ. ಪ್ರೀತಿ, ಪ್ರೇಮದ ಬಗ್ಗೆ ಅವನಿಗೇನೂ ತಿಳಿಯುವುದಿಲ್ಲ, ಅವನೊಬ್ಬ ಫ್ಯಾಸಿಸ್ಟ್ ಗೂಂಡಾ!"

- ರೇಣುಕಾ ಚೌಧರಿ

ಎಂಟು ವರ್ಷಕ್ಕೆ ಮಗ ದಂಟು ಅಂದ್ಹಂತೆ

"ಎಲ್ಲಿಯವರೆಗೆ ಭಾರತದಲ್ಲಿ ಸಂವಿಧಾನ ಅಸ್ತಿತ್ವದಲ್ಲಿರುತ್ತದೋ ಅಲ್ಲಿವರೆಗೆ ಬಿಜೆಪಿಯ ಭಯೋತ್ಪಾದನಾ ವಿರೋಧಿ ಜಾಗೃತಿ ಅಭಿಯಾನದ ವಿರುದ್ಧ ಕಾಂಗ್ರೆಸ್ಸಿನ ಹೋರಾಟ ಹತ್ತಿಕ್ಕಲು ಯಾರಿಂದಲೂ ಸಾಧ್ಯವಿಲ್ಲ."

- ಮಲ್ಲಿಕಾರ್ಜುನ ಖರ್ಗೆ

ಸಾಮ್ರಾಜ್ಯಶಾಹಿಗಳ ಸಾಮಂತ-ಸಪ್ತರಾಷ್ಟ್ರಗಳ ಸಾಮ್ರಾಟ

"ಸಾಮ್ರಾಜ್ಯಶಾಹಿಗಳು ಎಂದರೆ ನಾವು ಪಾಶ್ಚಿಮಾತ್ಯ ರಾಷ್ಟ್ರಗಳತ್ತ ಬೊಟ್ಟು ಮಾಡಿ ತೋರಿಸುತ್ತೇವೆ. ಆದರೆ ಶ್ರೀಲಂಕಾ, ನೇಪಾಳ, ಬಾಂಗ್ಲಾ ದೇಶಗಳ ಪಾಲಿಗೆ ಭಾರತವೂ ಒಂದು ಪುಟ್ಟ ಸಾಮ್ರಾಜ್ಯಶಾಹಿಯಂತೆಯೇ ವರ್ತಿಸುತ್ತದೆ."

- ದಿನೇಶ್ ಅಮೀನ್ ಮಟ್ಟು, ಪತ್ರಕರ್ತ

ಬಿದ್ದರೂ ಮೀಸೆ ಮಣ್ಣಾಗದೆನ್ನುವರಿಗೆ ಕೈಲಾಸವೂ ದೊರಕದಯ್ಯಾ!

"ಚಿತ್ರದುರ್ಗ ಸಾಹಿತ್ಯ ಸಮ್ಮೇಳನದಲ್ಲಿ ಮಠಗಳೇ ಮುಖ್ಯ ಪಾತ್ರ ವಹಿಸಿವೆ ಎನ್ನುವುದು ಗೊತ್ತಿದ್ದರೂ ಎಲ್. ಬಸವರಾಜುರವರು ಅಧ್ಯಕ್ಷಗಿರಿಗೆ ಒಪ್ಪಿಕೊಂಡಿದ್ದು ಏಕೆ?"

- ತರಳಬಾಳು ಮಠದ ಸ್ವಾಮಿಗಳು

ಆದರೆ ಅರ್ಥಶಾಸ್ತ್ರದ ಯಾವ ತರ್ಕವೂ ಐಟಿಗೆ ಅನ್ವಯಿಸುವುದಿಲ್ಲ ಎಂದಿದ್ದಿರಲ್ಲಾ ಸ್ವಾಮಿ?!

"ಕಂಪನಿಯ ಆದಾಯಕ್ಕೆ ತಕ್ಕಂತೆ ನೌಕರರ ಸಂಬಳವೂ ಇರುತ್ತದೆ. ಆದಾಯ ತಗ್ಗಿದರೆ ವೇತನ ಕಡಿಮೆಯಾಗುವುದು ಸಹಜವಲ್ಲವೇ?"

- ಮೋಹನ್ ದಾಸ್ ಪೈ, ಇನ್ಫೋಸಿಸ್ ಮುಖ್ಯಸ್ಥ


..ಸವರಾಜು ಅವರಿಗೆ ಗೌರವದ, ಪ್ರೀತಿಯ ಧನ್ಯವಾದಗಳು



ಕಂಡಹಾಗೆ

■ ಗೌರಿ ಲಂಕೇಶ್

..ಶಿಪಾರ ಅವ್ಯವಸ್ಥೆಗಳಿಂದ ಕೂಡಿದ್ದ 75 ನೇ ಅಖಿಲ ..ಕನ್ನಡ ಸಾಹಿತ್ಯ ಸಮ್ಮೇಳನ ಎಲ್ಲಾ ಪ್ರತಿಭಟನೆ, ..ರೋಧ ಮತ್ತು ಧಿಕ್ಕಾರಗಳೊಂದಿಗೆ ಅಂತ್ಯಗೊಂಡಿದೆ. ..ರ್ಗದ ಸೆಖೆ ತಡೆಯಲಾರದೆ, ಊಟವಿಲ್ಲದೆ ..ನ್ನು ಸಹಿಸಲಾರದೆ, ಮೈಚಾಚಿ ನಿದ್ರಿಸಲು ಒಂದು ..ಯೂ ಇಲ್ಲದೆ ಕಂಗಾಲಾದ ಜನ ಎಷ್ಟು ತೀವ್ರವಾಗಿ ..ಟಿಸಿ ದರೆಂದರೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಲ್ಲೂರ್ ..ಶ್ ಅವರು ಮಾಫಿಯಾ ಡಾನ್‌ನಂತೆ ಪೊಲೀಸರ ..ವಾವ ಲಿನಲ್ಲಿ ಸುತ್ತಾಡಬೇಕಾ.. ಇನ್ನು ಜಿಲ್ಲಾ ಕಸಾಪ ..ಕ್ಷ ವೀರೇಶರ ಪಾಡು ..ಗೂ ಬೇಡ ಬಿಡಿ.. ಜನರಿಂದ ..ಟಕ್ಕೆ ಗುರಿಯಾದ ವೀರೇಶ್ ..ಕ್ಷಣೆಗೆ ಕೆಲಕಾಲ ಗಾಯಬ್ ..ಕಾಯಿತು.



..ಒಂದೆಡೆ ಸಾಹಿತ್ಯ ಸಮ್ಮೇಳನ ..ದಲೇ ಜನ ನಮ್ಮ ಆಫೀಸಿಗೆ ..ನ್ ಮಾಡಿ 'ಲಂಕೇಶ್ ..ನ'ದ ಮಳಿಗೆ ಎಲ್ಲಿದೆ ಎಂದು ..ಸುತ್ತಿದ್ದರೆ, ಇನ್ನೊಂದೆಡೆ ..ಳನದಲ್ಲಿ ಭಾಗವಹಿಸಲು ಹೋಗಿದ್ದ ಕೆಲ ಮಿತ್ರರು ..ಪರಿಸ್ಥಿತಿಯನ್ನು ಕಂಡು ಫೋನ್ ಸಂಭಾಷಣೆಯನ್ನು ..ಸಲಾಗದಷ್ಟು ಹೈರಾಣಾಗಿದ್ದರು.

..ಆದರೆ ಇದೆಲ್ಲದರ ನಡುವೆ ಸಮ್ಮೇಳನಾಧ್ಯಕ್ಷ ಎಲ್. ..ರಾಜು ಅವರು ನೇರ ಮತ್ತು ನಿಷ್ಠುರವಾಗಿ ಮಾತಾಡಿ ..ಸಮ್ಮೇಳನವನ್ನು ಸಾರ್ಥಕ ಮಾಡಿದ್ದಾರೆ. ದಲಿತರ ..ಶೋಷಿತರ ಪರವಾಗಿ, ಭ್ರಷ್ಟ ರಾಜಕಾರಣಿಗಳ ..ಸ್ವಜಾತಿ ಹಿತಾಸಕ್ತಿಯನ್ನು ಮಾತ್ರ ಹೊಂದಿರುವ ..ಧೀಶರ ವಿರುದ್ಧವಾಗಿ ಮಾತನಾಡಿರುವ ಬಸವರಾಜು ..ಸಮಾಜದೊಂದಿಗೆ ಸಾಹಿತ್ಯದ ನಂಟನ್ನು ಗಟ್ಟಿಗೊಳಿ..ಸಿ. ಬರೀ 'ಸಿರಿಗನ್ನಡಂ ಗೆಲ್ಗೆ' ..ಘೋಷಣೆ ಕೂಗಿದರೆ ..ದು, ಕನ್ನಡದ ಬಡಮಕ್ಕಳಿಗೆ ..ತ ಶಿಕ್ಷಣ ನೀಡಿ ಅವರ ಏಳ್ಗೆಗೆ ..ಯತ್ನಿಸಿದರೆ ಮಾತ್ರ ಕನ್ನಡ ..ದ್ಧಾರವಾಗುತ್ತದೆ ಎಂದಿದ್ದಾರೆ.



..ಹಿರಿಯ ಸಂಶೋಧಕ ಬಸವ..ರಾಜು ಅವರ ಬಗ್ಗೆ ನಾನು ..ದ್ದೆನಾದರೂ ಅವರನ್ನೆಂದೂ ..ಯವಾಗಿಲ್ಲ. ಈಗಲೂ ಅವರನ್ನು ..ಕ್ಷತಃ ನೋಡಿರದಿದ್ದರೂ ಅವರ ..ಎಷ್ಟು ಪರಿಚಯವಾಗಿದೆ. ಹೇ.. ಅಂತೀರಾ?

..ಕಳೆದ ವಾರ ಬರೆದಂತೆ ಬಸವರಾಜು ಅವರನ್ನು ..ತಂತೆ ಪುಸ್ತಕವೊಂದನ್ನು ಪ್ರಕಟಿಸಲು ಮುಂದಾದಾಗ ..ರನ್ನು ಕುರಿತು ವಿವಿಧ ಲೇಖಕರು ಬರೆದ ಲೇಖನ..ಗಳನ್ನು ಓದಿದಾಗ ಅವರ ಕಾಳಜಿ ಮತ್ತು ವ್ಯಕ್ತಿತ್ವದ ಬಗ್ಗೆ ..ತಿಳಿದುಕೊಂಡೆ.

..ಸಾಹಿತ್ಯ ಸಮ್ಮೇಳನದ ಸಂದರ್ಭಕ್ಕೆ ಸರಿಯಾಗಿ ..ಸ್ತಕವೊಂದನ್ನು ಪ್ರಕಟಿಸಿದ್ದು ನಮ್ಮ ಸಂಸ್ಥೆಯ 28 ..ರ್ಷಗಳ ಇತಿಹಾಸದಲ್ಲಿ ಇದೇ ಮೊದಲು! ಕನ್ನಡ ..ಹಿತ್ಯ ಪರಿಷತ್ತು ಮತ್ತು ಅದು ಪ್ರತಿ ವರ್ಷ ನಡೆಸುವ ..ಹಿತ್ಯ ಸಮ್ಮೇಳನಗಳ ಬಗ್ಗೆ ಅಪ್ಪನಿಗೆ ಭಿನ್ನಾಭಿಪ್ರಾಯಗಳಿದ್ದ ..ಣ ಅವರೆಂದೂ ಇಂತಹ ಕಾರ್ಯಕ್ಕೆ ಮುಂದಾಗಿರಲಿಲ್ಲ.

.. 1990 ರಲ್ಲಿ ಅಪ್ಪ ಬರೆದಿದ್ದ 'ಸಾಹಿತ್ಯ ಪರಿಷತ್ತು ..ಮತ್ತು ಸಾಹಿತಿಗಳು' ಎಂಬ ಲೇಖನದಲ್ಲಿ ('ಸಾಹಿತಿ, ..ಸಾಹಿತ್ಯ ವಿಮರ್ಶೆ' ಪುಸ್ತಕ, ಲಂಕೇಶ್ ಪ್ರಕಾಶನ, ಪುಟ 252) ಪರಿಷತ್ತಿನ ಆರಂಭಿಕ ಆಶಯಗಳನ್ನು ಮೆಚ್ಚಿದ್ದರೂ ಆನಂತರ ಅದರಲ್ಲಿ ನಡೆದ ಸೆಣಸಾಟ, ಹೊಡೆದಾಟ, ಜಾತಿ ರಾಜಕೀಯ ಇತ್ಯಾದಿಗಳು ಆ ಸಂಸ್ಥೆಯ ಬಗ್ಗೆ ಬೇಸರಗೊಂಡಿದ್ದರ ಬಗ್ಗೆ ಹೇಳುತ್ತಾರೆ.

"ಸಾಹಿತ್ಯ ಪರಿಷತ್ತು ಮತ್ತು ಸಮ್ಮೇಳನಗಳಲ್ಲಿ ಆದ ಜಗಳಗಳು, ವಿವಾದ, ಹಗರಣಗಳು ಇವೆಲ್ಲವನ್ನು ನೋಡುತ್ತಿದ್ದ ಸೂಕ್ಷ್ಮ ಮನಸ್ಸಿನ ಸಾಹಿತಿಗಳಲ್ಲಿ ಅಸಹ್ಯ ಹುಟ್ಟಿಸಿದವು. ಸಾಹಿತಿಗಳೆಂದರೆ ಲಜ್ಜೆಯ, ಘನತೆಯ ವ್ಯಕ್ತಿಗಳು ಎಂದು ತಿಳಿದಿದ್ದವರಿಗೆ ದಿಗ್ಭ್ರಮೆಯಾಯಿತು. ಸಾಹಿತ್ಯ ಮೂಲಭೂತವಾಗಿ ನಿಷ್ಪಕ್ಷಪಾತವಾದದ್ದು ಎಂದು ತಿಳಿದವರಿಗೆ ಸಾಹಿತ್ಯದ ಇತರೆ ಮುಖಗಳು ಕಾಣತೊಡಗಿದವು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಾಜಕೀಯ ಮುಖಂಡನಂತೆ ಮೆರೆಯತೊಡಗಿದರೆ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಉತ್ಸವ ಮೂರ್ತಿಯಾಗಿ ವಿಜೃಂಭಿಸತೊಡಗಿದ... ರಾಜಕೀಯ ಚುನಾವಣೆಯ ಕೊಳಕುತನವನ್ನೆಲ್ಲ ಮೀರಿಸತೊಡಗಿದ ಪರಿಷತ್ತು ಎಲ್ಲರ ತಾತ್ಸಾರಕ್ಕೆ ಗುರಿಯಾಗತೊಡಗಿತು" ಎಂದು ಅಪ್ಪ ಅದೇ ಲೇಖನದಲ್ಲಿ ಬರೆದಿದ್ದಾರೆ.

ಕನ್ನಡಿಗರಲ್ಲಿ ಯಾವುದೇ ಸ್ಫೂರ್ತಿ, ಭರವಸೆ ಮೂಡಿಸಲಾಗದಂತಹ ಅವಸ್ಥೆಯ ಮಟ್ಟಕ್ಕೆ ಪರಿಷತ್ ಇಳಿದಾಗ ಅಪ್ಪ ಮತ್ತು ಇತರ ಸಾಹಿತಿಗಳಿಗೆ ಉಳಿದಿದ್ದ ಮಾರ್ಗ 'ಜಾಗೃತ ಸಾಹಿತ್ಯ ಸಮಾವೇಶ'ವನ್ನು ಪ್ರತ್ಯೇಕವಾಗಿ ಏರ್ಪಡಿಸುವುದು.

ಫೆಬ್ರವರಿ 16, 1990 ರಲ್ಲಿ ನಡೆದ ಈ 'ಜಾಗೃತ ಸಾಹಿತ್ಯ ಸಮಾವೇಶ' ವನ್ನು ಅಪ್ಪ ಉದ್ಘಾಟಿಸಿ ಮಾಡಿದ ಭಾಷಣದ ಕೆಲ ಮುಖ್ಯ ಸಾಲುಗಳನ್ನು ಇಲ್ಲಿ ನೀಡುತ್ತಿದ್ದೇನೆ.

"ರಾಜ್ಯಭಾಷೆ ಬಹುಸಂಖ್ಯಾತ ಜನರ ಮಾತೃಭಾಷೆ, ಆಡಳಿತ ಭಾಷೆ, ವ್ಯವಹಾರ ಭಾಷೆ-ಅದು ನಮ್ಮಲ್ಲಿ ಕನ್ನಡ; ಹಾಗೆಯೇ ಬಳ್ಳಾರಿಯ ಒಂದು ಹಳ್ಳಿಯೊಂದರಲ್ಲಿ ವಾಸಿಸುವ ತೆಲುಗರ ಆಡಳಿತ ಭಾಷೆ, ವ್ಯವಹಾರ ಭಾಷೆ ಕನ್ನಡ; ಅಂತೆಯೇ ಅವರೆಲ್ಲರ ಮಾತೃಭಾಷೆಯನ್ನು ನಾಶಮಾಡುವುದು ಕರ್ನಾಟಕ ಆಡಳಿತದ ಉದ್ದೇಶವಾಗಕೂಡದು.

ಒಂದು ರಾಜ್ಯಪೂರ್ಣ ಸಾಕ್ಷರತೆಯತ್ತ ಸಾಗಿದೆ ಎಂದರೆ ಅರ್ಥ, ಇಲ್ಲಿಯ ಎಲ್ಲ ವರ್ಗ, ಜಾತಿಯ ಜನರಿಗೆ ಹೊಸತೊಂದು ಶಕ್ತಿ, ಹೊಸತೊಂದು ಚೈತನ್ಯ ಬಂದಿದೆ ಎಂಬುದು; ಹಾಗೆಯೇ, ಮುಂದುವರಿದ ಜಾತಿಗಳ ಸ್ವತ್ತಾಗಿದ್ದ ನೆನಪನ್ನು ದಾಖಲಿಸುವ, ಅನುಭವವನ್ನು ನಮೂದಿಸುವ, ಗ್ರಂಥಗಳನ್ನು ರಚಿಸುವ ಬರವಣಿಗೆಯ ಸವಲತ್ತು ದಲಿತರಿಗೆ ಹಿಂದುಳಿದವರಿಗೆ ಕೂಡ ದೊರೆತಿದೆ ಎಂಬುದು; ಹಾಗೆಯೆ ಲಕ್ಷಾಂತರ ವರ್ಷಗಳಿಂದ ನೋವು, ಅವಮಾನ, ಅನುಭವಿಸಿದ ಜನತೆಗೆ ಆತ್ಮವಿಶ್ವಾಸ, ಆತ್ಮಗೌರವ ದೊರೆತು ಹಲವಾರು ಅರ್ಥಪೂರ್ಣ ಅನುಭವಸ್ಥರುಗಳೊಂದಿಗೆ ಸಾಂಸ್ಕೃತಿಕ, ರಾಜಕೀಯ ಕ್ರಿಯೆಯಲ್ಲಿ ಭಾಗವಹಿಸುವುದು ಸಾಧ್ಯವಾಗಿದೆ ಎಂಬುದು.

ಒಂದು ಅನಕ್ಷರಸ್ಥ ದಲಿತ ಕುಟುಂಬ, ಹಿಂದುಳಿದವರ ಕುಟುಂಬ ಈ ವಲಯಗಳಲ್ಲಿ ಅನುಭವಿಸುವ ದಿಗ್ಭ್ರಮೆ ಅವರಿಗೆ ಮಾತ್ರ ಗೊತ್ತಾಗುವಂಥದು. ಮೀಸಲಾತಿ ವಿರೋಧಿಸುವ, ಇವರ ಕಷ್ಟಗಳನ್ನು ಅರ್ಥಮಾಡಿಕೊಳ್ಳದ ಜನರಿಂದಲೇ ಈ ಬಗೆಯ ದಿಗ್ಭ್ರಮೆ ಹುಟ್ಟಿದೆ ಮತ್ತು ಈ ಜನರಿಂದಲೇ ಇವತ್ತು ಏನನ್ನೂ ಮಾಡಲಾರದ ಸ್ಥಿತಿಯನ್ನು ಸರ್ಕಾರಗಳು ತಲುಪಿವೆ. ಸರ್ಕಾರ, ಸಾಂಸ್ಕೃತಿಕ ವ್ಯವಸ್ಥೆ ನೇರಗೊಳ್ಳದೆ ಇಲ್ಲಿ ಅಸಹಾಯಕರಿಗೆ ನೆಮ್ಮದಿ, ಕನ್ನಡದ ಸಂಪೂರ್ಣ ವಿಕಾಸ ಕಷ್ಟಸಾಧ್ಯ.

ಈ ಸಮಾವೇಶ ಐತಿಹಾಸಿಕ ಎಂದು ನಾನಂತೂ ತಿಳಿದಿದ್ದೇನೆ. ನಿಜಕ್ಕೂ ಕ್ರಿಯಾಶೀಲ ಸಾಹಿತಿಗಳಾಗಿರುವ, ಸಂಶೋಧಕರಾಗಿರುವ ಎಲ್ಲ ಜಾತಿ, ಹಿನ್ನೆಲೆಯ ಜನ ಒಂದೆಡೆ ಸೇರಿ ಚರ್ಚಿಸುವುದು, ಕೃತಿಗಳ, ಸಂಶೋಧನೆಯ ಬೆಲೆ ಕಟ್ಟುವುದು ಅಗತ್ಯವಾಗಿದೆ. ಹಿಂದುಳಿದವರು, ದಲಿತರು ತಮ್ಮ ತಮ್ಮ ಕೃತಿಗಳನ್ನು ತಮ್ಮ ತಮ್ಮ ಮಾನದಂಡಕ್ಕೆ ತಕ್ಕಂತೆ ನಿರ್ಧರಿಸುವ ದಕ್ಕೆ ಬದಲು ತಮ್ಮಿಂದ ಹೊರತಾದ ಮಾಪನದ ಸವಾಲು ಎತ್ತಿಕೊಳ್ಳಬೇಕಾಗಿದೆ. ಅಂತೆಯೇ ಈ ಸಮಾಜಕ್ಕೆ ಪರಂಪರಾಗತವಾಗಿ ಬಂದಿರುವ ಅಂಧತ್ವವನ್ನು ಎಲ್ಲರೂ ಗಮನಿಸಬೇಕಾಗಿದೆ. ಪರಕೀಯರ ಆಕ್ರಮಣ, ದಬ್ಬಾಳಿಕೆಯಿಂದ ತತ್ತರಿಸಿಹೋದ ಜನರು ಜಾತೀಯತೆಯ ಸ್ವಾನ್ಸ್ಪುಟ್ಟ ಗುಂಪಿನ ರಕ್ಷಣೆಯಲ್ಲಿ ಇದ್ದದ್ದನ್ನು ಹೇಗಾದರೂ ಮಾಡಿ ಕಾಪಾಡಿಕೊಳ್ಳಲು ಯತ್ನಿಸಿದರು. ಹೊಸಬರ ಅಕ್ಷರಾಭ್ಯಾಸ, ಸಂವೇದನೆಯ ವಿಚಾರವೇ ಅವರನ್ನು ಬೆಚ್ಚಿಸಿತು. ಇದರಿಂದ ಸಾಹಿತ್ಯ ಛಂದಸ್ಸು, ವ್ಯಾಕರಣಗಳೆಲ್ಲ ಜೀವಂತ ಅನುಭವದೊಂದಿಗಿನ ಪ್ರಯೋಗಗಳಾಗದೆ ಜಡ ಶಾಸ್ತ್ರಗಳಾದವು. ಸಾಹಿತ್ಯವನ್ನು ನೋಡುವ ಕಣ್ಣು ಕುರುಡಾದವು. ಜಾತಿಯ ವಲಯವನ್ನು ಮೀರಿದ ಸತ್ಯ ಇರಬಹುದೆಂಬುದು ಅವರಿಗೆ ತಿಳಿಯಲೇ ಇಲ್ಲ. ಈ ಕಾರಣಕ್ಕಾಗಿಯೇ ದಲಿತರಿಗೆ, ಹಿಂದುಳಿದವರಿಗೆ ಅವರ ಸದ್ಯದ ಅನ್ನಿಸಿಕೆಯನ್ನು ಮೀರಿದ ಮಾಪನ, ಮೌಲ್ಯ ಇರುವುದು ಗೊತ್ತಾಗಬೇಕಾಗಿರುವಂತೆಯೇ ಪರಂಪರಾಗತ ಅನುಭವಗಳ ಕುರುಡರೂ ತಮ್ಮ ಕಣ್ಣು ತೆರೆದು ತಮ್ಮಿಂದ ಹೊರಗಿರುವ ಮಾಪನವನ್ನು ಗಮನಿಸಬೇಕಾಗಿದೆ. ಅರ್ಜುನ, ಏಕಲವ್ಯರ ಪ್ರತಿಭೆ ಈ ಸತ್ಯದೆದುರು ಅರಳಬೇಕಾಗಿದೆ..

ಸಾಹಿತಿ ವಿಚಿತ್ರ ಸ್ವಾತಂತ್ರ್ಯ ಪ್ರೇಮಿ, ರಾಜಕೀಯ ಹಂಗುತೊರೆದ ನಿಷ್ಠುರ, ಇಲ್ಲಿ ಕೂಡ ಸಾಹಿತಿಯ ದಿಟ್ಟತನ, ನಿಷ್ಠುರತೆಯನ್ನು ಗಮನಿಸುತ್ತಾ ನಾವು ಆತನ ಅಸಹಾಯಕತೆಯನ್ನು ಮರೆಯದಿರೋಣ. ಸಾಹಿತಿ ಮತ್ತು ಸಹೃದಯನ, ಸಾಹಿತಿ ಮತ್ತು ಸಂಶೋಧಕನ, ಸಾಹಿತಿ ಮತ್ತು ಓದುಗನ ಸಂಬಂಧ ಮುಖ್ಯವಾದದ್ದು. ಸಾಹಿತಿಗೆ ನಿಜವಾದ ಕೃತಕೃತ್ಯತೆ ದೊರೆಯುವುದು ಆತ ಈ ಸೇತುವೆಗಳನ್ನು ಕಂಡುಕೊಂಡಾಗ, ತನ್ನ ಅಂತರಾಳದಲ್ಲಿ ಸಲ್ಲುವ ಆತ ಸಹೃದಯನ ಅಂತರ್ಯದಲ್ಲಿ ಸಲ್ಲುವಂತಾದಾಗ. ಆದ್ದರಿಂದಲೇ ಈ ಸಾಹಿತ್ಯ ಸಮಾವೇಶ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ವಿಷಯಗಳನ್ನೆಲ್ಲ ಒಳಗೊಂಡು ಸಾಹಿತ್ಯದಲ್ಲಿನ ವರ್ಣ, ವರ್ಗವನ್ನೆಲ್ಲ ಧ್ಯಾನಿಸುವಂತಾಗಬೇಕು. ಇಲ್ಲಿಯ ಚರ್ಚೆ ಮತ್ತು ವಾದ ಮೈಲುಗಟ್ಟಲೆ ಬಾಹ್ಯವನ್ನು ಕ್ರಮಿಸುವಾಗಲೇ ಸಾಹಿತಿಯ ಪುಟ್ಟ, ಮನೋಹರ, ವ್ಯಸನಗಳ, ನೋವುಗಳ ಜಗತ್ತನ್ನೂ ನೋಡಬೇಕು, ಆಗಲೇ ಕನ್ನಡ ಸಾಹಿತ್ಯ ಕನ್ನಡ ಭಾಷೆಗೆ ಅಮೂಲ್ಯ ಕೊಡುಗೆ ನೀಡುವ ಶಕ್ತಿ ಪಡೆಯುತ್ತದೆ; ವ್ಯಾಕರಣದ. ಬದ್ಧತೆ ಮತ್ತು ಅನುಭವದ ಉಜ್ವಲತೆ ನಮ್ಮದಾಗುತ್ತದೆ. ಎಲ್ಲ ನಿರ್ಜೀವ ಸಂಸ್ಥೆಗಳ ವಿರುದ್ಧ ಸಾಹಿತಿ ಮತ್ತು ಸಾಹಿತ್ಯ ಕೃತಿಗಳ ಸೂಕ್ಷ್ಮಜ್ಞ ಪ್ರತಿಭಟನೆಯಾಗುತ್ತದೆ."

1990 ರಲ್ಲಿ ಅಪ್ಪ ಮಾಡಿದ ಈ ಭಾಷಣದಲ್ಲಿನ ಆಶಯಗಳಿಗೂ, ಮೊನ್ನೆ ಬಸವರಾಜು ಅವರು ಮಾಡಿರುವ ಭಾಷಣದ ಆಶಯಕ್ಕೂ ತುಂಬಾ ವ್ಯತ್ಯಾಸಗಳಿಲ್ಲ ಅನ್ನಿಸುತ್ತದೆ.

ಇಲ್ಲಿ ಎರಡು ಮುಖ್ಯ ಅಂಶಗಳು ನನಗೆ ಕಾಣಿಸುತ್ತಿವೆ. ಮೊದಲನೆಯದು ಅಪ್ಪ ಈ ಆಶಯಗಳನ್ನು ವ್ಯಕ್ತಪಡಿಸಿ ಹತ್ತಿರತ್ತಿರ ಎರಡು ದಶಕಗಳಾಗಿದ್ದರೂ ಪರಿಸ್ಥಿತಿ ಉದ್ಧಾರವಾಗುವ ಬದಲು ಇನ್ನಷ್ಟು ಕೆಟ್ಟಿದೆ. ಅದು ನಿರುತ್ಸಾಹ ತರುವ ಸಂಗತಿ.


ಎರಡನೆಯದು, ಯಾವ ಆಶಯಗಳನ್ನು ಅಂದು ಅಪ್ಪ 'ಪರ್ಯಾಯ' ಸಾಹಿತ್ಯ ಸಮ್ಮೇಳನದಲ್ಲಿ ವ್ಯಕ್ತಪಡಿಸಿದ್ದರೋ, ಅದೇ ಆಶಯಗಳನ್ನು ಇಂದು ಬಸವರಾಜು ಅವರು ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲೇ ವ್ಯಕ್ತಪಡಿಸಿದ್ದಾರೆ. ಅದು ಉತ್ಸಾಹ ತರುವ ಸಂಗತಿಯಾಗಿದೆ.

ಕಾಲ ಬದಲಾದಂತೆ ಪರಿಸ್ಥಿತಿಯೂ ಬದಲಾಗುತ್ತದೆ. ನಿಜ, ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಹಲವು ದಶಕಗಳಿಂದ ಬದಲಾಗಿಲ್ಲ, ಅದರಲ್ಲಿನ ಜಾತಿ ರಾಜಕೀಯ, ಗುದ್ದಾಟಗಳೆಲ್ಲವೂ ಮುಂದುವರೆದಿದೆ. ಆದರೆ ಚಂಪಾ ಅವರು ಅಧ್ಯಕ್ಷರಾದ ಮೇಲೆ ಸ್ವಲ್ಪ ಸುಧಾರಿಸಿದೆ. ಅದಕ್ಕೆ ತಕ್ಕಂತೆ ನಲ್ಲೂರು ಪ್ರಸಾದ್ ತಂಡ ಚಿದಾನಂದ ಮೂರ್ತಿಯಂತಹ ಹಿಂದುತ್ವವಾದಿಯನ್ನು ಈ ಬಾರಿಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡದೆ ಆ ಗೌರವಕ್ಕೆ ಬಸವರಾಜು ಅವರನ್ನು ಆರಿಸಿದ್ದೂ ಸೂಕ್ತವಾಗಿತ್ತು. ಈಗ ಬಸವರಾಜು ಅವರು ಸಾಹಿತಿಗಳಲ್ಲಿ ಮತ್ತು ಸಾಮಾನ್ಯರಲ್ಲಿ ಭರವಸೆ ಮೂಡಿಸಿದ್ದಾರೆ, ಹಾಗೆಯೇ ರಾಜಕಾರಣಿಗಳಿಗೆ ಮತ್ತು ಜಾತಿ ಗುರುಗಳಿಗೆ ಎಚ್ಚರಿಕೆ ನೀಡಿದ್ದಾರೆ. ಜೊತೆಜೊತೆಗೆ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಜನಪರ ಸಂಘಗಳ ಜವಾಬ್ದಾರಿಗಳ ಬಗ್ಗೆಯೂ ಸೂಕ್ಷ್ಮವಾಗಿ ತಿಳಿ ಹೇಳಿದ್ದಾರೆ.

ಮಹಿಳೆಯರ ಮೇಲೆ ಹಲ್ಲೆ ನಡೆಸುವ ಪುಂಡರು, ಚರ್ಚ್‌ಗಳ ಮೇಲೆ ದಾಳಿ ಮಾಡುವ ಚಂಡಾಳರು, ಮುಸಲ್ಮಾನರನ್ನು ಶಂಕಿಸುವ ದೇಶದ್ರೋಹಿಗಳು, ದಲಿತರನ್ನು ಕೀಳಾಗಿ ನೋಡುವ ಪುರೋಹಿತಶಾಹಿಗಳು, ಮತಾಂತರವನ್ನು ವಿರೋಧಿಸುವ ಪೇಜಾವರ, ರಾಘವೇಶ್ವರ ತರಹದ ಕಾವಿ ಹುಂಬರು ಇವತ್ತು ಯಾವ ಲಂಗುಲಗಾಮು ಇಲ್ಲದೆ ಮೆರೆಯುತ್ತಿರುವಾಗ...

90 ರ ಹರೆಯದ ಬಸವರಾಜು ಅವರು ತಮ್ಮ ಮಾತಿನಿಂದಲೇ ಇವರೆಲ್ಲರಿಗೂ ಛಾಟಿ ಏಟನ್ನು ನೀಡಿದ್ದಾರೆ. ಇದರಿಂದ ಈಗಿನ ಯುವ ಸಮುದಾಯ ಸ್ಫೂರ್ತಿಗೊಂಡು ಈಗ ನಿಷ್ಕ್ರಿಯಗೊಂಡಿರುವ ಯುವ, ದಲಿತ, ಮಹಿಳೆಯರ, ರೈತರ ಹೋರಾಟಗಳಿಗೆ ಮತ್ತೆ ಜೀವ ಬಂದರೆ ಎಷ್ಟು ಚೆನ್ನ ಅಲ್ಲವೆ.

ಬಸವರಾಜು ಅವರಿಗೆ ಗೌರವದ, ಪ್ರೀತಿಯ ಧನ್ಯವಾದಗಳು. ■



ಉಳಿದ ಪಕ್ಷಗಳಿಗಿಂತ ಬಿಜೆಪಿ different ಅಲ್ಲವೆ?

ನಮ್ಮ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಎಂಟು ತಿಂಗಳಾಯಿತು. ಈ ಅವಧಿಯಲ್ಲಿ ನಾಡಿನ ಜನತೆಗೆ ಅದೆಷ್ಟು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ, ರಾಜ್ಯವನ್ನು ಎಷ್ಟರಮಟ್ಟಿಗೆ ಅಭಿವೃದ್ಧಿ ಪಡಿಸಿದ್ದಾರೆ ಎಂಬ ವಿವರಗಳನ್ನು ಆಮೇಲೆ ನೋಡೋಣ. ಅದಕ್ಕಿಂತ ಮೊದಲು ಈ ಹಿಂದಿನ ಸಿಎಮ್ಮುಗಳು ಮಾಡಲಾಗದ ಸಾಧನೆಯೊಂದನ್ನು ಅವರು ಮಾಡಿದ್ದಾರೆ. ಅದನ್ನು ನೋಡೋಣ.

ಮುಖ್ಯಮಂತ್ರಿ ಗಾದಿಗೇರಿದ ಕೇವಲ ಎಂಟೇ ತಿಂಗಳಲ್ಲಿ ಅವರು ಹೆಲಿಕಾಪ್ಟರ್‌ನಲ್ಲಿ ಓಡಾಡುವುದಕ್ಕೆ ಮಾಡಿದ ಖರ್ಚು ಕೇವಲ ಎರಡೂವರೆ ಕೋಟಿಗಿಂತ ಹೆಚ್ಚು! ಅಂದರೆ, ಪ್ರತಿ ತಿಂಗಳು ಏನಿಲ್ಲವೆಂದರೂ ಮೂವತ್ತೊಂದುವರೆ ಲಕ್ಷಕ್ಕಿಂತ ಜಾಸ್ತಿ ದುಡ್ಡು ಇದಕ್ಕಾಗಿ ಖರ್ಚಾಗುತ್ತಿದೆ! ತಮ್ಮ ಅಧಿಕಾರಾವಧಿಯಲ್ಲಿ ಯಡ್ಡಿ ಮಾಡಿದ, ಮಾಡುತ್ತಿರುವ ಅತಿದೊಡ್ಡ ಸಾಧನೆ ಪ್ರಾಯಶಃ ಇದೇ ಇರಬೇಕು.

ಈ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಕಾಂಗ್ರೆಸ್‌ನ ಧರ್ಮಸಿಂಗ್ ಮತ್ತು ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿಯವರು ಇಬ್ಬರೂ ಸೇರಿ ತಮ್ಮ ಇಡೀ ಅಧಿಕಾರಾವಧಿಯಲ್ಲಿ ಹೆಲಿಕಾಪ್ಟರ್‌ನಲ್ಲಿ ಓಡಾಡುವುದಕ್ಕೆ ಮಾಡಿದ ಒಟ್ಟು ಖರ್ಚಿನ ದುಪ್ಪಟ್ಟನ್ನು ಮಾನ್ಯ ಯಡಿಯೂರಪ್ಪನವರು ಕೇವಲ ಎಂಟೇ ತಿಂಗಳಲ್ಲಿ ಮಾಡಿ ಮುಗಿಸಿದ್ದಾರೆ.

ಮುಖ್ಯಮಂತ್ರಿ ಎಂದರೆ ಇಡೀ ರಾಜ್ಯ ಸುತ್ತಬೇಕು, ಜನರ ಮನೆಬಾಗಿಲಿಗೆ ಹೋಗಿ ಅಹವಾಲುಗಳನ್ನು ಆಲಿಸಬೇಕು, ರಾಜ್ಯದ ಮೂಲೆ ಮೂಲೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯನ್ನು ಖುದ್ದಾಗಿ ಪರಿಶೀಲಿಸಬೇಕು, ಕಾರಿನಲ್ಲಿ ಓಡಾಡಿದರೆ ಅನಗತ್ಯ ವಿಳಂಬವಾಗುತ್ತೆ ಎಂಬ ವಾದಗಳೆಲ್ಲಾ ಸರಿ.

ಆದರೆ, ಯಡ್ಡಿ ಹೆಲಿಕಾಪ್ಟರ್‌ನಲ್ಲಿ ತಿರುಗಾಡುತ್ತಿರುವುದು ಈ ಮೇಲೆ ಹೇಳಿರುವಂತೆ ನಾಡಿನ, ಜನರ ಅಭಿವೃದ್ಧಿಗಾಗಿಯಲ್ಲ. ಬದಲಾಗಿ ರಾಜ್ಯ ಬಿಜೆಪಿಯನ್ನು ಅನಂತೂ ಬಣದ ಪ್ರಭಾವದಿಂದ ಹೊರತಂದು ತಮ್ಮ ಮುಷ್ಠಿಯಲ್ಲಿಟ್ಟುಕೊಳ್ಳುವ ಉದ್ದೇಶದಿಂದ ಜಿಲ್ಲಾ ಘಟಕಗಳಿಗೆ ಭೇಟಿ ಮಾಡುವುದಕ್ಕೆ, ಅಲ್ಲಲ್ಲಿ ಸಭೆ ಸಮಾರಂಭಗಳಿಗೆ ಹೋಗಿ ರಿಬ್ಬನ್ ಕಟ್ ಮಾಡುವುದಕ್ಕೆ, ಊರೂರುಗಳಲ್ಲಿ ಶೋಭಕ್ಕನ ಜೊತೆ ನಿಂತು ಮಾಧ್ಯಮಗಳ ಎದುರು ಫೋಟೋ ತೆಗೆಸಿಕೊಳ್ಳುವುದಕ್ಕೆ, ರಾಮಚಂದ್ರಾಪುರದ ರಾಘವೇಶನಂಥ ಪಕ್ಕಾ ಸಗಣಿಗಳಿಗೆ ಸರ್ಕಾರಿ ದುಡ್ಡನ್ನು ಕೊಟ್ಟು ಬರುವುದಕ್ಕೆ, ಅಲ್ಲಲ್ಲಿ ಅಡಿಗಲ್ಲು ಹಾಕುವ ಅಥವಾ ಗುದ್ದಲಿಪೂಜೆ ಮಾಡುವ ಸಮಾರಂಭಗಳಿಗೆ ಯಡ್ಡಿಯ ಹೆಲಿಕಾಪ್ಟರ್ ಹಾರಾಟ ನಡೆಯುತ್ತಿದೆ.

ಅಂದಹಾಗೆ, ಯಡ್ಡಿ ಹೀಗೆ ಓಡಾಡುತ್ತಿರುವುದು ಸರ್ಕಾರಿ ಹೆಲಿಕಾಪ್ಟರ್‌ನಲ್ಲಲ್ಲ, ದುಬಾರಿ ಬಾಡಿಗೆಯ ಖಾಸಗೀ ಹೆಲಿಕಾಪ್ಟರ್‌ನಲ್ಲಿ. ಯಡ್ಡಿಯ ಹೆಲಿಕಾಪ್ಟರ್‌ನಲ್ಲಿ ಓಡಾಡುವ ಚಟ ಎಷ್ಟು ತೀವ್ರವಾಗಿದೆ ಎಂದರೆ ಈಗ ಅವರು ಓಡಾಟಕ್ಕಾಗಿ ಮಾಡುತ್ತಿರುವ ವೆಚ್ಚದಲ್ಲೇ ರಾಜ್ಯ ಸರ್ಕಾರ ಒಂದು ಸ್ವಂತ ಹೆಲಿಕಾಪ್ಟರ್ ಖರೀದಿಸಬಹುದು. ಆದರೆ, ಅದರಿಂದ ಕಿಕ್ ಬ್ಯಾಕ್ ಬರುವುದಿಲ್ಲವಲ್ಲ?! ಪ್ರತೀ ಬಾರಿ ಯಡ್ಡಿ ಖಾಸಗಿ ಹೆಲಿಕಾಪ್ಟರ್ ಅನ್ನು ಸರ್ಕಾರಿ ದುಡ್ಡಿನಲ್ಲಿ ಬಾಡಿಗೆಗೆ ಪಡೆದಾಗ ಹೆಲಿಕಾಪ್ಟರ್ ಕಂಪನಿಗಳು ಅದ್ಯಾರ್‍ಯಾರಿಗೆ ಕಮೀಷನ್ ಕೊಡುತ್ತಿದೆಯೋ. ಅದಕ್ಕೆ ರಾಜ್ಯ ಸರ್ಕಾರವೇ ಹೆಲಿಕಾಪ್ಟರ್ ಖರೀದಿಸಲು ಮುಂದಾಗಿಲ್ಲ.

ಹೀಗಾಗಿ, ಜನರು ಬೆವರು ಹರಿಸಿ ಕಟ್ಟಿದ ತೆರಿಗೆಯಲ್ಲಿ ಯಡ್ಡಿ ಹೆಲಿಕಾಪ್ಟರ್ ಹಾರಾಟ ನಡೆದೇ ಇದೆ. ನಾಚಿಕೆ, ಮಾನ, ಮರ್ಯಾದೆ ಅನ್ನೋದು ಯಡ್ಡಿಗೆ ಕಿಂಚಿತ್ತಾದರೂ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಏನೇ ಆದರೂ ಬಿಜೆಪಿ ಉಳಿದ ಪಕ್ಷಗಳಿಗಿಂತ different ಅಲ್ಲವೆ? ■

ಮಾಯಾವತಿಯ ಆನೆ ಪಾರ್ಕು!

ಜನರು ಬೆವರು-ರಕ್ತ ಹರಿಸಿ ಟ್ಯಾಕ್ಸ್ ರೂಪದಲ್ಲಿ ಸರ್ಕಾರಕ್ಕೆ ಕೊಡುವ ದುಡ್ಡನ್ನು ನಮ್ಮ ಮಂತ್ರಿ ಮಹೋದಯರು ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಾರೆಂಬುದಕ್ಕೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿಯ ಆನೆ ಪಾರ್ಕು ಇನ್ನೊಂದು ನಿದರ್ಶನ.

ಉತ್ತರ ಪ್ರದೇಶದ ರಾಜಧಾನಿ ಲಕ್ನೋದಲ್ಲಿ ವಿಸ್ತಾರವಾದ ಉದ್ಯಾನವನವನ್ನು ನಿರ್ಮಿಸಬೇಕೆಂಬುದು ಮಾಯಾವತಿಯವರ ಕನಸಿನ ಯೋಜನೆ. 1995ರಲ್ಲಿ ಮೊದಲ ಬಾರಿಗೆ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಈ ಯೋಜನೆಯನ್ನು ಪ್ರಕಟಿಸಿದ್ದರು. ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿರುವ ಲಕ್ನೋದಂಥ ನಗರದಲ್ಲಿ ಹಳ್ಳ ಬಿದ್ದ ರಸ್ತೆಗಳು, ವಾಹನ ದಟ್ಟನೆ, ನಿರಂತರ ಹೊಗೆಯುಗುಳುವ ಫ್ಯಾಕ್ಟರಿಗಳ ನಡುವೆ ಉಸಿರಾಡಲು ಸ್ವಚ್ಛ ಗಾಳಿಯೂ ಸಿಗದೇ ಪರಿತಪಿಸುತ್ತಿದ್ದ ಜನರಿಗೆ ಮಾಯಾವತಿಯವರ ಈ ಯೋಜನೆ ಆರಂಭದಲ್ಲಿ ಬಹಳ ಖುಷಿ ಕೊಟ್ಟಿದ್ದೇನೋ ಹೌದು. ವಾರದಲ್ಲಿ ಒಮ್ಮೆಯಾದರೂ ಸಂಸಾರಸಮೇತ ಪಾರ್ಕಿಗೆ ಹೋಗಿ ವಿರಮಿಸಬಹುದಲ್ಲಾ ಎಂಬ ಸಣ್ಣ ಆಶೆ ಅವರದ್ದು.

ಆದರೆ, ಮಾಯಾವತಿಯವರ ಲೆಕ್ಕಾಚಾರವೇ ಬೇರೆಯಾಗಿತ್ತು. ತಮಗೆ ಲಭಿಸಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತಮ್ಮ ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ) ಮತ್ತು ಅದರ



ನಾಯಕಿಯಾಗಿರುವ ತಮಗೆ ದೊಡ್ಡ ಮಟ್ಟದಲ್ಲಿ ಪ್ರಚಾರ ಪಡೆಯುವುದೇ ಅದರ ಹಿಂದಿನ ಹುನ್ನಾರವಾಗಿದೆ ಎಂಬುದು ಈ ಉದ್ಯಾನವನ ಯೋಜನೆಯ ವಿವರಗಳನ್ನು ನೋಡಿದರೆ ಯಾರಿಗಾದರೂ ಅರ್ಥವಾಗುತ್ತದೆ.

ಲಕ್ನೋ ನಗರದ ಶ್ರೀಮಂತರು ವಾಸಿಸುವ posh ಏರಿಯಾದಲ್ಲಿ ಈ ಪಾರ್ಕಿಗಾಗಿ 100 ಎಕರೆ ಜಾಗವನ್ನು ವಶಪಡಿಸಿಕೊಳ್ಳಲಾಗಿದೆ. ಇಲ್ಲಿ ಉದ್ಯಾನವನದ ನಿರ್ಮಾಣಕ್ಕಾಗಿ ಈ ಜಾಗದ ಮೊತ್ತವನ್ನು ಹೊರತುಪಡಿಸಿ 1000 ಕೋಟಿ ರೂಪಾಯಿಗಳನ್ನು ವ್ಯಯಿಸಲಾಗುತ್ತಿದೆ! ಈ ಪಾರ್ಕ್ ನಿರ್ಮಾಣದ ಉಸ್ತುವಾರಿ ವಹಿಸಿಕೊಂಡಿರುವ ಅಧಿಕಾರಿಗಳ ಪ್ರಕಾರ ಈ ವೆಚ್ಚ 1200 ಕೋಟಿಗೂ ಅಧಿಕವಾಗಲಿದೆಯಂತೆ. ಪುಕ್ಕಟೆ ಜಾಗವಿದೆ, ಅದಕ್ಕೊಂದು ಬೇಲಿ ಹಾಕಿ ಮರಗಿಡಗಳನ್ನು ನೆಡುವುದಕ್ಕೆ, ಜನ ಕುಳಿತುಕೊಳ್ಳಲು ಅಲ್ಲಲ್ಲಿ ಕಲ್ಲು ಬೆಂಚುಗಳನ್ನು ಹಾಕುವುದಕ್ಕೆ, ಒಂದೆರಡು ಕಾರಂಜಿಗಳನ್ನು ಜೋಡಿಸುವುದಕ್ಕೆ ಇಷ್ಟೊಂದು ದುಡ್ಡು ಬೇಕಾ ಎಂಬ ಆಶ್ಚರ್ಯ ಕಾಡದಿರದು. ಆದರೆ, ಮಾಯಾವತಿಯ ದೂರದೃಷ್ಟಿ ಇರೋದೇ ಅಲ್ಲಿ.

ಈ ಪಾರ್ಕಿನಲ್ಲಿ ಒಂದು 'ಆನೆದೊಡ್ಡಿ' ನಿರ್ಮಿಸಲಾಗುತ್ತಿದೆ. ಇದು ಜೀವಂತ ಆನೆಗಳನ್ನು ಕೂಡಿ ಹಾಕುವುದಕ್ಕಲ್ಲ, ಕೆಮ್ಮರಳು ಶಿಲೆಯಲ್ಲಿ ಕೆತ್ತಿದ ಬೃಹದಾಕಾರದ 60 ಕಲ್ಲಿನ ಆನೆಗಳನ್ನು ನಿಲ್ಲಿಸುವುದಕ್ಕೆ. ಈ ಒಂದೊಂದು ಆನೆಯ ನಿರ್ಮಾಣಕ್ಕೂ ತಗಲುವ ವೆಚ್ಚ 65 ಲಕ್ಷ! ಅದೂ ಅಲ್ಲದೇ ಉದ್ಯಾನವನದ ಪ್ರತೀ ಗೋಪುರ ಮಹಾದ್ವಾರದಲ್ಲೂ ನಿಲ್ಲಿಸುವುದಕ್ಕಾಗಿ ಹತ್ತು ಆನೆಗಳನ್ನು ಅಮೃತಶಿಲೆಯಲ್ಲಿ ಕೆತ್ತಿಸಲಾಗುತ್ತಿದೆ. ಈ ಹತ್ತು ಆನೆಗಳಿಗೆ ಒಟ್ಟು 34 ಕೋಟಿ ಖರ್ಚಾಗುತ್ತದೆಯಂತೆ! ನಿಮಗೆ ನೆನಪಿರಲಿ. 'ಆನೆ' ಮಾಯಾವತಿಯವರ ಬಿಎಸ್‌ಪಿ ಪಕ್ಷದ ಗುರುತು. ಪಾರ್ಕಿನಲ್ಲಿ ಇಷ್ಟೊಂದು ದುಬಾರಿ ವೆಚ್ಚದ ಆನೆಗಳನ್ನು ಪ್ರತಿಷ್ಠಾಪಿಸುತ್ತಿರುವುದನ್ನು ಸಮರ್ಥಿಸಿಕೊಂಡಿರುವ ಮಾಯಾವತಿ 'ಅದು ದಲಿತ ಚೈತನ್ಯದ ಸಂಕೇತ' ಎಂದಿದ್ದಾರೆ. ಆದರೆ, ಅದು ಮಾಯಾವತಿ ಮತ್ತು ಬಿಎಸ್‌ಪಿ ಪ್ರಚಾರದ ತಂತ್ರ ಎಂಬುದನ್ನು ಅರ್ಥಮಾಡಿಕೊಳ್ಳಲಾರದಷ್ಟು ಜನ ದಡ್ಡರಲ್ಲ.

ಈ ಉದ್ಯಾನದ ಹೊರಗೋಡೆ 30 ಕಿ.ಮೀ.ನಷ್ಟು ಉದ್ದವಾಗಿದ್ದು ಇದನ್ನು ಸಂಪೂರ್ಣವಾಗಿ ಮರಳುಶಿಲೆಯಲ್ಲಿ ನಿರ್ಮಿಸಲಾಗುತ್ತಿದೆ. ಈ ಗೋಡೆ ನಿರ್ಮಾಣಕ್ಕೆ ಪ್ರತಿ ಮೀಟರ್‌ಗೆ 1.10 ಲಕ್ಷ ಖರ್ಚಾಗುತ್ತಿದೆ. ಇಲ್ಲಿ ಎರಡು ಬೃಹದಾಕಾರದ ಕಾರಂಜಿಗಳನ್ನು ನಿರ್ಮಿಸಲಾಗುತ್ತಿದ್ದು ಒಂದೊಂದರ ಬೆಲೆ ಮೂರು ಕೋಟಿ. ಇದೇ ರೀತಿ ಲೆಕ್ಕ ಹಾಕುತ್ತಾ ಹೋದರೆ ಉದ್ಯಾನವನ

▶▶▶

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ವಿಶ್ವದ ಮೊದಲ ಸಲಿಂಗಕಾಮಿ ಪ್ರಧಾನಮಂತ್ರಿ!

ಇತ್ತೀಚೆಗೆ ಐಸ್‌ಲ್ಯಾಂಡ್ ದೇಶದ ಜನ ಜೋಹನಾ ಸಿಗುರ್ದಾಟ್ರ ಎಂಬ ಸಲಿಂಗಕಾಮಿ ಮಹಿಳೆಯೊಬ್ಬಳನ್ನು ತಮ್ಮ ದೇಶದ ಪ್ರಧಾನಮಂತ್ರಿಯನ್ನಾಗಿ ಆಯ್ಕೆ ಮಾಡಿದ್ದಾರೆ! ಇಡೀ ವಿಶ್ವದಲ್ಲಿಯೇ ಸಲಿಂಗಕಾಮಿಯೊಬ್ಬರು ಸರ್ಕಾರದ ಮುಖ್ಯಸ್ಥರಾಗಿ ಆಯ್ಕೆಗೊಂಡಿದ್ದು ಇದೇ ಮೊದಲು.

66 ವರ್ಷ ವಯಸ್ಸಿನ ಜೊಹಾನಾ ಅವರು ಬೆಳೆದು ನಿಂತ ಇಬ್ಬರು ಮಕ್ಕಳ ತಾಯಿ. ಐಸ್‌ಲ್ಯಾಂಡ್ ದೇಶದಲ್ಲಿ ಅವಕಾಶವಂಚಿತ, ದಮನಿತ, ಶೋಷಿತ ಸಮುದಾಯಗಳ ಪರವಾಗಿ ನಿರಂತರವಾಗಿ ದನಿಯೆತ್ತುತ್ತಾ ಬಂದಿರುವ ಅವರನ್ನು ಅಲ್ಲಿಯ ಜನ ಸಹಜವಾಗಿ ತಮ್ಮ ನಾಯಕಿಯಾಗಿ ಸ್ವೀಕರಿಸಿದ್ದಾರೆ. ಇದೆಲ್ಲದರ ನಡುವೆ ತಾವೊಬ್ಬ ಸಲಿಂಗಕಾಮಿ ಎಂಬುದನ್ನು ಅವರೆಂದೂ ಮುಚ್ಚಿಟ್ಟುಕೊಂಡಿಲ್ಲ.

ಕೆಲವು ಪತ್ರಿಕೆಗಳು ಜನರ ಅಭಿಪ್ರಾಯವನ್ನು ಸಂಗ್ರಹಿಸಿದಾಗ ಬಹುತೇಕರು "ಜೋಹಾನಾ ಅವರು homosexual ಅಥವಾ heterosexual ಎಂಬುದು ನಮಗೆ ಮುಖ್ಯವಲ್ಲ. ಅವರು ದೇಶಕ್ಕಾಗಿ, ಜನರಿಗಾಗಿ ಎಷ್ಟು ನಿಷ್ಠೆಯಿಂದ ಕೆಲಸ ಮಾಡುತ್ತಾರೆಂಬುದೇ ನಮಗೆ ಮುಖ್ಯ. ಕಳೆದ ಮೂವತ್ತು ವರ್ಷಗಳಿಂದ ರಾಜಕಾರಣದಲ್ಲಿರುವ ಅವರು ಅನೇಕ ಮಂತ್ರಿ



ಪದವಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಪ್ರಧಾನ ಮಂತ್ರಿಯಾಗಿಯೂ ಐಸ್‌ಲ್ಯಾಂಡ್ ದೇಶವನ್ನು ಮುನ್ನಡೆಸುವ ಕುಶಲತೆ ಅವರಿಗಿದೆ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಲಿಂಗಕಾಮಿಗಳನ್ನು ತುಚ್ಛವಾಗಿ ಕಾಣುವುದರ ವಿರುದ್ಧ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ದೊಡ್ಡ ಮಟ್ಟದ ವಾಗ್ವಾದಗಳು, ಸಂವಾದಗಳು, ಪ್ರತಿಭಟನೆಗಳು ಬೇಕಾದಷ್ಟು ನಡೆದಿವೆ. ಇದೆಲ್ಲದರಿಂದ ಈ ಸಮುದಾಯದ ಬಗೆಗಿನ ಸಮಾಜದ ದೃಷ್ಟಿಕೋನವೂ ನಿಧಾನವಾಗಿ ಬದಲಾಗಿದೆ. ಜರ್ಮನಿಯಲ್ಲಿ ಕ್ಲಾವ್ಸ್ ವೊವೆರಿಟ್ ಎಂಬ 55 ವರ್ಷದ ರಾಜಕಾರಣಿಯೊಬ್ಬರು 'ನಾನು ಸಲಿಂಗಕಾಮಿ' ಎಂದು ಬಹಿರಂಗವಾಗಿ ಒಪ್ಪಿಕೊಂಡಿದ್ದಲ್ಲದೇ ಟಿ.ವಿ. ಕ್ಯಾಮೆರಾಗಳೆದುರು ತಮ್ಮ ಸಂಗಾತಿಯನ್ನು ಬಿಗಿದಪ್ಪಿದ್ದರು. ಆದರೂ ಬರ್ಲಿನ್‌ನ ಜನತೆ ಅವರನ್ನು 2006ರ ಚುನಾವಣೆಯಲ್ಲಿ ಭಾರೀ ಬಹುಮತದಿಂದ ಗೆಲ್ಲಿಸಿ ಎರಡನೇ ಬಾರಿಗೆ ಮೇಯರ್ ಆಗಿ ಆಯ್ಕೆ ಮಾಡಿತು. ಫ್ರಾನ್ಸ್‌ನಲ್ಲಿ ತಾನೊಬ್ಬ ಸಲಿಂಗಕಾಮಿಯೆಂದು ಬಹಿರಂಗವಾಗಿ ಹೇಳಿಕೊಂಡ ಮೊದಲ ರಾಜಕಾರಣಿ 59 ವರ್ಷದ ಬಟ್ರಾಂಡ್ ಡೆಲಾನೊ ಅವರನ್ನು ಅಲ್ಲಿಯ ಜನ 2001ರಲ್ಲಿ ಪ್ಯಾರಿಸ್ ನಗರದ ಮೇಯರ್‌ನನ್ನಾಗಿ ಆಯ್ಕೆ ಮಾಡಿದರು. ಅವರು 2012ರ ಫ್ರಾನ್ಸ್ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಈಗ, ಐಸ್‌ಲ್ಯಾಂಡಿನಲ್ಲಿ ಪ್ರಧಾನಮಂತ್ರಿಯಾಗಿ ಸಲಿಂಗಕಾಮಿ ಜೋಹಾನಾ ಅವರು ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ಭಾರತದಲ್ಲಿ ಸಲಿಂಗಕಾಮಿಗಳನ್ನು ತುಚ್ಛವಾಗಿ ಕಾಣುವುದರ ವಿರುದ್ಧ ಪ್ರತಿಭಟನೆಯ ದನಿ ಅಲ್ಲಲ್ಲಿ ಕೇಳಿಬರುತ್ತಿದೆ. ವಿಶೇಷವಾಗಿ ಮಹಾನಗರಗಳಲ್ಲಿ ಸಲಿಂಗಕಾಮಿಗಳು ಯಾವುದೇ ಮುಚ್ಚುಮರೆಯಿಲ್ಲದೇ ತಮ್ಮ ಹೆಸರು, ಉದ್ಯೋಗ, ವಿಳಾಸ ಹೇಳುವಷ್ಟೇ ಸಲೀಸಾಗಿ ತಮ್ಮ sexuality ಯನ್ನೂ ಪರಿಚಯಿಸಿಕೊಳ್ಳುತ್ತಾರೆ. ಅವರೊಂದಿಗೆ ಉಳಿದವರೂ ಅಷ್ಟೇ ಮುಕ್ತವಾಗಿರಬೇಕೆಂದೂ ಬಯಸುತ್ತಾರೆ.

ಇತ್ತೀಚೆಗೆ ಮಾನವ ಹಕ್ಕುಗಳ ಬಗ್ಗೆ, ಮಹಿಳೆಯರ ಹಕ್ಕುಗಳ ಬಗ್ಗೆ, ಮಕ್ಕಳ ಹಕ್ಕುಗಳ ಬಗ್ಗೆ ನಡೆಯುತ್ತಿರುವ ಚರ್ಚೆಗಳಂತೆ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. Sexuality ಎಂಬುದು ವ್ಯಕ್ತಿಯೊಬ್ಬರ ವೈಯಕ್ತಿಕ ಆಯ್ಕೆಯ ವಿಚಾರ. ಅದನ್ನು ನಿರಾಕರಿಸುವುದು ಅಪ್ರಜಾತಾಂತ್ರಿಕವಾಗುತ್ತದೆ ಎಂಬುದನ್ನು ಅರ್ಥ ಮಾಡಿಕೊಂಡರೆ ಮುಂದೊಂದು ದಿನ ಭಾರತದ ಸಮಾಜವೂ ಈ ವಿಷಯದಲ್ಲಿ ಸುಧಾರಿಸಬಹುದು.

ಬಿಜೆಪಿ ಸರ್ಕಾರದ ದಲಿತ-ಮಹಿಳಾ ವಿರೋಧಿತನ!

ವೇದೋಪನಿಷತ್ತುಗಳನ್ನು ದಲಿತರು, ಮಹಿಳೆಯರು ಓದಿದರೆ ಅವರ ಕಿವಿಗೆ ಕುದಿಯುವ ಸೀಸವನ್ನು ಸುರಿಯಬೇಕು ಎಂದು ಅಪ್ಪಣೆ ಹೊರಡಿಸಿದ ಮನು ಆರೆಸ್ಸೆಸ್‌ಗಳಿಗೆ, ಭಜರಂಗಿಗಳಿಗೆ, ಬಿಜೆಪಿಗಳಿಗೆ, ಶ್ರೀರಾಮ ಸೇನೆಯ ಮಂಗಗಳಿಗೆ ಆದರ್ಶ ವ್ಯಕ್ತಿ. ಅಂಥವರ ಕೈಗೆ ಅಧಿಕಾರ ಕೊಟ್ಟರೆ ಮಹಿಳೆಯರ ಮತ್ತು ದಲಿತರ ದಮನ ಹೇಗೆ ಸುಲಭವಾಗುತ್ತದೆ ಎಂಬುದಕ್ಕೆ ರಾಜ್ಯ ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆ ಒಂದು ಉತ್ತಮ ಉದಾಹರಣೆ.

ಅಂತರ್ಜಾತಿ ವಿವಾಹಗಳನ್ನು ಉತ್ತೇಜಿಸುವ ದೃಷ್ಟಿಯಿಂದ 2002ರಲ್ಲಿ ಆಗಿನ ರಾಜ್ಯ ಸರ್ಕಾರ ವಿಶೇಷ ಆದೇಶವೊಂದನ್ನು ಹೊರಡಿಸಿತ್ತು. ಅದರ ಪ್ರಕಾರ ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಹುಟ್ಟುವ ಮಗುವಿನ ಜಾತಿಯನ್ನು ಪರಿಗಣಿಸುವುದಕ್ಕೆ ತಂದೆ-ತಾಯಿಗಳಿಬ್ಬರ ಜಾತಿಯನ್ನೂ ಪರಿಗಣಿಸಲಾಗುತ್ತಿತ್ತು. ಒಂದು ವೇಳೆ ತಂದೆ-ತಾಯಿಗಳಲ್ಲಿ ಯಾರಾದರೊಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದರೆ ಮಗುವನ್ನೂ ಪರಿಶಿಷ್ಟ ಜಾತಿಗೆ ಸೇರಿಸಬಹುದಿತ್ತು ಮತ್ತು ಆ ಮೂಲಕ ಆ ಜಾತಿಗೆ ಸಿಗುವ ಮೀಸಲಾತಿ ಮತ್ತಿತರ ಸೌಲಭ್ಯಗಳನ್ನು ಪಡೆಯುವ ಅವಕಾಶವಿತ್ತು.



ಆದರೆ ಈಗ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಹೊರಡಿಸಿರುವ ಹೊಸ ಆದೇಶದ ಪ್ರಕಾರ ಅಂತರ್ಜಾತಿ ವಿವಾಹವಾದ ದಂಪತಿಗಳ ಮಗು ತಂದೆಯ ಜಾತಿಗೆ ಮಾತ್ರವೇ ಸೇರುತ್ತದೆ. ಈ ಆದೇಶ ದಲಿತ ವಿರೋಧಿ ಮಾತ್ರವಲ್ಲ, ಮಹಿಳಾ ವಿರೋಧಿ ಕೂಡ ಆಗಿದೆ.

ಒಂದು ವೇಳೆ ಅಂತರ್ಜಾತಿ ವಿವಾಹವಾದ ದಂಪತಿಗಳಲ್ಲಿ ತಾಯಿ ದಲಿತಳಾಗಿದ್ದು ತಂದೆ ಮೇಲ್ಜಾತಿಗೆ ಸೇರಿದ್ದರೆ ಅವರ ಮಗು ಮೇಲ್ಜಾತಿಯ ಮಗುವಾಗುತ್ತದೆ. ಅಂದರೆ ಆ ಮಗುವಿಗೆ ಸಿಗಬೇಕಾದ ಮೀಸಲಾತಿ ಸೌಲಭ್ಯದಿಂದ ಅದನ್ನು ವಂಚಿಸುವ ವ್ಯವಸ್ಥಿತ ಸಂಚು ಇದಾಗಿದೆ. ಎರಡನೆಯದಾಗಿ, ತಂದೆಯ ಜಾತಿಗೇ ಯಾಕೆ ಮಗುವನ್ನು ಸೇರಿಸಬೇಕು? ತಾಯಿಯ ಜಾತಿಯನ್ನು ಯಾಕೆ ಪರಿಗಣಿಸಬಾರದು? ವಾಸ್ತವದಲ್ಲಿ ಇದು ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಪುರುಷಾಧಿಪತ್ಯದ ಮುಂದುವರಿಕೆಯಾಗಿದೆ.

ಮೊದಲೇ ಮಹಿಳೆ ಪುರುಷರ ಆಧಿಪತ್ಯ, ದಮನಕ್ಕೆ ಒಳಗಾಗಿದ್ದಾಳೆ. ನಿಜ ಹೇಳಬೇಕೆಂದರೆ, ವಿಶ್ವದಲ್ಲಿ ಮೊಟ್ಟ ಮೊದಲು ಶೋಷಣೆ, ದಮನಗಳ ರುಚಿಯನ್ನು ಕಂಡವಳೇ ಮಹಿಳೆ. ಕಳೆದ ಸಾವಿರಾರು ವರ್ಷಗಳಲ್ಲಿ ಮಹಿಳೆಯರು ಜಾಗೃತಗೊಂಡಿದ್ದಾರೆ, ತಮ್ಮ ನ್ಯಾಯಬದ್ಧ ಮತ್ತು ನೈಸರ್ಗಿಕ ಹಕ್ಕುಗಳಿಗಾಗಿ ಅವರು ಶತಮಾನಗಳಿಂದ ನಡೆಸಿರುವ ಅಭೂತಪೂರ್ವ ಹೋರಾಟದ ಫಲಶ್ರುತಿಯಾಗಿ ಈ ಹೊತ್ತು ಅವರ ಸ್ಥಿತಿ ಒಂದಿಷ್ಟು ಸುಧಾರಣೆಗೊಂಡಿದೆ.

ಆದರೆ, ಬಿಜೆಪಿಯಂಥ ಮನುವಾದಿ ಪಕ್ಷ ಅಧಿಕಾರಕ್ಕೆ ಬಂದು ಅವರ ಹಕ್ಕುಗಳನ್ನು ಕಿತ್ತುಕೊಳ್ಳಲಾರಂಭಿಸಿದೆ. ಯಡಿಯೂರಪ್ಪನವರ ಸರ್ಕಾರ ಹೊರಡಿಸಿದ ಈ ಆದೇಶವೂ ಕೂಡ ಅಂತರ್ಯದಲ್ಲಿ 'ಪುರುಷನೇ ಮನೆಯ ಯಜಮಾನ, ಮಹಿಳೆ ಎರಡನೇ ದರ್ಜೆಯವಳು' ಎಂಬ ಪುರುಷಾಧಿಪತ್ಯದ ಮೌಲ್ಯವನ್ನು ಗಾಢವಾಗಿ ಧ್ವನಿಸುತ್ತದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ದಲಿತರು ಮತ್ತು ಮಹಿಳೆಯರ ಬಗ್ಗೆ ಬಿಜೆಪಿಯ ಮನಸ್ಥಿತಿಯನ್ನು ಸಾರುತ್ತದೆ.

...ಳ್ಳುವ ಹೊತ್ತಿಗೆ ಒಂದೂವರೆ ಸಾವಿರ ಕೋಟಿ ... ಖರ್ಚಾಗಬಹುದು. ಈ ಯೋಜನೆಯನ್ನು ...ರ್ಣಗೊಳಿಸುವುದಕ್ಕಾಗಿ ರಾಜಸ್ತಾನದಿಂದ ...ರ 350 ಜನ ಕರಕುಶಲ ಕರ್ಮಿಗಳು, 3000 ...ರ್ಮಿಕರು ಹಗಲಿರುಳೂ ದುಡಿಯುತ್ತಿದ್ದಾರೆ. ...ಷ್ಟೊಂದು ವೈಭವೋಪೇತ ಪಾರ್ಕ್ ...ಯು ಉತ್ತರ ಪ್ರದೇಶವೇನೂ ಕುಬೇರರ ... ಭಾರತದ ದಟ್ಟ ...ರಾಜ್ಯಗಳ ...ಲ್ಲಿ ಅಗ್ರ ಸ್ಥಾನ ...ಯು ಪೈಪೋಟಿ ...ಸುವ ರಾಜ್ಯವದು. ...ರಾಜ್ಯದಲ್ಲೇ ...ಮ ಕೆಲಸವಿಲ್ಲದೇ ...ಸೆರೆ ರಾಜ್ಯಗಳಿಗೆ ...ಡಿಗಾಗಿ ಅತೀ ದೊಡ್ಡ ಸಂಖ್ಯೆಯಲ್ಲಿ ಜನ ...ಲಂಕ ಗುಳೇ ಹೋಗುತ್ತಿದ್ದಾರೆ. ದೆಹಲಿಯನ್ನೂ ...ಡಂತೆ ಇಡೀ ಉತ್ತರ ಭಾರತದ ಪ್ರಮುಖ ...ಲ್ಲಿ ರಿಕ್ಷಾ ತುಳಿಯುತ್ತಿರುವವರು, ಮುಂಬಯಿ ...ಲ್ಲಿ ಬೀದಿ ವ್ಯಾಪಾರ ಮಾಡಿಕೊಂಡಿರುವವರು, ...ಪಂಜಾಬ್‌ನ ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕರಾಗಿ ...ಯುತ್ತಿರುವವರು, ಬೆಂಗಳೂರು, ಚೆನ್ನೈಗಳಲ್ಲಿ ಕಟ್ಟಡ ...ಣಕ್ಕೆ ಕಲ್ಲು ಹೊರುತ್ತಿರುವವರು ಒಂದೋ ...ಗಳು ಇಲ್ಲವೇ ಉತ್ತರ ಪ್ರದೇಶಿಗರು. ...ಷ್ಟೇ ಅಲ್ಲ, ಪ್ರತೀ ವರ್ಷ ಉತ್ತರ ಪ್ರದೇಶದಲ್ಲಿ ...ಬದಲ್ಲಿ ನೂರಾರು ಜನ ಹೊದಿಕೆಯಿಲ್ಲದೇ ಸಾಯುತ್ತಾರೆ. ಪ್ರತಿ ವರ್ಷ ಪ್ರವಾಹದಿಂದ ಸಾವಿರಾರು ರೈತರು ಮನೆಮಠ ಕಳೆದುಕೊಂಡು ಬೀದಿಗೆ ಬೀಳುತ್ತಾರೆ. ಇವೆಲ್ಲ ಅನಿರೀಕ್ಷಿತ ಘಟನೆಗಳೇನಲ್ಲ, ಪ್ರತೀ ವರ್ಷ ಚಾಚೂತಪ್ಪದೇ ನಡೆಯುವ ನಿರೀಕ್ಷಿತ ಘಟನೆಗಳೇ. ಆದರೂ ಆದಕ್ಕೆ ಪರಿಹಾರ ಕಂಡುಕೊಳ್ಳುವ ಗೋಜಿಗೆ ಹೋಗಿಲ್ಲ, ಮಾಯಾವತಿ ಖುದ್ದು ದಲಿತಳಾಗಿದ್ದರೂ ಆ ರಾಜ್ಯದ ದಲಿತರ ಮೇಲಿನ ದೌರ್ಜನ್ಯ ಎಗ್ಗಿಲ್ಲದೇ ಸಾಗಿದೆ. ಇನ್ನು



ಅನಕ್ಷರತೆ, ದಾರಿದ್ರ್ಯ, ಮೂಢ ನಂಬಿಕೆಗಳ ಬಗ್ಗೆಯಂತೂ ಕೇಳಲೇ ಬೇಡಿ.

ದುಡಿಯುವ ಕೈಗೆ ಕೆಲಸ ಕೊಡಲಾಗದಿದ್ದರೂ ಪರವಾಗಿಲ್ಲ, ಚಳಿಯಿಂದ ಸಾಯುವ ಜನರಿಗೆ ಒಂದು ಹೊದಿಕೆ ಕೊಡದಿದ್ದರೂ ಪರವಾಗಿಲ್ಲ, ಪ್ರವಾಹ-ಕ್ಷಾಮಗಳಿಂದ ರೈತರು ಬೀದಿಪಾಲಾದರೂ ಪರವಾಗಿಲ್ಲ, ಹಸಿವು ಬಡತನಗಳಿಂದ ಜನ ನಿತ್ಯ ಆತ್ಮಹತ್ಯೆಗೆ ಶರಣಾದರೂ ಪರವಾಗಿಲ್ಲ, ಮಾಯಾವತಿಗೆ ಲಕ್ನೋದಲ್ಲಿ ನೂರು ಎಕರೆ ಪ್ರದೇಶದಲ್ಲಿ ಸಾವಿರಾರು ಕೋಟಿ ದುಡ್ಡಿನಲ್ಲಿ ಅದ್ದೂರಿ ಉದ್ಯಾನವನ ತಲೆಯೆತ್ತಬೇಕು. ಉದ್ಯಾನವನದ ತುಂಬಾ ಮಾಯಾವತಿಯ ಮತ್ತು ಬಿಎಸ್ಪಿಯ ಸಾಧನೆಗಳನ್ನು ಕೊಂಡಾಡಲು ಕೋಟಿ ಕೋಟಿ ದುಡ್ಡಿನ ಆನೆಗಳು ನಿಲ್ಲಬೇಕು. ಇದು ದಲಿತ ಮುಖ್ಯಮಂತ್ರಿಯೊಬ್ಬಳ ಯಶೋಗಾಥೆ! ■

...ಸ್ತಿತ್ವದಲ್ಲೇ ಇಲ್ಲದ ವ್ಯಕ್ತಿಗೆ ಪದ್ಮಶ್ರೀ ಪ್ರಶಸ್ತಿ!

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನೀಯರಿಗೆ ನೀಡುವ ಪದ್ಮಭೂಷಣ, ಪದ್ಮವಿಭೂಷಣ, ...ದ್ಮಶ್ರೀ ಪ್ರಶಸ್ತಿಗಳನ್ನು ನಿರ್ಧರಿಸುವಲ್ಲಿ ಸರ್ಕಾರ ಅದೆಷ್ಟು ಬೇಜವಾಬ್ದಾರಿತನ ತೋರಿಸುತ್ತದೆ ಎಂಬುದಕ್ಕೆ ...ಯಶಃ ಇದಕ್ಕಿಂತ ಇನ್ನೊಂದು ನಿದರ್ಶನ ಬೇಕಿಲ್ಲವೇನೋ?


ಈ ವರ್ಷ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿಗಾಗಿ ಪ್ರಕಟಿಸಿದ 93 ಹೆಸರುಗಳ ಅಂತಿಮ ಪಟ್ಟಿಯನ್ನು ನೋಡಿ. ...ವರಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದಿಂದ ಹಸ್ಮತ್ ಉಲ್ಲಾ-ಖಾನ್ ...ಂಬುವವನ ಹೆಸರೂ ಇದೆ. ಆದರೆ ಈ ಹಸ್ಮತ್ ಉಲ್ಲಾ ಖಾನ್ ಯಾರು, ...ಲ್ಲಿದ್ದಾನೆ, ಏನು ಕೆಲಸ ಮಾಡುತ್ತಿದ್ದಾನೆ, ಯಾವ ಗಣನೀಯ ಸೇವೆಗಾಗಿ ...ತನಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ – ಈ ಯಾವ ಪ್ರಶ್ನೆಗಳಿಗೂ ಕೇಂದ್ರ ...ರ್ಕಾರಕ್ಕಾಗಲೀ, ರಾಷ್ಟ್ರಪತಿ ಭವನಕ್ಕಾಗಲೀ, ಜಮ್ಮು ಮತ್ತು ಕಾಶ್ಮೀರ ...ರ್ಕಾರಕ್ಕಾಗಲೀ ಉತ್ತರ ಗೊತ್ತಿಲ್ಲ, ಯಾಕೆಂದರೆ ಅಂತಹ ಓರ್ವ ವ್ಯಕ್ತಿಯೇ ...ಲ್ಲ!!





ಪದ್ಮಶ್ರೀಗೆ ಆಯ್ಕೆಯಾದವರ ಅಂತಿಮ ಪಟ್ಟಿ ರಾಷ್ಟ್ರಪತಿ ಭವನದಿಂದ ...ಹೊರಬೀಳುತ್ತಿದ್ದಂತೆಯೇ ಅದರಲ್ಲಿದ್ದ ಏಕೈಕ ಕಾಶ್ಮೀರಿಯ ಹೆಸರನ್ನು ಗಮನಿಸಿದ ...ಶ್ರೀನಗರದ ಮಾಧ್ಯಮಗಳು ಹಸ್ಮತ್‌ಗಾಗಿ ತಲಾಷ್ ನಡೆಸಿದರು. ಅವರ ... ಪ್ರಯತ್ನದಿಂದ ಅವರಿಗೆ ಸಿಕ್ಕಿದ್ದು ದಣಿವೇ ಹೊರತು ಬೇರೇನಲ್ಲ, ಯಾಕೆಂದರೆ ಅಸಲಿಗೆ ಆ ವ್ಯಕ್ತಿಯೊಬ್ಬ ...ಸ್ತಿತ್ವದಲ್ಲಿದ್ದರೆ ತಾನೆ ಆತ ಅವರಿಗೆ ಸಿಗೋದು? ಇನ್ನೊಂದು ವಿಚಿತ್ರ ನೋಡಿ. ರಾಷ್ಟ್ರಪತಿ ಭವನದ ದಾಖಲೆಗಳಲ್ಲಿ ...ವರು ಹತ್ತಾರು ಪುಸ್ತಕಗಳನ್ನು ಬರೆದಿದ್ದಾರೆಂದು ನಮೂದಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಹತ್ತಾರು ...ಪುಸ್ತಕಗಳನ್ನು ಬರೆದು ಪದ್ಮಶ್ರೀ ಪ್ರಶಸ್ತಿ ಪಡೆಯಲು ಅರ್ಹವಿದ್ದ ಏಕೈಕ ವ್ಯಕ್ತಿ ಸತ್ತು ಆರು ದಶಕಗಳಾಗಿವೆ!

ಮೊದಮೊದಲು ಕೆಲವು ಅಧಿಕಾರಿಗಳು ಜಮ್ಮು ಮತ್ತು ಕಾಶ್ಮೀರದ ವ್ಯಕ್ತಿಗೆ ಪದ್ಮಶ್ರೀ ಸಂದಿರುವುದು ಕಲೆ ...ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಾಗಿ ಎಂದರು. ಹೋಗಲೀ, ಆ ಕ್ಷೇತ್ರದಲ್ಲಾದರೂ ಆ ಹೆಸರಿನ ವ್ಯಕ್ತಿಯೊಬ್ಬರಿದ್ದಾರೆಯೇ ...ಎಂದರೆ ಅದೂ ಇಲ್ಲ, ಈ ಅಚಾತುರ್ಯ ಗೊತ್ತಾಗುತ್ತಿದ್ದಂತೆ ಜಮ್ಮು-ಕಾಶ್ಮೀರ ಸರ್ಕಾರದ ವಕ್ತಾರ "ರಾಜ್ಯ ಸರ್ಕಾರ ಪದ್ಮಶ್ರೀಗಾಗಿ ಆ ಹೆಸರನ್ನು ಶಿಫಾರಸ್ಸು ಮಾಡಿಲ್ಲ" ಎಂದು ಸ್ಪಷ್ಟಪಡಿಸಿದರು. ಆದರೂ ಆ ವ್ಯಕ್ತಿಯ ...ಹೆಸರು ಅಂತಿಮ ಪಟ್ಟಿಯಲ್ಲಿ ಪ್ರಕಟವಾಗಿದೆ ಎಂದರೆ ಆದನ್ನು ಯಾರು ಶಿಫಾರಸ್ಸು ಮಾಡಿದರು, ಯಾರು ಸೇರಿಸಿದರು, ಪ್ರಶಸ್ತಿಯನ್ನು ಕೊಡಲು ಯಾರು ನಿರ್ಧರಿಸಿದರು ಎಂಬುದು ಇವತ್ತಿಗೂ ಯಾರಿಗೂ ಗೊತ್ತಿಲ್ಲ,

ಈಗ ಇಂಗು ತಿಂದ ಮಂಗನಂತಾಗಿರುವ ಕೇಂದ್ರ ಸರ್ಕಾರ ಮತ್ತು ರಾಷ್ಟ್ರಪತಿ ಭವನದ ಅಧಿಕಾರಿಗಳು ...ಅಸ್ತಿತ್ವದಲ್ಲಿರದ ವ್ಯಕ್ತಿಯ ಹೆಸರು ಅಂತಿಮ ಪಟ್ಟಿಯಲ್ಲಿ ಹೇಗೆ ಸೇರ್ಪಡೆಗೊಂಡಿತು ಎಂಬುದರ ಬಗ್ಗೆ ತನಿಖೆಗೆ ...ಆದೇಶಿಸಿದ್ದಾರೆ. ■







ಬಿಜೆಪಿಯಿಂದ ಕಲ್ಯಾಣ್‌ಸಿಂಗ್ ನಿರ್ಗಮನ: ಬ್ರಾಹ್ಮಣವಾದಿಗಳ ಬೇಟೆಗೆ ಮತ್ತೊಂದು ಬಲಿಪಶು!

ಒಂದು ಕಾಲದಲ್ಲಿ ಉತ್ತರ ಪ್ರದೇಶದ ಬಿಜೆಪಿಯ ಮುಖವಾಗಿದ್ದ ಕಲ್ಯಾಣ್ ಸಿಂಗ್ ಕೊನೆಗೂ ಬಿಜೆಪಿಯಿಂದ ಹೊರನಡೆದಿದ್ದಾರೆ. ಕಳೆದ ಜನವರಿ 19ರಂದು ಪಕ್ಷದ ಅಧ್ಯಕ್ಷ ರಾಜನಾಥ್ ಸಿಂಗ್, ಲೋಕಸಭೆಯ ವಿರೋಧ ಪಕ್ಷದ ನಾಯಕ ಎಲ್.ಕೆ. ಅಡ್ವಾಣಿಯವರಿಗೆ ಸುದೀರ್ಘ ಪತ್ರ ಬರೆದು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆಯ ಜೊತೆಗೆ ಅವರಿಗಾಗಿ ನೀಡಲಾಗಿದ್ದ ಮುಂಬರುವ ಲೋಕಸಭಾ ಚುನಾವಣೆಯ ಟಿಕೆಟ್ಟನ್ನೂ ಹಿಂತಿರುಗಿಸಿದ್ದಾರೆ. ನಂತರ ಸಮಾಜವಾದಿ ಪಕ್ಷದ ಸಭೆಯಲ್ಲಿ ಮುಲಾಯಂ ಸಿಂಗ್ ಯಾದವ್, ಅಮರ್‌ಸಿಂಗ್‌ರೊಂದಿಗೆ ಕಾಣಿಸಿಕೊಂಡು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷದ ಪರವಾಗಿ ಪ್ರಚಾರ ಮಾಡುವುದಾಗಿ ಘೋಷಿಸಿದ್ದಾರೆ.

"ದೇಶದಲ್ಲಿ ಶೇ.50ಕ್ಕೂ ಹೆಚ್ಚು ಹಿಂದುಳಿದ ವರ್ಗದ ಜನರೇ ಇದ್ದೇವೆ. ಆದರೂ, ಬ್ರಾಹ್ಮಣವಾದಿಗಳ ಬಿಜೆಪಿಯಲ್ಲಿ ಹಿಂದುಳಿದ ವರ್ಗದಿಂದ ಬಂದಿರುವ ನನ್ನಂಥವರಿಗೆ ಯಾವುದೇ ಜಾಗವೂ ಇಲ್ಲ, ಮರ್ಯಾದೆಯೂ ಇಲ್ಲ, ನಿರಂತರ ಅವಮಾನ, ಅವಹೇಳನಗಳನ್ನು ಸಹಿಸಲಾರದೇ ಆ ಉಸಿರು ಕಟ್ಟಿಸುವ ವಾತಾವರಣದಿಂದ ಹೊರಬಂದೆ" ಎಂದು ಕಲ್ಯಾಣ್ ಸಿಂಗ್ ಹೇಳಿದ್ದಾರೆ.

ಅವರ ಮಾತು ಅಕ್ಷರಶಃ ಸತ್ಯವಾದರೂ ಇಷ್ಟು ದಿನ ಅದು ಯಾಕೆ ಅವರಿಗೆ ಹೊಳೆಯಲಿಲ್ಲ, ಈಗ ಇದ್ದಕ್ಕಿದ್ದಂತೆ ಅದ್ಯಾವ ಬೋಧಿ ವೃಕ್ಷದ ಕೆಳಗೆ ಕುಳಿತಿದ್ದರಿಂದ ಜ್ಞಾನೋದಯವಾಯಿತು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತವೆ. ಏಕೆಂದರೆ, ಬಿಜೆಪಿ ಎಂಬುದು ಪಕ್ಕಾ ಬ್ರಾಹ್ಮಣವಾದಿಗಳು ಕಪಿಮುಷ್ಠಿಯಲ್ಲಿರುವ ಪಕ್ಷವೆಂಬುದನ್ನಾಗಲೀ, ಅದರಲ್ಲಿ ಹಿಂದುಳಿದ ವರ್ಗಗಳಿಂದ ಬಂದ ನಾಯಕರು ಇದ್ದಾರಾದರೂ ಅವರಿಗೆ ಇದೇ ಬ್ರಾಹ್ಮಣವಾದಿಗಳು ಮೂಗುದಾರ ಹಾಕಿ ತಮ್ಮ ಹಿಡಿತದಲ್ಲಿಟ್ಟು ಕೊಂಡಿದ್ದಾರೆಂಬುದನ್ನಾಗಲೀ, ಅಂಥ ಹಿಂದುಳಿದ ವರ್ಗಗಳ ನಾಯಕರನ್ನು ಟಿಶ್ಯೂ ಪೇಪರ್‌ನಂತೆ ಉಪಯೋಗಿಸಿಕೊಂಡು ಬಿಸಾಡಲಾಗುತ್ತದೆಯೆಂಬುದನ್ನಾಗಲೀ ಅರ್ಥಮಾಡಿಕೊಳ್ಳಲಾರದಷ್ಟು ಮುಗ್ಧರಲ್ಲ ಕಲ್ಯಾಣ್ ಸಿಂಗ್.

ಹಿಂದುಳಿದ, ದಲಿತ ವರ್ಗಗಳಿಂದ ಬಂದ ನಾಯಕರನ್ನು ಏನೆಲ್ಲಾ ತಂತ್ರಗಳನ್ನು ಹೆಣೆದು ಮೂಲೆಗುಂಪು ಮಾಡುವ ದಮನಕಾರಿ ಚರಿತ್ರೆಯೇ ಬಿಜೆಪಿಗಿದೆ. ತೆಹಲ್ಕಾ ಹಗರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದನ್ನೇ ನೆಪಮಾಡಿಕೊಂಡು ಅಂದಿನ ಬಿಜೆಪಿ ಅಧ್ಯಕ್ಷರಾಗಿದ್ದ ದಲಿತ ಬಂಗಾರು ಲಕ್ಷ್ಮಣ್ ಅವರನ್ನು ಶಾಶ್ವತವಾಗಿ ತುಳಿದು ಹಾಕಲಾಯಿತು. ಒಂದು ಕಾಲದಲ್ಲಿ ಬಿಜೆಪಿ ಮತ್ತು ಸಂಘಪರಿವಾರದ ಮೌತ್‌ಪೀಸ್‌ನಂತಿದ್ದ ಹಿಂದುಳಿದ ಜಾತಿಗೆ ಸೇರಿದ ಉಮಾಭಾರತಿಯನ್ನು ಮಧ್ಯಪ್ರದೇಶದ ಮುಖ್ಯಮಂತ್ರಿ ಸ್ಥಾನದಿಂದ ದೂರ ಇಡಲಾಯಿತಷ್ಟೇ ಅಲ್ಲ, ಆಕೆ ಪಕ್ಷದಿಂದ ಶಾಶ್ವತವಾಗಿ ಹೊರನಡೆಯುವಂತೆ ಮಾಡಲಾಯಿತು. ಅಂತೆಯೇ, ಜಾರ್ಖಂಡ್‌ನಲ್ಲಿ ಬಾಬುಲಾಲ್ ಮರಾಂಡಿ, ದೆಹಲಿಯಲ್ಲಿ ಮದನ್‌ಲಾಲ್ ಖುರಾನಾರಂಥ ನಾಯಕರೂ ಒಬ್ಬರಾದ ಮೇಲೊಬ್ಬರಂತೆ ನೆಲಕಚ್ಚುವಂತೆ ನೋಡಿಕೊಳ್ಳ ಲಾಯಿತು. ಆವಾಗ ಕಲ್ಯಾಣ್ ಸಿಂಗ್ ಮಲಗಿದ್ದರೆ? ಇಂದಲ್ಲ ನಾಳೆ ತನಗೂ ಈ ಪರಿಸ್ಥಿತಿ ಬರಬಹುದೆಂದು ಊಹಿಸಲಿಲ್ಲವೇ? ಏನೋ ಜ್ಞಾನೋದಯವಾದವರಂತೆ 1999ರ ಡಿಸೆಂಬರ್‌ನಲ್ಲಿ ಬಿಜೆಪಿಯಿಂದ ಹೊರನಡೆದಿದ್ದ ರಾದರೂ 2004ರ ಲೋಕಸಭಾ ಚುನಾವಣೆಯ ಮುಂದಿರುವಾಗ ಮತ್ತೆ ಬಿಜೆಪಿಗೆ ಸೇರಿಕೊಂಡದ್ದು ಯಾಕೆ?

ಗುಜರಾತ್ ಮುಖ್ಯಮಂತ್ರಿ, ನರಹಂತಕ ನರೇಂದ್ರ ಮೋದಿ ಕೂಡ ಹಿಂದುಳಿದ ಜಾತಿಗೆ ಸೇರಿದವನೇ. ಇಂದಲ್ಲ ನಾಳೆ ಆತನೂ ಕೂಡ ಬಿಜೆಪಿಯಲ್ಲಿರುವ ಬ್ರಾಹ್ಮಣವಾದಿಗಳ ತಂತ್ರಕ್ಕೆ ಬಲಿಯಾಗುವುದರಲ್ಲಿ ಅನುಮಾನವಿಲ್ಲ, ಆದರೆ, ಸದ್ಯಕ್ಕೆ ಆತ ಬ್ರಾಹ್ಮಣವಾದಿಗಳ ಕಡಿವಾಣಕ್ಕೆ ಬೀಳದಷ್ಟು ಪ್ರಬಲವಾಗಿರುವುದರಿಂದ, ಪಕ್ಷ ಸಂಘಟನೆಯಲ್ಲಿ ಸಾಕಷ್ಟು ಹಿಂಬಾಲಕರನ್ನು ಸಾಕಿಕೊಂಡಿರುವುದರಿಂದ ಆತನನ್ನು ಕೆಣಕುವ ಗೋಜಿಗೆ ಬ್ರಾಹ್ಮಣವಾದಿಗಳು ಹೋಗಿಲ್ಲ,

ಬಿಜೆಪಿಯಲ್ಲಿ ಕಲ್ಯಾಣ್ ಸಿಂಗ್ ಸಾಮಾನ್ಯ ಕಾರ್ಯಕರ್ತರಾಗಿದ್ದವರಲ್ಲ, ಬಿಜೆಪಿಯಿಂದಲೇ ಎರಡು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದವರು. 'ಅಯೋಧ್ಯಾ ಚಳವಳಿ'ಯ ಹೆಸರಿನಲ್ಲಿ ಅಡ್ವಾಣಿ ದೇಶದಾದ್ಯಂತ ಹಿಂದೂ-ಮುಸ್ಲಿಮ್ ಸೌಹಾರ್ದತೆಗೆ ಬೆಂಕಿ ಹಚ್ಚುತ್ತಿದ್ದಾಗ ಕಲ್ಯಾಣ್ ಸಿಂಗ್ ಅವರಿಗೆ ಬೆಂಬಲ ನೀಡಿದ್ದರು. ಅಡ್ವಾಣಿ ನೇತೃತ್ವದಲ್ಲಿ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಸಂಘಪರಿವಾರದ ಮಂಗಗಳು ಕೆಡವಿ ಹಾಕಲು ಅನುವು ಮಾಡಿಕೊಟ್ಟಿದ್ದವರೂ ಇದೇ ಕಲ್ಯಾಣ್ ಸಿಂಗ್.


ಕಲ್ಯಾಣ್ ಸಿಂಗ್ ಅವರನ್ನು ಎಷ್ಟು ಉಪಯೋಗಿಸಿಕೊಳ್ಳಬಹುದೇ ಅಷ್ಟು ಬಿಜೆಪಿ ಉಪಯೋಗಿಸಿಕೊಂಡಾಗಿದೆ. ಈಗ ಅವರ ಅಗತ್ಯ ಬ್ರಾಹ್ಮಣವಾದಿಗಳಿಗೆ ಇಲ್ಲವಾದ್ದರಿಂದ ಅವರನ್ನು ಕಸದಬುಟ್ಟಿಗೆ ಎಸೆಯಲಾಗಿದೆ. ಇದ್ದಬಿದ್ದ ಮಾನ ಮರ್ಯಾದೆ ಉಳಿಸಿಕೊಳ್ಳಲು ಪಕ್ಷ ತೊರೆಯುವುದನ್ನು ಬಿಟ್ಟು ಅವರಿಗೆ ಬೇರೆ ದಾರಿ ಉಳಿದಿರಲಿಲ್ಲ,

ಒಟ್ಟಿನಲ್ಲಿ ಬ್ರಾಹ್ಮಣವಾದಿಗಳ ತಂತ್ರಕ್ಕೆ ಮತ್ತೊಂದು ಹಿಂದುಳಿದ ವರ್ಗದ ಮಿಕ ಬಿದ್ದಂತಾಗಿದೆ. ಈಗಲಾದರೂ ಬಿಜೆಪಿಯಲ್ಲಿರುವ ಹಿಂದುಳಿದ ವರ್ಗಗಳ ನಾಯಕರು ಎಚ್ಚೆತ್ತುಕೊಳ್ಳಲಿ. ■

...ಕ'ದಲ್ಲಿ ಮೂರೂರು ಎಂಬ ಮರಿ ಚೆಡ್ಡಿ

...ಕನ್ನಡದ ನಂ.1 ಚೆಡ್ಡಿ ಪತ್ರಿಕೆ 'ವಿಜಯ ಕರ್ನಾಟಕ'ದಲ್ಲಿ ...ಬ್ಬ ಕೇಸರಿ ವೀರ ತನ್ನ 'ಪ್ರತಾಪ' ತೋರಿಸಲಾರಂಭಿಸಿ... ಈತನ ಹೆಸರು ವಿನಾಯಕ ಭಟ್ ಮೂರೂರು. ... 'ವಿಕ'ದ ದೆಹಲಿ ವರದಿಗಾರ. ಅದಕ್ಕಿಂತಲೂ ...ಖ್ಯವಾಗಿ ಈ ಚೆಡ್ಡಿ ಪತ್ರಿಕೆಯ ಸಂಪಾದಕ ವಿಶ್ವೇಶ್ವರ ...ರ ಅಳಿಯ (ಅಕ್ಕನ ಮಗ). ಮೂರೂರು ಎಂಎ ...ಡಿದ್ದಾನಾದರೂ ಈತ ವಿಕ ಭಟ್ಟರ ಅಳಿಯ ಎಂಬುದೇ ...ಖ್ಯವಾದ 'ಅರ್ಹತೆ'ಯಾಗಿದೆ. ಇಲ್ಲವೆಂದರೆ ಮಂಗ...ರಿನಲ್ಲಿ ಸಾಮಾನ್ಯ ವರದಿಗಾರನಾಗಿದ್ದ ಈತನಿಗೆ ಅದು ... ದೆಹಲಿ ವರದಿಗಾರಿಕೆಯಂತಹ ಮಹತ್ವದ ಸ್ಥಾನ ...ತ್ತಿತ್ತು?

...ಸಂಪಾದಕ ತನ್ನ ಮಾವ ಎಂಬ ಕಾರಣದಿಂದ ಈತ ...ಗಳೂರಿನಲ್ಲಿದ್ದಷ್ಟೂ ದಿನ ಅಲ್ಲಿನ ವಿಕ ಸಿಬ್ಬಂದಿಗಳ ... ಹಿಂಡಿದ. ತನಗೆ ಆಗದವರನ್ನು ಮೂಲೆಗುಂಪು ...ಡಿದ್ದ. ಈತನ ಶೋಷಣೆ ಯಾವ ಮಟ್ಟದ್ದೆಂದರೆ ...ವರು ಕೆಲಸ ಬಿಟ್ಟಿದ್ದೂ ಆಗಿತ್ತು. ಕಳೆದ ವರ್ಷ ...ನ ಹೆಚ್ಚಳ ಮಾಡುವಾಗ ಈತ ಕೈಯಾಡಿಸಿದ್ದು ಬಹಿರಂಗವಾಗಿ ಈತನಿಗೆ ಕೆಲವರು ಬಾಯಿಗೆ ಬಂದಹಾಗೆ ಬೈದಿದ್ದೂ ನಡೆದಿತ್ತು, ಈತ ಮಂಗಳೂರಿನಿಂದ ನೇರವಾಗಿ ದಿಲ್ಲಿಗೆ ಹಾರಿದಾಗ ಎಲ್ಲರೂ "ಪೀಡೆ ತೊಲಗಿತು" ಎಂದು ಪಾರ್ಟಿ ಮಾಡಿದ್ದರಂತೆ.


ವಿನಾಯಕಭಟ್ಟ

ಅದಿರಲಿ, ದಿಲ್ಲಿ ಸೇರಿದ ಈ ಭಟ್ಟ ಅಲ್ಲಿಂದ ಅಂಕಣವೊಂದನ್ನು ವಾರಕ್ಕೊಮ್ಮೆ ಬರೆಯಲಾರಂಭಿಸಿದ. ಪೆದ್ದುಪೆದ್ದಾಗಿ ಏನೇನೋ ಬರೆಯುವ ಈತನ ಅಂಕಣವನ್ನು ಓದುಗರಿರಲಿ, ವಿಕದ ಸಿಬ್ಬಂದಿಗಳೇ ನೋಡಿ ಬಿದ್ದು ಬಿದ್ದು ನಗುತ್ತಿದ್ದರು. ಆದರೇನಂತೆ, ತನಗೆ ಮಾವನ ಬೆಂಬಲವಿದೆಯಾದ್ದರಿಂದ ತಾನು ಏನು ಬರೆದರೂ ನಡೆಯುತ್ತದೆ ಎಂಬ ಅಮಲಿನಲ್ಲಿದ್ದಾನೆ ಈ ಮರಿ ಭಟ್ಟ. ಅದೆಂತಹ ಅಮಲೆಂದರೆ ಕಳೆದ ಬುಧವಾರದ ತನ್ನ ಅಂಕಣದಲ್ಲಿ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ವಿರುದ್ಧವೇ ಬರೆದಿದ್ದಾನೆ. ಅನ್ನ ಕೊಡುವ ದಣಿಗಳಿಗೇ ಗೊತ್ತಾಗದಂತೆ ಅವರಿಗೇ ಒಂದಿಷ್ಟು ಉಗಿದಿದ್ದಾನೆ.

ಮಂಗಳೂರು ಪಬ್ ಪ್ರಕರಣಕ್ಕೆ ರಾಷ್ಟ್ರಾದ್ಯಂತ ಪ್ರಚಾರ ಸಿಗುವಂತೆ ಮಾಡಿದ್ದು 'ಟೈಮ್ಸ್ ಗ್ರೂಪ್'ನ ಮಾಧ್ಯಮಗಳು. ಈ ದಾಳಿಯನ್ನು ಪದೇ ಪದೇ ಪ್ರಸಾರ ಮಾಡಿದ 'ಟೈಮ್ಸ್ ನೌ' ಬೇರೆ ರಾಷ್ಟ್ರೀಯ ಮಾಧ್ಯಮಗಳೂ ಮಂಗಳೂರಿನತ್ತ ಮುಖಮಾಡುವಂತೆ ಮಾಡಿತ್ತು, ಈ ಘಟನೆ ಖಂಡಿಸಿ ಪುಟಗಟ್ಟಲೆ ವರದಿ ಮಾಡಿದ ಟೈಮ್ಸ್ ಆಫ್ ಇಂಡಿಯಾ, ಕೇಸರಿ ಪಡೆಯ ಈ ವರ್ತನೆಯನ್ನು ತಾಲೀಬಾನರಿಗೆ ಹೋಲಿಸಿ ಜಾಡಿಸಲಾರಂಭಿಸಿದೆ.

'ವಿಕ' ಪ್ರಕಟಿಸುವ 'ವಿಪಿಎಲ್'ಕೂಡ ಟೈಮ್ಸ್ ಗ್ರೂಪ್‌ನ ಒಂದು ಸಂಸ್ಥೆಯೇ. ಈ ಪತ್ರಿಕೆಯಲ್ಲಿಯೇ ಮೂರೂರು ಭಟ್ಟ ಟೈಮ್ಸ್ ಗ್ರೂಪ್‌ನ ಮಾಧ್ಯಮಗಳನ್ನೇ ಪರೋಕ್ಷವಾಗಿ ಟೀಕಿಸಿದ್ದಾನೆ. ಇದನ್ನು ನೋಡಿಕೊಂಡು ಟೈಮ್ಸ್ ಮಾರ್ವಾಡಿಗಳು ಆದೇಕೆ ಸುಮ್ಮನಿದ್ದಾರೋ ಗೊತ್ತಾಗುತ್ತಿಲ್ಲ,


ಪಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾಧ್ಯಮಗಳು ಅತಿರೇಕದಿಂದ ವರದಿ ಮಾಡಿವೆ ಎಂದು ಹೇಳುವ ಈ ಮರಿಭಟ್ಟನಿಗೆ ಟೈಮ್ಸ್ ಮಾಧ್ಯಮಗಳೂ ಹೀಗೆಯೇ ವರ್ತಿಸಿವೆ ಎಂಬುದು ಗೊತ್ತಾಗಲಿಲ್ಲವೇ? ಗೊತ್ತಾದರೂ, 'ಹಿಂದೂಸ್ತಾನ್ ಟೈಮ್ಸ್'ನ ಹೆಸರು ಉಲ್ಲೇಖಿಸಿದಂತೆ 'ಟೈಮ್ಸ್ ಆಫ್ ಇಂಡಿಯಾ'ದ ಹೆಸರು ಉಲ್ಲೇಖಿಸಿ ಬರೆಯುವ ಧೈರ್ಯವಿಲ್ಲವೇ?

ಒಟ್ಟು ಚೆಡ್ಡಿಗಳ ಎಲ್ಲಾ ಕೃತ್ಯಗಳನ್ನು ಸಮರ್ಥಿಸಿ ಬರೆಯುವ ಪ್ರತಾಪ ಸಿಂಹನಂತೆ ಬರೆಯಲು ಹೋಗಿ ಈತ ಟೈಮ್ಸ್‌ನ ನಿಲುವನ್ನೇ ನೇರವಾಗಿ ಪ್ರಶ್ನಿಸಿದ್ದಾನೆ. ಇಂತವನಿಗೆ ಸಂಬಳ ಕೊಟ್ಟು ಕೆಲಸದಲ್ಲಿಟ್ಟುಕೊಳ್ಳಬೇಕೇ, ಶ್ರೀರಾಮ ಸೇನೆಯ ವಕ್ತಾರನ ಹುದ್ದೆಗೆ ಓಡಿಸಬೇಕೇ ಎಂಬುದನ್ನು ಟೈಮ್ಸ್‌ನವರೇ ಈಗ ತೀರ್ಮಾನಿಸಬೇಕು.

ಇನ್ನು ಮಂಗಳೂರಿನಲ್ಲಿ ಸಂಘಪರಿವಾರದ ಕುತಂತ್ರಗಳನ್ನೆಲ್ಲಾ ಬಹಿರಂಗಪಡಿಸುತ್ತಾ, ಜಾತ್ಯತೀತ ಸಮಾಜದ ದನಿಯಾಗಿರುವ ಪ್ರಾಧ್ಯಾಪಕ ಪಟ್ಟಾಭಿರಾಮ ಸೋಮಯಾಜಿ ವಿರುದ್ಧವೂ ಈ ಮೂರೂರು ಭಟ್ಟ ತನ್ನ ನಾಲಿಗೆ ಹರಿದು ಬಿಟ್ಟಿದ್ದಾನೆ.

ಮಂಗಳೂರಿನಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳನ್ನು ಸೋಮಯಾಜಿ ರಾಷ್ಟ್ರೀಯ ಮಾಧ್ಯಮಗಳಿಗೆ ವಿವರಿಸಿದ್ದು ನಿಜ. ಹಾಗೆಯೇ ಈ ಹಿಂಸಾಕೃತ್ಯವನ್ನು ಖಂಡಿಸಿದ್ದೂ ಹೌದು. ಆದರೆ ಚೆಡ್ಡಿಗಳಿಗೆ ಅದನ್ನು ಸಹಿಸಲಾದೀತೆ?

ಸತ್ಯವನ್ನು ಹೇಳಲು ಯಾವ ದೊಣ್ಣೆನಾಯಕನ ಅಪ್ಪಣೆ ಬೇಕು ಎಂಬುದು ಸೋಮಯಾಜಿ ಅವರ ನಿಲುವು. ಆದರೆ 'ಟೈಮ್ಸ್ ಆಫ್ ಇಂಡಿಯಾ'ದ ಹೆಸರನ್ನು ಹೇಳದೇ ನುಣುಚಿಕೊಳ್ಳುವ ಹೇಡಿತನ ಮೂರೂರು ಭಟ್ಟನದು! ■



ಅಗಣಿತ ಆಸ್ತಿಗೆ ಯಾರ ಕಣ್ಣು?

ತಾಯಿ ಮಗನ ನಿಗೂಢ ಬದುಕು


ತನ್ನ ಒಬ್ಬನೇ ಮಗ ವಿನೋದ್‌ರಾಜ್‌ನನ್ನು ಮುಗಿಸಿ ಬಿಟ್ಟರೆ ತನ್ನಷ್ಟೂ ಆಸ್ತಿಯನ್ನು ಯಾರಾದರೂ ದೋಚಬಹುದೆಂಬ ಆತಂಕ ಲೀಲಾವತಿಯವರನ್ನು ಕಾಡುತ್ತಿದೆಯೇ? ಯಾರದು? ಇಲ್ಲಿಗೆ ಎರಡು ವರ್ಷದ ಹಿಂದೆ ಲೀಲಾವತಿಯವರ ನೆಲಮಂಗಲದ ತೋಟಕ್ಕೆ ನುಗ್ಗಿ ಅವರ ಕಾರಿನ ಮೇಲೆ ಗುಂಡು ಹಾರಿಸಿದ ಘಟನೆಗೂ ನಿನ್ನೆಯ ದುರ್ಘಟನೆಗೂ ಏನಾದರೂ ಸಂಬಂಧವಿದೆಯೇ? ಲೀಲಾವತಿಯವರ ಅಗಣಿತ ಆಸ್ತಿಗೆ ಉಳಿದೊಬ್ಬನೇ ವಾರಸುದಾರನಾದ ಮಗ ವಿನೋದ್‌ರಾಜ್‌ನನ್ನು ಕೊಂದರೆ ಯಾರಿಗೆ ಲಾಭ? ಅಥವಾ ಇಂಥದೊಂದು ಭೀತಿಗೆ ಲೀಲಾವತಿಯವರನ್ನು ತಳ್ಳಿದ್ದಾದರೂ ಯಾರು? ಯಾರದು?

ಒಂದು ಪಕ್ಷ ಯಾರಾದರೂ ಫೈರ್ ಮಾಡಿದ್ದೇ ಆಗಿದ್ದರೆ ಕಾರಿನಲ್ಲಿ ಬುಲೆಟ್ ಸಿಗಬೇಕಿತ್ತು ತಾನೆ? ಅದು ಗುಂಡಲ್ಲ ಜಲ್ಲಿಕಲ್ಲು. ರಸ್ತೆಯಲ್ಲಿ ಬಿದ್ದಿದ್ದ ಕಲ್ಲೇ ಬಸ್ಸಿನ ಚಕ್ರಕ್ಕೆ ಸಿಲುಕಿ ಸಿಡಿದು ಲೀಲಾವತಿಯವರ ಕಾರಿಗೆ ಬಡಿದಿರಬೇಕು.

ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರ ಬಾಯಿಂದ ಮೇಲಿನ ಮಾತುಗಳುದುರುತ್ತಿದ್ದರೆ ಕನ್ನಡದ ಹಿರಿಯ ನಟಿ ಲೀಲಾವತಿಯವರ ಮುಖದಲ್ಲಿ ಅಸಹನೆ ಕುದಿಯುತ್ತಿತ್ತು, ಪಕ್ಕದಲ್ಲೇ ನಿಂತಿದ್ದ ಮಗ ವಿನೋದ್‌ರಾಜ್ ಅಕ್ಷರಶಃ ಕಮೀಷನರ್ ಬಿದರಿಯ ಮಾತುಗಳನ್ನು ಅಲ್ಲಗಳೆಯುತ್ತಿದ್ದ. ಫೆಬ್ರವರಿ ಏಳರ ಬೆಳಗ್ಗೆ ಮೆಜೆಸ್ಟಿಕ್‌ನ ಶಾಂತಲಾ ಸಿಲ್ಕ್ಸ್ ಎದುರಿನ ಸಿಗ್ನಲ್‌ನಲ್ಲಿ ನಡೆದ ಅರೆಕ್ಷಣದ ಅನಾಹುತಕ್ಕೂ ಬೆಂಗಳೂರಿನ ಕ್ರೈಂ ಪ್ರವೃತ್ತಿಗೂ ಮತ್ತು ನಟಿ ಲೀಲಾವತಿ ಮಗ ವಿನೋದ್‌ರಾಜ್‌ಗೂ ಏನೇನೂ ಸಂಬಂಧವಿಲ್ಲವೆಂಬ ಕಮಿಷನರ್ ಬಿದರಿಯವರ ಮಾತನ್ನೇ ಒಪ್ಪುವುದಾದರೆ, ಏಕೆ ಲೀಲಾವತಿ ತನಗೂ ತನ್ನ ಮಗನಿಗೂ ಪೊಲೀಸ್ ರಕ್ಷಣೆಬೇಕೆಂದು ಒತ್ತಿಒತ್ತಿ ಹೇಳುತ್ತಾರೆ?

"ಪ್ರತಿನಿತ್ಯ ಮಗನೇ ಡ್ರೈವರ್ ಸೀಟನಲ್ಲಿ ಕೂತು ಕಾರು ಓಡಿಸುತ್ತಿದ್ದದ್ದನ್ನು ಗಮನಿಸಿಯೇ ಯಾರೋ ಗುಂಡು ಹಾರಿಸಿದ್ದಾರೆ "ಎಂದು ಲೀಲಾವತಿ ಏಕೆ ಮುಖ ಗಂಟಿಕ್ಕುತ್ತಾರೆ?

ತನ್ನ ಒಬ್ಬನೇ ಮಗ ವಿನೋದ್‌ರಾಜ್‌ನನ್ನು ಮುಗಿಸಿ ಬಿಟ್ಟರೆ ತನ್ನಷ್ಟೂ ಆಸ್ತಿಯನ್ನು








ಯಾರಾದರೂ ದೋಚಬಹುದೆಂಬ ಆತಂಕ ಲೀಲಾವತಿಯವರನ್ನು ಕಾಡುತ್ತಿದೆಯೇ? ಯಾರದು? ಇಲ್ಲಿಗೆ ಎರಡು ವರ್ಷದ ಹಿಂದೆ ಲೀಲಾವತಿಯವರ ನೆಲಮಂಗಲದ ತೋಟಕ್ಕೆ ನುಗ್ಗಿ ಅವರ ಕಾರಿನ ಮೇಲೆ ಗುಂಡು ಹಾರಿಸಿದ ಘಟನೆಗೂ ನಿನ್ನೆಯ ದುರ್ಘಟನೆಗೂ ಏನಾದರೂ ಸಂಬಂಧವಿದೆಯೇ?

ಯಾರೂ ಶತ್ರುಗಳಿಲ್ಲವೆಂದಾದರೆ 2006 ರಲ್ಲಿ ನೆಲಮಂಗಲದ ಅವರ ತೋಟದ ಮೇಲಾದ ದಾಳಿ, 2007 ರಲ್ಲಿ ಗಾಂಧಿನಗರದ ಲೀಲಾವತಿ ಕಂಬೈನ್ಸ್ ಮುಂದೆ ನಿಲ್ಲಿಸಿದ್ದ ಅವರ ಕಾರಿನ ಗಾಜುಗಳನ್ನು ಪುಡಿ ಮಾಡಿದ ಘಟನೆ ಇತ್ಯಾದಿಗಳೆಲ್ಲ ಏಕೆ ಒಂದರ ಮೇಲೊಂದಾಗಿ ನಡೆಯುತ್ತಲೇ ಇವೆ?

ಇಂಥ ಅನೇಕ ನಿಗೂಢಗಳನ್ನು ಕೆದಕುತ್ತಾ ಹೋದಂತೆ ತಾಯಿ ಮಗನ ವಿಲಕ್ಷಣ ಬದುಕೊಂದು ತನ್ನಿಂತಾನೇ ಅನಾವರಣಗೊಳ್ಳುತ್ತದೆ. ಅನೇಕರಿಗೆ ಗೊತ್ತಿರುವಂತೆ ಲೀಲಾವತಿ ಮತ್ತವರ ಮಗ ವಿನೋದ್‌ರಾಜ್ ಬಹುದಿನಗಳಿಂದ ವಾಸವಿದ್ದದು ಇನ್‌ಫೆಂಟ್ರಿ ರಸ್ತೆಯ ಪೊಲೀಸ್ ಕಮೀಷನರ್ ಕಚೇರಿ ಪಕ್ಕದ ಶ್ಯಾಂ ಪ್ರಕಾಶ್ ಹೋಟೆಲಿನ ಸೂಟ್ ಒಂದರಲ್ಲಿ. ಅಲ್ಲಿಂದ ಬಲವಂತವಾಗಿ ಅವರನ್ನು ಎತ್ತಿಹಾಕಿದ್ದು ಶ್ಯಾಂಪ್ರಕಾಶ್ ಹೋಟೆಲನ್ನು ಖರೀದಿಸಿದ ಎಂಬೆಸ್ಸಿ ಬಿಲ್ಡರ್ಸ್‌ನ ಮಾರ್ವಾಡಿ ಜೀತೂ ವೀರ್‍ವಾನಿ. ಆನಂತರದಿಂದ ತಮ್ಮ ನೆಲಮಂಗಲದ ಮೈಲನಾಯಕನಹಳ್ಳಿಯ ತೋಟವನ್ನೇ ಕಾಯಂ ನಿವಾಸವನ್ನಾಗಿ ಮಾಡಿಕೊಂಡ ಲೀಲಾವತಿ ಮತ್ತವರ ಮಗ ವಿನೋದ್‌ರಾಜ್ ಸುತ್ತ ಚಿತ್ರವಿಚಿತ್ರ ಘಟನಾವಳಿಗಳು ಸಂಭವಿಸಲಾರಂಭಿಸಿದ್ದು ಇಸವಿ 2006 ರ ನಂತರವೇ!



ಅದು 2006 ರ ಸೆಪ್ಟೆಂಬರ್ ತಿಂಗಳ ಒಂದು ರಾತ್ರಿ. ಆವತ್ತು ಇದ್ದಕ್ಕಿದ್ದಂತೆ ಮೈಲನಾಯಕನಹಳ್ಳಿಯ ತೋಟದ ಮುಂದೆ ನಿಲ್ಲಿಸಿದ್ದ ಲೀಲಾವತಿಯ ಕಾರಿನ ಗಾಜುಗಳು ಪುಡಿಯಾಗಿದ್ದವು. ಗುಂಡಿನ ಸದ್ದು ಕೇಳಿಬರುತ್ತಿದ್ದಂತೆ ನಾಯಿಗಳು ಬೊಗಳತೊಡಗಿದವು. ಹೋಗಿ ನೋಡಿದರೆ ಯಾರೋ ಅನಾಮಿಕನೊಬ್ಬ ಬಂದೂಕು ಹಿಡಿದುಕೊಂಡು ಓಡುತ್ತಿದ್ದ. ತೋಟದ ಕೆಲಸಗಾರನೊಬ್ಬ ಆತನನ್ನು ಬೆನ್ನಟ್ಟಿ ಹೋದರೆ ಇತ್ತ ವಿನೋದ್‌ರಾಜ್ ನೆಲಮಂಗಲದ ಪೊಲೀಸರಿಗೆ ಫೋನ್ ಮಾಡಿದ್ದಾರೆ. ಪೊಲೀಸರೂ ಬಂದಿದ್ದಾರೆ.

ಕೊನೆಗೂ ಪಕ್ಕದ ನೀಲಗಿರಿ ತೋಪೊಂದರ ಮರದ ಮರೆಯಲ್ಲಿ ಸಿಕ್ಕಿಬಿದ್ದ ಆ ಆಗುಂತಕನ ಕೈಯಲ್ಲಿದ್ದದ್ದು 22 ರೈಫಲ್. ಅದು ಮನುಷ್ಯರನ್ನು ಕೊಲ್ಲಲು ಅಗತ್ಯವಾದಷ್ಟು ಬಲಶಾಲಿ ಗುಂಡುಗಳಿಂದ ತುಂಬಿದ್ದ ರೈಫಲ್ಲಾಗಿತ್ತು. ಸಿಕ್ಕಿಬಿದ್ದ ಆತ ತಾನು ಪಕ್ಕದ ಹಳ್ಳಿಯವನೆಂದೂ ಬೇಟೆಗೆ ಬಂದಿದ್ದೇನೆಂದೂ ಬಡಬಡಿಸುತ್ತಿದ್ದ. ಗಾಬರಿಗೆ ಬಿದ್ದ ವಿನೋದ್‌ರಾಜ್ ಮತ್ತು ಲೀಲಾವತಿಯವರೆದುರೇ ನೆಲಮಂಗಲದ ಪೊಲೀಸರು ಆತನನ್ನು ಬಂಧಿಸಿ ಎಳೆದೊಯ್ದರಾದರೂ ಆನಂತರ ಇಡೀ ಪ್ರಕರಣಕ್ಕೇ ತಿಪ್ಪೇ ಸಾರಿಸಿಬಿಟ್ಟರು. ಆತ ಯಾರು? ಏಕೆ ಲೀಲಾವತಿಯವರ ಕಾರಿಗೆ ಗುಂಡು ಹಾರಿಸಿದ? ಪೊಲೀಸರೇಕೆ ಈ ಬಗ್ಗೆ ಕೆದಕದೇ ಇಡೀ ಪ್ರಕರಣದ ತನಿಖೆಯನ್ನೇ ಕೈಬಿಟ್ಟರು? ಹಾಗೊಮ್ಮೆ ತನಿಖೆ ಮಾಡಿದ್ದೇ ಆಗಿದ್ದರೆ ಏಕೆ ಲೀಲಾವತಿಯವರಿಗೆ ಈ ಬಗ್ಗೆ ಸಮಜಾಯಿಷಿ ಕೊಡಲಿಲ್ಲ? ಇತ್ಯಾದಿಗಳೆಲ್ಲವೂ ಇವತ್ತಿಗೂ ಚಿದಂಬರ ರಹಸ್ಯವೇ.

■ ರಾ. ಸೋಮನಾಥ್

ಇದಾಗಿ ಎಂಟೇ ತಿಂಗಳಿಗೆ ಅಂದರೆ 2007 ರ ಜೂನ್ ತಿಂಗಳಲ್ಲಿ ನಡೆದದ್ದು ಗಾಂಧಿನಗರದ ಅಟ್ಯಾಕ್. ಗಾಂಧಿನಗರದ ಮೋತಿಮಹಲ್ ಎದುರಿಗೇ ಇರುವ ಓಂನಿವಾಸ್ ಕಾಂಪ್ಲೆಕ್ಸ್‌ನ ಎರಡನೇ ಮಹಡಿಯಲ್ಲಿ ಲೀಲಾವತಿ ಕಂಬೈನ್ಸ್ ಇದೆ. ಅದೇ ಲೀಲಾವತಿಯವರ ಅಷ್ಟೂ ಸಿನಿಮಾ ಚಟುವಟಿಕೆಗಳ ಕೇಂದ್ರಸ್ಥಾನ. ಶತಗತಾಯ ಮಗನನ್ನು ಓರ್ವ ನಟನನ್ನಾಗಿ ಉಳಿಸಿಕೊಳ್ಳುವಲ್ಲಿ ಲೀಲಾವತಿಯವರು ಪಡುತ್ತಿರುವ ಪಾಡಿನ ಅವಶೇಷದಂತಿರುವ ಲೀಲಾವತಿ ಕಂಬೈನ್ಸ್ ಎದುರಿಗೇ ನಿಲ್ಲಿಸಿದ್ದ Toyota Lucid ಕಾರಿಗೆ ಇದ್ದಕ್ಕಿದ್ದಂತೆ ಕಿಡಿಗೇಡಿಗಳ ಹಿಂಡೊಂದು ಕಲ್ಲು ತೂರಿತು.

ಕಂಬೈನ್ಸ್‌ನ ಒಂದಿಬ್ಬರು ಸಿಬ್ಬಂದಿಗಳು ಮತ್ತು ನೆರೆಹೊರೆಯ ದಾರಿಹೋಕರು ಸೇರಿ ಕಲ್ಲು ತೂರಿದವರ ಪೈಕಿ ಒಬ್ಬಾತನನ್ನು ಹಿಡಿದರೆ, ಆತ ಗುಬ್ಬಿ ವೀರಣ್ಣನವರ ಮೊಮ್ಮಗ ಗುಬ್ಬಿ ನಟರಾಜ್. ನಟಿ ಸುಷ್ಮಾ ಎಂಬಾಕೆಗೆ ವರಸೆಯಲ್ಲಿ ತಮ್ಮನಾಗಬೇಕಿದ್ದ ಈ ಗುಬ್ಬಿ ನಟರಾಜ್ ಎಂಬ ಅರೆಕಾಲಿಕ ಸಿನಿಮಾ ನಟನೊಬ್ಬ ವಿನಾಕಾರಣ ಏಕೆ ಗ್ಯಾಂಗ್ ಕಟ್ಟಿಕೊಂಡು ಬಂದು ನಿಲ್ಲಿಸಿದ್ದ ಲೀಲಾವತಿಯವರ ಕಾರಿಗೆ ಕಲ್ಲು ತೂರಿದ ಎಂಬುದೇ ಇವತ್ತಿಗೂ ನಿಗೂಢ.

ಆವತ್ತು ಗುಬ್ಬಿ ನಟರಾಜ್ ಕಂಠಮಟ್ಟ ಕುಡಿದಿದ್ದ. ವಿನೋದ್ ರಾಜ್ ಕೆಳಗಿಳಿದು ಬಂದು ವಿಚಾರಿಸಿದರೆ ವಾಚಾಮಗೋಚರ ಬಯ್ಯುತ್ತಿದ್ದ. ಬಹುಶಃ ಕುಡಿದು ಚಿತ್ತಾಗಿ ಪುಂಡಾಟಿಕೆ ನಡೆಸಿರಬೇಕೆಂದೇ ಸುಮ್ಮನಾದರು ಲೀಲಾವತಿ ಮತ್ತು ವಿನೋದ್‌ರಾಜ್.

ಈಗ ನಡೆದಿರುವುದು ಮೂರನೇ ದಾಳಿ. ನಿನ್ನೆ 2009 ರ ಫೆಬ್ರವರಿ ಏಳರ ಬೆಳಿಗ್ಗೆ ಒಂಭತ್ತೂವರೆಯ ಹೊತ್ತಿಗೆ ಗಾಂಧಿನಗರದ ಲೀಲಾವತಿ ಕಂಬೈನ್ಸ್‌ನಿಂದಲೇ ತಮ್ಮ Toyota Lucid ಕಾರಿನಲ್ಲಿ ಲೀಲಾವತಿ ಮತ್ತು ವಿನೋದ್‌ರಾಜ್ ಹೊರಬಿದ್ದಿದ್ದಾರೆ. ಉತ್ತರಹಳ್ಳಿಯ ಅಬ್ಬಾಯಿನಾಯ್ಡು ಸ್ಟುಡಿಯೋದಲ್ಲಿ ವಿನೋದ್‌ರಾಜ್ ಅಭಿಯನಯದ 'ಯಾರದು?' ಎಂಬ ಚಿತ್ರದ ರೀರೆಕಾರ್ಡಿಂಗ್ ನಡೆಯುತ್ತಿತ್ತು. ಅದೇ ಹೊತ್ತಿಗೆ 'ಝೀ ಕನ್ನಡ' ಟೀವಿಗೆಂದು ಮಕ್ಕಳ ಡ್ಯಾನ್ಸ್ ಕಾರ್ಯಕ್ರಮವೊಂದರ ಚಿತ್ರೀಕರಣದಲ್ಲಿ ವಿನೋದ್‌ರಾಜ್ ಗಾಯಕ ರಘುದೀಕ್ಷಿತ್ ಜೊತೆ ತೀರ್ಪುಗಾರರಾಗಿ ಭಾಗವಹಿಸಬೇಕಿತ್ತು.

ಅದಕ್ಕೆಂದು ಬೆಳಿಗ್ಗೆ ಹತ್ತೂವರೆಗೇ ಅಬ್ಬಾಯಿನಾಯ್ಡು ಸ್ಟುಡಿಯೋದಲ್ಲಿ ಹಾಜರಿರಬೇಕಿದ್ದ ವಿನೋದ್‌ರಾಜ್ ಮತ್ತು ಲೀಲಾವತಿ ತಮ್ಮ ಕಾರಿನಲ್ಲಿ ಗುಬ್ಬಿ ವೀರಣ್ಣ ರಂಗಮಂದಿರದ ಸಂಧಿಯಿಂದ ಕೆಂಪೇಗೌಡ ಸರ್ಕಲ್‌ಗೆ ಬಂದು ಉಪ್ಪಾರಪೇಟೆ ಪೊಲೀಸ್ ಠಾಣೆಯ ಮುಂದಾಸಿ ಶಾಂತಲಾ ಸಿಲ್ಕ್ಸ್ ಸರ್ಕಲ್ಲಿಗೆ ಬಂದಿದ್ದಾರೆ. ಅಲ್ಲಿ ಸಿಗ್ನಲ್‌ನಲ್ಲಿ ನಿಲ್ಲುತ್ತಿದ್ದಂತೆ ಲೀಲಾವತಿಯವರನ್ನು ಕಂಡು ಭಿಕ್ಷೆ ಬೇಡುತ್ತಿದ್ದ ಒಂದಿಬ್ಬರು ಖೋಜಾಗಳು ಕಾರನ್ನು ಸಮೀಪಿಸಿದ್ದಾರೆ. ಜೊತೆಗೇ ಇನ್ನೂ ಇಬ್ಬರು ಖೋಜಾಗಳು ಸೇರಿಕೊಂಡು ಒಟ್ಟೂ ನಾಲ್ಕು ಮಂದಿ ಖೋಜಾಗಳು ಲೀಲಾವತಿಯವರ ಕಾರನ್ನು ಸುತ್ತುವರಿದು ಅವರಿಂದ ಭಕ್ಷೀಸು ಪಡೆದು ವಂದಿಸಿದ್ದಾರೆ. ಅಷ್ಟರಲ್ಲೇ ಗ್ರೀನ್ ಸಿಗ್ನಲ್ ಬಿದ್ದಿದೆ. ಲೀಲಾವತಿಯವರು ಕಾರು ಚಲಿಸಿದೆ.

ಇನ್ನೇನು ಸಿಗ್ನಲ್ ದಾಟಬೇಕೆನ್ನುವಷ್ಟರಲ್ಲೇ ಕರ್ಕಶ ಪಟಾಕಿ ಹೊಡೆದಂತೆ ಸದ್ದಾಗುವುದಕ್ಕೂ ಲೀಲಾವತಿಯವರ Toyota Lucid ಕಾರಿನ ಡ್ರೈವರ್ ಹಿಂಬದಿಯ ಬಲಬಾಗಿಲಿನ ಗ್ಲಾಸು ಚಿಂದಿಯಾಗುವುದಕ್ಕೂ ಸರಿಹೋಗಿದೆ. ಪುಡಿಯಾದ ಗ್ಲಾಸಿಗೆ ಹೊಂದಿಕೊಂಡಂತೆ ಕೂತಿದ್ದ ವಿನೋದ್‌ರಾಜ್‌ಗೆ ಏನಾಗುತ್ತಿದೆ ಎಂದು ಗೊತ್ತಾಗುವ ಮೊದಲೇ ಲೀಲಾವತಿ ಯಾರೋ ಫೈರ್ ಮಾಡಿದ್ದಾರೆ, ಗುಂಡು ಹಾರಿಸುತ್ತಿದ್ದಾರೆ ಎಂದು ಕಿರುಚಿದ್ದಾರೆ.

ತಕ್ಷಣವೇ ವಿನೋದ್‌ರಾಜ್ ಕಾರನ್ನು ಪಕ್ಕಕ್ಕೇ ನಿಲ್ಲಿಸುವಂತೆ ತಮ್ಮ ಡ್ರೈವರ್ ಬಸವರಾಜ್‌ಗೆ ಹೇಳಿದ್ದಾರೆ. ಕಾರನ್ನು ಪಕ್ಕಕ್ಕೇ ನಿಲ್ಲಿಸಿ ಟ್ರಾಫಿಕ್ ಪೊಲೀಸರಿಗೆ ನಡೆದ ಘಟನೆಯನ್ನು ವಿವರಿಸಿದ್ದಾರೆ. ಅಷ್ಟರಲ್ಲೇ ನೂರಾರು ಜನ ಲೀಲಾವತಿಯವರನ್ನು ಸುತ್ತುವರೆದು ಯಾರೋ ಗುಂಡು ಹಾರಿಸಿದ್ದಾರೆಂಬ ಸುದ್ದಿ ಹಬ್ಬಿದೆ. ತಾಯಿ ಮಗ ಇಬ್ಬರೂ ಪಕ್ಕದಲ್ಲೇ ಇದ್ದ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿದ್ದಾರೆ. ಇಷ್ಟಾಗುತ್ತಿದ್ದಂತೆ ಕಮಿಷನರ್ ಬಿದರಿ, ಡಿಸಿಪಿ ಶಿವಕುಮಾರ್, ವಿಧಿವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಮತ್ತು ಅಸಂಖ್ಯಾತ ಟೀವಿ, ಪತ್ರಿಕಾ ಫೋಟೋಗ್ರಾಫರ್‌ಗಳು ಮುತ್ತಿಕೊಂಡು ಇಡೀ ಘಟನೆಯೇ ಅಯೋಮಯವಾಗಿಬಿಟ್ಟಿದೆ.

►►►

ಮೋಪಸರ್ ಬಿದರಿ ಹೇಳುವಂತೆ
ಕಲ್ಲೊಂದು ಎದುರಿನಿಂದ ಬರುತ್ತಿದ್ದ
ಗೆ ಸಿಲುಕಿ ಸಿಡಿದಿದೆ ಎಂದೇ
ಣ. ಆದರೆ ಲೀಲಾವತಿಯವರ ಕಾರು
ದಿಕ್ಕಿಗೆ ಗ್ರೀನ್‌ಸಿಗ್ನಲ್ ಬಿದ್ದಾಗ ಎದುರು
ಯಾವುದೇ ವಾಹನ ಹೇಗೆ ಬರಲು
ದ್ಧ ದಿಕ್ಕಿನ ವಾಹನಗಳಿಗಾಗ ಕೆಂಪು
ಗ ಪಕ್ಕದ ರಸ್ತೆ ಖಾಲಿ
ಬೇಕು.

ರೆ ಕಲ್ಲು ಸಿಡಿದಿದ್ದಾದರೂ ಎಲ್ಲಿಂದ?
ವರ ಮುಂದೆ ಮತ್ತು ಹಿಂದೆ
ಕಾರುಗಳಿದ್ದವು. ಅವೆಲ್ಲವನ್ನೂ ಬಿಟ್ಟು
ವರಿದ್ದ ಕಾರಿಗೇ, ಅದೂ ಸುತ್ತುವರಿದಿದ್ದ
ನ್ನು ಹಿಂದಕ್ಕೆ ಹಾಕಿ ಕಾರು
ೇ ಸಮಯ
ಸಿಡಿಸುವಂಥ
ದರ್ಭ
ಸಾಧ್ಯ?
ನ್ನೂ ಬದಿಗಿಟ್ಟು
ನ ಇತ್ತೀಚಿನ
. ನಿಗೂಢ
ನ್ನು ಗಮನಿಸಿದರೆ
ಲ್ಲೊಂದು ರೋಚಕ
. ಈತನಕ
ಗಾಂಧಿನಗರದ ಲೀಲಾವತಿ ಕಂಬೈನ್ಸ್
ರಾತ್ರಿ ಹೊತ್ತು ತಂಗಿರದ ತಾಯಿ ಮಗ
ನೈದು ದಿನಗಳಿಂದ ನೆಲಮಂಗಲದ
ಮನೆಗೆ ಹೋಗದೇ ಏಕೆ ಇಲ್ಲೇ
ರು? ಲೀಲಾವತಿ ಕಂಬೈನ್ಸ್ ವಾಸಕ್ಕಾಗಲಿ
ಲಿ ಯೋಗ್ಯ ತಾಣವಲ್ಲ. ಎಲ್ಲಾ ಬಿಟ್ಟು
ಲ್ಲದವರಂತೆ ಕಳೆದ ಹದಿನೈದು
ತಮ್ಮ ಗಾಂಧಿನಗರದ ಕಚೇರಿಯನ್ನೇ
ಕೊಂಡಿದ್ದ ತಾಯಿಮಗನ ನಿಗೂಢ
ಕಾರಣಗಳೇನು?

ಹದಿನೈದು ದಿನಗಳಿಂದ ಗಾಂಧಿನಗರದ
ೇರಿಯಲ್ಲೇ ತಂಗಿದ್ದು ಮತ್ತು ಪ್ರತಿ ಬೆಳಗ್ಗೆ
ಸಿಲ್ಕ್ ಸರ್ಕಲ್ ಮೂಲಕವೇ
ಯ್ಯು ಸ್ಟುಡಿಯೋಗೆ ಹೋಗುತ್ತಿದ್ದದ್ದನ್ನು
ಕೃತ್ಯವೆಸಗಿರಬಹುದಾ? ಹಾಗಾದರೆ
ಯಾವ ಭೀತಿಗೆ ಬಿದ್ದು ತಾಯಿ ಮಗ ತಮ್ಮ ನೆಲಮಂಗಲದ ಮನೆಗೆ ಹೋಗದೆ ಕದ್ದೂ ಮುಚ್ಚಿ ಬದುಕುತ್ತಿದ್ದರು? ಡ್ರೈವರ್ ಸೀಟಿನಲ್ಲಿರುತ್ತಿದ್ದ ವಿನೋದ್‌ರಾಜ್‌ರನ್ನು ಗುರಿಯಾಗಿಟ್ಟುಕೊಂಡೇ ಗುಂಡು ಹೊಡೆದದ್ದು ಮತ್ತು ಕಾರು ಚಲಿಸಿದ್ದರಿಂದ ಅದು ಹಿಂದಿನ ಗಾಜಿಗೆ ಬಡಿಯಿತೆಂಬ ಲೀಲಾವತಿಯವರ ವಾದದ ಹಿಂದಿನ ಭೀತಿಗೆ ಕಾರಣವೇನು? ಈ ಹಿಂದೆ ನಡೆದ ಎರಡೂ ದಾಳಿಗಳ ಹಿನ್ನೆಲೆಯಲ್ಲೇ ಈ ಕೃತ್ಯ ನಡೆದಿದೆಯೆಂಬುದು ತಾಯಿ ಮಗನ ಬಲವಾದ ನಂಬಿಕೆ.

ಪ್ರಾರಂಭದಲ್ಲಿ ನೆಲಮಂಗಲದ ತೋಟದ ಮುಂದೆ ನಿಲ್ಲಿಸಿದ್ದ ಕಾರಿನ ಮೇಲೆ ಗುಂಡು ಹಾರಿಸಿದ ಅನಾಮಿಕ ವ್ಯಕ್ತಿ ಬೇಟೆಗೆ ಬಂದಿದ್ದೇ ನಿಜವಾಗಿದ್ದರೆ ವಿನೋದ್‌ರಾಜ್ ಕಾರಿಗೇಕೆ ಗುಂಡು



ಹಾರಿಸುತ್ತಿದ್ದ? ಬೇಟೆಯಾಡಲು ಅನುಕೂಲವಾದಂಥ ಕಾಡೇ ಇಲ್ಲದೆಡೆ ಆತ ಬೇಟೆಗೇಕೆ ಬಂದಿದ್ದ? ಲೈಸೆನ್ಸ್ ಇಲ್ಲದೇ ಬಂದೂಕು ತಂದು ಲೀಲಾವತಿಯಂಥ ಹಿರಿಯ ನಟಿಯೊಬ್ಬರ ಕಾರಿನ ಮೇಲೆ ಗುಂಡು ಹಾರಿಸಿದಾಗಲೂ ನೆಲಮಂಗಲ ಪೊಲೀಸರು ಕಾಟಾಚಾರಕ್ಕೂ ಪ್ರಕರಣ ದಾಖಲಿಸದೇ ಮುಚ್ಚಿಹಾಕಿದ್ದೇಕೆ? ಹೋಗಲಿ ಇದಾಗಿ ಎಂಟು ತಿಂಗಳಿಗೇ ಯಾವುದೇ ಕಾರಣವಿಲ್ಲದೇ ಗಾಂಧಿನಗರದಲ್ಲಿ ನಿಲ್ಲಿಸಿದ್ದ ಲೀಲಾವತಿಯವರ ಕಾರಿನ ಮೇಲೆ ಮತ್ತೊಬ್ಬ ನಟ ಗುಬ್ಬಿ ನಟರಾಜ್ ಗ್ಯಾಂಗ್ ದಾಳಿ ನಡೆಸಿದ್ದಾದರೂ ಏಕೆ? ಈಗಲೂ ಅಷ್ಟೇ ಯಾವತ್ತೂ ಇಲ್ಲದ ಕಲ್ಲು ಬೇರೆಲ್ಲಾ ಕಾರುಗಳನ್ನು ಬಿಟ್ಟು ಲೀಲಾವತಿಯವರ ಕಾರಿಗೇ ಬಡಿದದ್ದೇಕೆ?

ನಟಿ ಲೀಲಾವತಿಯವರ ಅಗಣಿತ ಆಸ್ತಿಗೆ ಉಳಿದೊಬ್ಬನೇ ವಾರಸುದಾರನಾದ ಮಗ ವಿನೋದ್‌ರಾಜ್‌ನನ್ನು ಕೊಂದರೆ ಯಾರಿಗೆ ಲಾಭ? ಅಥವಾ ಇಂಥದೊಂದು ಭೀತಿಗೆ ಲೀಲಾವತಿಯವರನ್ನು ತಳ್ಳಿದ್ದಾದರೂ ಯಾರು? ಯಾರದು? ■

...ಲ್ಲಾ ಇದ್ದೂ ಏನದು ಮೂಕವೇದನೆ?

ಷ್ಟಲ್ಲಾ ಆಸ್ತಿಗೆ ಒಬ್ಬನೇ ವಾರಸು
ದ ಮಗನನ್ನು ಮುಗಿಸಲು
ವರೂ ಯತ್ನಿಸಬಹುದೆಂಬ
ತಿಯವರ ಶಂಕೆಗೂ ಕಾರಣ
ದು ಆಸ್ತಿ. ಚೆನ್ನೈನ ಕೀಳಂಬಾ
ಆ ಕಾಲಕ್ಕೇ ಲೀಲಾವತಿ
ಖರೀದಿಸಿಟ್ಟಿದ್ದ ಆರೂವರೆ
ಫಾರ್ಮ್‌ಹೌಸ್‌ಗೆ ಈಗ
ಂದರೂ ಐವತ್ತು ಕೋಟಿಯ
ಎದುರಿಗೇ ರಜನೀಕಾಂತ್
ಇದೆ. ಪಕ್ಕದಲ್ಲೇ ಸಮುದ್ರ
ಮತ್ತು ನಾಲ್ಕು ಟ್ರ್ಯಾಕ್‌ನ
ರಸ್ತೆಯಿದೆ. ಒಂದಷ್ಟು
ಕೆಲಸಗಾರರು ಮತ್ತು ಕೆಲ
ಯಿಗಳನ್ನು ಬಿಟ್ಟರೆ ತಾಯಿ
ಅಪರೂಪಕ್ಕೊಮ್ಮೆ ಬಂದು
ತ್ತಾರೆ.



ವಲ್ಲದೇ ಚೆನ್ನೈನ ಹಳೇ
ಬಲಿಪುರಂ ರಸ್ತೆಯಲ್ಲಿ
ಅಳತೆಯ ಕಾಂಪ್ಲೆಕ್ಸ್ ಒಂದು
ವತಿಯವರಿಗಿದೆ. ವಿಚಿತ್ರವೆಂದರೆ ಕಳೆದ ನಾಲ್ಕು
ಳಿಂದ ಯಾರಿಗೂ ಬಾಡಿಗೆಗೆ ಕೊಡದೇ ಅದನ್ನು
ಬಿಟ್ಟುಕೊಂಡೇ ಕಾಲ ತಳ್ಳುತ್ತಿದ್ದಾರೆ ಅಮ್ಮ!

ತ್ತೀಚೆಗಷ್ಟೇ ಮೈಸೂರಿನ ರಾಜೀವ್‌ನಗರದಲ್ಲಿದ್ದ
ಹಳೇ ಮನೆಯನ್ನು ಐವತ್ತು ಲಕ್ಷಕ್ಕೆ ಮಾರಿಹಾಕಿದ
ವತಿಯವರಿಗೆ ನೆಲಮಂಗಲದ ಮೈಲನಾಯಕನ
ಲ್ಲಿ ಅರೆಕರೆಯ ತೋಟವಷ್ಟೇ ಅಲ್ಲದೇ
ದೇವನಹಳ್ಳಿಯಲ್ಲಿ ಆರೂವರೆ ಎಕರೆಯ
ದು ಫಾರ್ಮ್ ಹೌಸಿದೆ. ಇದರ ಹೊರತಾಗಿ
ರಿನ ವಿಜಯನಗರದಲ್ಲಿ ಸೋಮಣ್ಣನ ಮನೆ
ಎರಡನೇ ಮುಖ್ಯರಸ್ತೆಯಲ್ಲೇ 60x40
ಸೈಟೊಂದು ಲೀಲಾವತಿಯವರಿಗಿದೆಯಾದರೂ


ಅದನ್ನು ಧರ್ಮರಾಜು ಎಂಬ ಖದೀಮನೊಬ್ಬ ಆಕ್ರಮಿಸಿ ಕೂತಿದ್ದಾನೆ. ಈತ ಸೋಮಣ್ಣನ ಬಂಟ. ಪದ್ಮ ರೋಸಲಿನ್ ಎಂಬ ಘಟಾಣಿ ಹೆಂಗಸೊಬ್ಬಳನ್ನು ತಂದು ಅಲ್ಲಿಟ್ಟಿರುವ ಧರ್ಮರಾಜ್‌ಗೆ ಬೆಂಗಳೂರಿನ ಹಳೇ ರೌಡಿಗಳ ನಂಟಿದೆ. ಕಮ್ಮಿಯೆಂದರೂ ಕೋಟಿ ರೂಪಾಯಿ ಬೆಲೆಬಾಳುವ ಈ ಆಸ್ತಿ ಲೀಲಾವತಿಯವರಿಗೇ ಸೇರಿದ್ದೆಂದೂ, ಅದನ್ನು ಖಾಲಿ ಮಾಡಿಕೊಡಬೇಕೆಂದು ಕೋರ್ಟ್ ಆದೇಶವೇ ಇದೆ. ಹಾಗಿದ್ದೂ ಅದನ್ನು ದಕ್ಕಿಸಿಕೊಳ್ಳಲು ತಾಯಿ-ಮಗನಿಂದಾಗುತ್ತಿಲ್ಲ. ಸರ್ಕಾರವಾಗಲಿ, ಪೊಲೀಸರಾಗಲಿ ಈತನಕ ಪುಟ್ಟದೊಂದು ಸರ್ಕಾರಿ ಸೈಟು ಕೊಡುವುದಿರಲಿ, ಕೋರ್ಟ್ ಆದೇಶದ ಪರವಾಗಿ ಅವರ ಮನೆಯನ್ನೇ ಬಿಡಿಸಿಕೊಡಲಾಗಿಲ್ಲ.

ಈಗ ನಡೆದ ಸೋಕಾಲ್ಡ್ ಹತ್ಯಾಯತ್ನಕ್ಕೂ ವಿಜಯನಗರದ ಪಾತಕಿ ಧರ್ಮರಾಜ್‌ಗೂ ಸಂಬಂಧವಿದೆಯೇ? ಅಥವಾ ತಾನು ವಿನೋದ್‌ರಾಜ್ ಪತ್ನಿ ಎಂದು ಹೇಳಿಕೊಂಡಾಕೆಯೊಬ್ಬಳು ಆಸ್ತಿಗಾಗಿ ಇಂಥದೊಂದು ಷಡ್ಯಂತ್ರ ನಡೆಸುತ್ತಿರಬಹುದಾ?

ನಿಜಕ್ಕೂ ವಿನೋದ್‌ರಾಜ್‌ಗೆ ಮದುವೆಯಾಗಿತ್ತಾ? ಮಗುವಿದೆಯಾ? ಏಕೆ ತಾಯಿ-ಮಗ ನಿಗೂಢವಾಗಿ ಯಾರಲ್ಲೂ ಏನನ್ನೂ ಹೇಳಿಕೊಳ್ಳದೇ, ಜೀರ್ಣಿಸಿಕೊಳ್ಳಲೂ ಆಗದೇ ವಿಚಿತ್ರ ಸಂಕಟದಲ್ಲಿ ಕಾಲ ನೂಕುತ್ತಿದ್ದಾರೆ? ಏನದು ಮೂಕವೇದನೆ? ■

ವೆಂಕಟಾಚಲ ನಿಲಯಂ ಬಿಜೆಪಿ ಪುರವಾಸಂ

ಸೊಸೆಗೆ ಬುದ್ಧಿ ಹೇಳಿದ ಅತ್ತೆ ಅಗಸನ ಮನೆಗೆ ಹೋದಳೆಂಬ ಗಾದೆ ಮಾತು ಮಾಜಿ ಲೋಕಾಯುಕ್ತ ಯಂಗಟಾಚಲರಿಗೆ ಹಂಡ್ರೆಡ್ ಪರಸೆಂಟ್ ಒಪ್ಪಿಗೆಯಾಗುತ್ತದಂತಲ್ಲಾ. ಅಯ್ಕೆ ಮಾಡಿದಂತೆ ಹಲವು ಅಧಿಕಾರಿಗಳ ಅಕ್ರಮಗಳ ಮೇಲೆ ದಾಳಿ ಮಾಡಿ ಸುದ್ದಿ ಶೂರನಾಗಿದ್ದ ವೆಂಕಟಾಚಲ, ಅನಿವಾರ್ಯವಾಗಿ ನಿವೃತ್ತಿ ಪಡೆದ ಮೇಲೆ ತನ್ನ ಸಾಧನೆಗಳನ್ನು ಕಣ್ಮುಂದೆ ತಂದುಕೊಂಡು ಮನೆಯಲ್ಲಿ ಕೂರುವುದು ಬಿಟ್ಟು, ಬಿಜೆಪಿ ಗರ್ಭಗುಡಿಯ ಕಾವಲುಗಾರನಾದದಂತಲ್ಲಾ. ಬಿಜೆಪಿಯ ಸಂಪಂಗಿ ಎಂಬ ಶಾಸಕ ಬರೋಬರಿ 5 ಲಕ್ಷ ಲಂಚ ಪಡೆದು ಲೋಕಾಯುಕ್ತರ ಮಾರಿ ಬಲೆಗೆ ಬಿದ್ದು ಒದ್ದಾಡುತ್ತಿದ್ದ ದಿನವೇ ವೆಂಕಟಾಚಲ ಬಿಜೆಪಿ ಸೇರಿರುವುದು ಎಂತಹ ವಿಪರ್ಯಾಸವಲ್ಲವೇ ಎಂದು ಕರ್ನಾಟಕದ ಲೋಕಾಯುಕ್ತ ಪ್ರಿಯರು ಲೊಚಗುಟ್ಟುತ್ತಿದ್ದಾರಂತಲ್ಲಾ. ವೆಂಕಟಾಚಲನನ್ನು ಪಾರ್ಟಿಗೆ ಸೇರಿಸಿಕೊಂಡ ಚೆಡ್ಡಿಗಳು ವೆಂಕಟಾಚಲನಂತಹ ವೃದ್ಧನನ್ನು ಸಂತೆಯಲ್ಲಿ ಬಿಟ್ಟು ಪರಾರಿಯಾದಂತೆ ಕಾಣೆಯಾದರಂತಲ್ಲಾ. ವೆಂಕಟಾಚಲನ ಪರಿಸ್ಥಿತಿ ನೋಡಿದ ಬಿಜೆಪಿಯ ಮಾಜಿ ಪೊಲೀಸರು "ನಮಗೇ ಕೆಲಸವಿಲ್ಲ, ನೀವ್ಯಾಕೆ ಬಂದ್ರಿ ಇಲ್ಲಿ?" ಎಂದು ಇನ್ನು ಕೇಳಿಲ್ಲವಂತಲ್ಲಾ, ಥೂತ್ತೇರಿ!



* * * * *

ವಯೋವೃದ್ಧ ವೆಂಕಟಾಚಲ ಬಿಜೆಪಿ ಸೇರಿದ್ದನ್ನು ನೋಡಿದ ಹಲವಾರು ಜನ ಹಲವು ರೀತಿ ವ್ಯಾಖ್ಯಾನಿಸಿದ್ದಾರಂತಲ್ಲಾ. ಮೊದಲಿಂದಲೂ ಈ ಬಿಜೆಪಿ ಎಂಬ ಪಾರ್ಟಿ ಯಾರನ್ನೇ ಸೆಳೆಯಬೇಕಾದರೂ, ಮೊದಲು ಅವರ ಜೇಬು ನೋಡುತ್ತದಂತೆ. ಖ್ಯಾತಿಯನ್ನು ಪರಿಗಣಿಸುತ್ತದಂತೆ. ಪ್ರತಿಭೆಯನ್ನು ಲೆಕ್ಕ ಹಾಕಿ ಆತನ ಜಾತಿಯಿಂದ ಪಾರ್ಟಿಗಾಗುವ ಲಾಭವನ್ನು ಪರಿಶೀಲಿಸಿದ ನಂತರವೇ ಪಾರ್ಟಿಗೆ ಸೇರಿಸಿಕೊಳ್ಳುತ್ತದಂತೆ. ಆಮೇಲೆ ಅವರನ್ನು ಹೀರಿ ಹಿಪ್ಪೆ ಮಾಡಿದ ನಂತರ, ತಾತ್ಸಾರ ಮಾಡುತ್ತದಂತೆ. ದಾರಿತಪ್ಪಿ ಬಿಜೆಪಿಗೆ ಬಿದ್ದ ಮಿಕ, ಸುಮ್ಮನಿದ್ದರೆ ಸಾವು, ಕೊಸರಾಡಿದರೆ ನೋವು ಎಂಬಂತಹ ಸ್ಥಿತಿ ಅನುಭವಿಸಿ ಹೇಗೋ ಹೊರಬರುತ್ತವಂತೆ. ಆಗ ಖ್ಯಾತಿಯೂ ಇರುವುದಿಲ್ಲ, ತ್ರಾಣವೂ ಇರುವುದಿಲ್ಲ. ಇಂತಹ ಸ್ಥಿತಿಯನ್ನು ಅನುಭವಿಸಿ ಸತ್ತವರ ದೊಡ್ಡ ಪಟ್ಟಿಯೇ ಇದೆ. ಅದರಲ್ಲಿ ಹಾವನೂರು, ವೆಂಕಟಗಿರಿಗೌಡ, ಸಂಜೀಗೌಡ ಮುಂದೆ ವೆಂಕಟಾಚಲ-ಹೀಗೆ ಬಿಜೆಪಿ ಎಂಬ ಅರಗಿನ ಮನೆ ಇನ್ನೂ ಹಲವು ಜನರನ್ನು ದಹಿಸಲಿದೆಯಂತಲ್ಲಾ, ಥೂತ್ತೇರಿ!!

* * * * *

ಗುಂಡು ಕಲ್ಲಿನಂತಿದ್ದರೂ ಸಂಪಂಗಿ ಎಂಬ ಶಾಸಕ ಲಂಚದಿಂದ ಹೊಡೆಸಿಕೊಂಡ ಕರೆಂಟ್ ಶಾಕ್‌ನಿಂದ ನಿಮ್ಹಾನ್ಸ್‌ಗೆ ದಾಖಲಾಗಿದ್ದನಂತಲ್ಲಾ. ಇದಕ್ಕೆ ಕಾರಣವೇನೆಂದರೆ ಸಂಪಂಗಿ ಅಡಮಿಟ್ಟಾದ ಆಸ್ಪತ್ರೆಯವರು "ಈತನಿಗೆ ಶರೀರದ ಹೊರಗಾಗಲಿ, ಒಳಗಾಗಲಿ ಯಾವ ಕಾಯಿಲೆಯೂ ಇಲ್ಲ. ಇಂತಹ ಆರೋಗ್ಯಕರವಾದ ದೇಹ ನಮ್ಮ ಆಸ್ಪತ್ರೆಗೆ ಬಂದಿರುವುದು ಇದೇ ಮೊದಲು" ಎಂದರಂತಲ್ಲಾ. ಇದರಿಂದ ಗಲಿಬಿಲಿಯಾದ ಸಂಪಂಗಿ ಹಿಂಬಾಲಕರು "ಅಣ್ಣಾ ಇಲ್ಲಿರುವುದು ಸರಿಯಲ್ಲ, ಏಳು ಮ್ಯಾಕೆ. ಇದರಷ್ಟನಂತ ಆಸುಪತ್ರೆ ಬೆಂಗಳೂರಲ್ಲವೆ" ಎಂದು ನಿಮ್ಹಾನ್ಸ್‌ಗೆ ಸೇರಿಸಿಬಿಟ್ಟರಂತಲ್ಲಾ. ಇದರಿಂದ ಜನಪ್ರತಿನಿಧಿಯೊಬ್ಬ ನಿಮ್ಹಾನ್ಸ್‌ಗೆ ದಾಖಲಾಗಿರುವುದೂ ಮೊದಲಾಗಿ, "ತಲೆ ಕೆಟ್ಟಿರುವ ಶಾಸಕ ಅದು ಹೇಗೆ ನಮ್ಮ ಪ್ರತಿನಿಧಿಯಾಗುತ್ತಾನೆ?" ಎಂದು ಕೋಲಾರದ ಮತದಾರ ಕೋರ್ಟಿಗೆ ಹೋದರೆ ಶಾಸಕತ್ವವೇ ಅನೂರ್ಜಿತಗೊಳ್ಳುವ ಅಪಾಯವಿದೆಯಂತಲ್ಲಾ, ಥೂತ್ತೇರಿ!!

ಥೂತ್ತೇರಿ

ಯಾಹೂ

* * * * *

ಹುಚ್ಚಾಸ್ಪತ್ರೆಯಿಂದ ಬಿಡುಗಡೆಯಾದ ಸಂಪಂಗಿ ಮೊದಲು ನೋಡಿದ್ದು ನರ್ಸ್ ರೇಣುಕಾಚಾರಿಯನ್ನಂತಲ್ಲಾ. ಈ ಸ್ತ್ರೀಲೋಲಾಚಾರಿ ಸಂಪಂಗಿ ಭುಜದ ಮೇಲೆ ಕೈಹಾಕಿ "ಸಂಪಂಗಿ, ನೀನೇನು ಹೆದರಬೇಡ. ನನ್ನನ್ನು ನಿನ್ನ ಅಣ್ಣಾ ಎಂದು ತಿಳಿದುಕೊ. ಅಂತಹ ಹಣವನ್ನು ನೀನು ಕೈಯಲ್ಲಿ ಮುಟ್ಟಿದೆ. ನಾನು ಕೈಲಿ ಮುಟ್ಟಲ್ಲ, ಇಷ್ಟೇ ನನಗೂ ನಿನಗೂ ಇರುವ ವ್ಯತ್ಯಾಸ. ಸ್ವಲ್ಪ ದಿನ ಹೋದ ಮೇಲೆ ಎಲ್ಲವೂ ಸರಿಹೋಗುತ್ತದೆ. ಯಾವುದಕ್ಕೂ ನಮ್ಮ ಬ್ರದರ್ ಜನಾರ್ದನ್ ರೆಡ್ಡಿ ಭೇಟಿಯಾಗೋಣ ಬಾ. ಶಾಸಕರು ಲಂಚ ಹೊಡೆದು ಕುಬೇರರಾದರೆ ಈ ನಮ್ಮ ಬ್ರದರ್ ಬರೀ ಮಣ್ಣುತಿಂದೇ ಕುಬೇರನಾಗಿದ್ದಾನೆ" ಎಂದು ರೆಡ್ಡಿ ಬಳಿಗೆ ಕರೆದುಕೊಂಡು ಹೋಗಿ ನಿಲ್ಲಿಸಿದನಂತಲ್ಲಾ.


ಸಂಪಂಗಿಯನ್ನು ನೋಡಿ ಡಕ್ಕು ತರ ನಕ್ಕ ರೆಡ್ಡಿ "ಏನ್ರಿ ಸಂಪಂಗಿ; ನಿಮಗೆ ಹಣ ಬೇಕಾದ್ರೆ ನಮ್ಮನ್ನ ಬಂದು ಕೇಳಿ. ಎಷ್ಟು ಬೇಕಾದ್ರೂ ಕೊಡ್ತಿವಿ. ಹೋಗಿ ಹೋಗಿ ಆ ಸಾಬಿ ಹತ್ರ ಕೈ ಚಾಚಿ ಸರ್ಕಾರದ ಮರಿಯಾದಿ ಹಾಳು ಮಾಡಿದರಲ್ರೀ. ನಾವು ಯಾವತ್ತೂ ದುಡ್ಡು ತಗೊಂಡು ಸುದ್ದಿ ಮಾಡಬಾರದು. ಬದಲಾಗಿ ನಮ್ಮನ್ನು ಲಂಚ ಕೇಳಿದ್ರು ಅಂತ ಹೇಳಿ ಸುದ್ದಿ ಮಾಡಬೇಕು. ನಾನು ನೋಡಿ ಹೇಗೆ ಮಾಡಿದೆ. ಕುಮಾರಸ್ವಾಮಿ ಕೇಳಿದ್ರೆ ಸುದ್ದಿ ಮಾಡಿ ಬಿಜೆಪಿ ವರ್ಚಸ್ಸು ಜಾಸ್ತಿಯಾಗೋ ತರ ಮಾಡಿದೆ" ಎಂದನಂತಲ್ಲಾ, ಥೂತ್ತೇರಿ!!!

* * * * *

ಹಾಳು ಬಿದ್ದ ಕೋಟೆ ಕೊತ್ತಲಗಳಿಂದ ಆವೃತವಾದ ಚಿತ್ರದುರ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅದ್ವಾನಗಳು ಸರಣಿ ರೂಪದಲ್ಲಿ ನಡೆದು ಅಂತ್ಯಗೊಂಡಿತಂತಲ್ಲಾ. ಟಿವಿಯಲ್ಲಿ ಬಿತ್ತರಗೊಳ್ಳುತ್ತಿದ್ದ ಭೋಜನ ಸಾಮಗ್ರಿ ನೋಡಿ ಹೋಗಿದ್ದ ಹಲವು ಜೆಹ್ವಾಚಾಪಲ್ಯದ ಜನ "ಊಟ ಬೇಡ, ರಣಬಿಸಿಲ ಬೇಗೆಯಿಂದ ಪಾರಾಗಲು ಮಜ್ಜಿಗೆ ಸಿಕ್ಕರೆ ಸಾಕು" ಎಂದು ಪರದಾಡಿದರಂತಲ್ಲಾ. ಆಮೇಲೆ "ಯಾವುದೂ ಬೇಡ, ನಮ್ಮ ಹಣವನ್ನು ನಮಗೆ ಕೊಡಿ" ಎಂದು ಹಟ ಮಾಡಿ ಸುಮಾರು ಒಂದೂವರೆ ಕಿ.ಮೀ.ವರೆಗೂ ಕ್ಯೂ ನಿಂತು ದಿನಗೂಲಿ ನೌಕರರಂತೆ ಕಾಸು ಈಸಿಕೊಂಡು ಮುನಿಸು ಮೋರೆಯೊಂದಿಗೆ ಹೋದರಂತಲ್ಲಾ. ಇನ್ನು ಮಠಾಧಿಪತಿಗಳನ್ನು ರಾಜಕಾರಣಿಗಳನ್ನು ವ್ಯವಸ್ಥೆಯ ಕಡುಕರೆಂದು ಜರಿದಿದ್ದ ಸಮ್ಮೇಳನಾಧ್ಯಕ್ಷ ಬಸವರಾಜು ಇಂತಹ ನಿರರ್ಥಕ ಜಾತ್ರೆಯ ಬೂಸಾಗೋಷ್ಠಿಯಲ್ಲಿ ಕಾಣಿಸಿಕೊಳ್ಳದೆ ವಿಶ್ರಾಂತಿ ಪಡೆದರಂತಲ್ಲಾ, ಥೂತ್ತೇರಿ!

* * * * *

ಬಸವರಾಜು ಟೀಕೆಗೆ ಪಕ್ಕಾ ಯೋಗ್ಯರಂತಿರುವ ಸಿರಿಗೆರೆಯ ಶಿವಕುಮಾರ ಶಿವಾಚಾರ್ಯರು "ಬಸವರಾಜು ಟೀಕಿಸಿದ್ದು ನನ್ನನ್ನೆ" ಎಂಬಂತೆ ಬುಸುಗುಟ್ಟಿದ್ದಾರಂತಲ್ಲಾ. ಬಸವರಾಜು ಹೇಗೆ ಪ್ರಜ್ಞಾವಂತ ಕನ್ನಡಿಗರ ಪ್ರತಿನಿಧಿಯಾಗಿ ಸತ್ಯವನ್ನು ಮುಖಕ್ಕೆ ಹೊಡೆದಂತೆ ಹೇಳಿದ್ದಾರೆಯೋ, ಹಾಗೆ ಶಿವಕುಮಾರ ಶಿವಾಚಾರ್ಯರು ಸ್ವಾಮಿಗಳ ಹಿಂದಿನ ಪ್ರತಿನಿಧಿಯಾಗಿ ಮಾತನಾಡಿದ್ದಾರೆ. ಈ ವಿಷಯದಲ್ಲಿ ಇಬ್ಬರ ಅಭಿಪ್ರಾಯಗಳೂ ಸರಿ. ಅವರವರ ಸ್ಥಾನಕ್ಕೆ ತಕ್ಕಂತೆಯೇ ಮಾತನಾಡಿದ್ದಾರೆ ಎಂದು ಕಿ.ರಂ. ವ್ಯಾಖ್ಯಾನಿಸಿದ್ದಾರಂತಲ್ಲಾ. ಸಾದ ಜನಾಂಗದ ಪ್ರಭಾವಿ ರಾಜಕಾರಣಿಯೊಬ್ಬ ಕಾವಿತೊಟ್ಟಂತೆ ಕಾಣಿಸುವ ಶಿವಕುಮಾರಸ್ವಾಮಿ ನಡೆಸುವ ತರಳಬಾಳು ಹುಣ್ಣಿಮೆಯಿಂದ ಸಾಹಿತ್ಯ ಸಮ್ಮೇಳನ ಕಲಿಯಬೇಕಾದದ್ದು ಇದೆ. ಮೊದಲನೆಯದಾಗಿ ಸಾಹಿತ್ಯಗೋಷ್ಠಿಯ ವಿಚಾರಗಳು ಬೇಕಿದ್ದವನು ಬರುತ್ತಾನೆ, ಕೇಳುತ್ತಾನೆ, ಹೋಗಿ ಯಾವುದಾದರೂ ಹೋಟೆಲಿನಲ್ಲಿ ಇಡ್ಲಿ ತಿಂದು ಬರುತ್ತಾನೆ. ಇದು ಬಿಟ್ಟು ಊರಿಗೆಲ್ಲಾ ಅನ್ನ ಹಾಕಲು ಹೋದರೆ ಹಿಟ್ಟಿನ ಚೀಟಿ ಹಣವನ್ನು ವಾಪಸ್ಸು ಕೊಡಬೇಕಾಗುತ್ತದೆ ಎಂದು ಅತ್ತ ಸಿರಿಗೆರೆ, ಇತ್ತ ಚಿತ್ರದುರ್ಗವನ್ನು ತಡಾಯ್ಸಿ ಬಂದ ಸಾಹಿತ್ಯೋತಜೀವಿಗಳ ಹಿತೋಕ್ತಿಯಾಗಿದೆಯಲ್ಲಾ, ಥೂತ್ತೇರಿ!!! ■



ಡಸ್ಟಬಿನ್‌ನಲ್ಲಿರಬೇಕಾಗಿದ್ದ ಗುರುಪಾದಪ್ಪ ನಾಗಮಾರಪಳ್ಳಿ ಮತ್ತೆ ಚೆಡ್ಡಿ ಗೆಟಪ್‌ನಲ್ಲಿ ಪ್ರತ್ಯಕ್ಷ!

"ಚುಂಗು ಸಕ್ಕರೆ ಹಚ್ಚಿದ ನುಂಗುವ ಪೈಕಿ"ಯ ಆಸಾಮಿಯಾದ ಬೀದರಿನ ಗುರುಪಾದಪ್ಪ ನಾಗಮಾರಪಳ್ಳಿ, ಎಲ್ಲರೂ ಉಘೇಉಘೇ ಎಂದಂತೆ ಕೊನೆಗೂ ಚೆಡ್ಡಿ ತೊಟ್ಟು ತನ್ನ ಹೊಸ ಆಟ ಶುರುಮಾಡಲಿದ್ದಾನೆ. ಇಷ್ಟುದಿನ ದೆಹಲಿ ಅಮ್ಮನ ಮಡಿಲಿನಲ್ಲಿ ಓಲಾಡಿಕೊಂಡು ರಾಜಕೀಯದಲ್ಲಿ ಕದಿದು ಕಟ್ಟೆ ಹಾಕಿದ್ದು ಸಾಲದೆಂಬಂತೆ ಈಗ ಬಿಜೆಪಿ ಚೆಡ್ಡಿ ಗೆಟಪ್‌ನೊಂದಿಗೂ ಇನ್ನೊಂದಿಷ್ಟು ಕಾಲ ನಮ್ಮೆಲ್ಲರ ಎದುರು ತಾಲೀಮು ನಡೆಸಲಿದ್ದಾನೆ.

ಮೇಲುನೋಟಕ್ಕೆ ಶ್ರೀಮಂತಿಕೆಯ ಚಮಚಾವನ್ನು ಬಾಯಲ್ಲಿ ಇಟ್ಟುಕೊಂಡು ಹುಟ್ಟಿ ಬಂದಂತೆ ಕಾಣುವ ನಾಗಮಾರಪಳ್ಳಿ ಹುಟ್ಟಿದ್ದು ಬಡತನವನ್ನೇ ಹಾಸಿಹೊದ್ದುಕೊಳ್ಳುವಂತಿದ್ದ ಮನೆತನದಲ್ಲಿ. ಬೀದರ ಜಿಲ್ಲೆಯ ಔರಾದ ತಾಲೂಕಿನ ನಾಗಮಾರಪಳ್ಳಿಯಲ್ಲಿದ್ದಾಗ ಮಾಮೂಲಿ ಸಹಕಾರಿ ಸಂಘವೊಂದರ ಕಾರ್ಯದರ್ಶಿಯಾಗಿ ನೌಕರಿ ಸೇರಿದ್ದ. ಇದು ಕೂಡ ಒಮ್ಮೆಂದೊಮ್ಮೆ ದೊರೆತ ಕೆಲಸವಾಗಿರಲಿಲ್ಲ, ಅವರಿವರ ಕೈಬಾಯಲ್ಲಿ ಕೆಲಸ ಕೇಳಿ ಪಡೆದುಕೊಂಡ ಇನಾಮು ಆಗಿತ್ತು. ಆದರೆ ತಾನು ಎಲ್ಲಿಯೇ ಇದ್ದರೂ ತನ್ನ ಕೈಬಾಯಿಗಳನ್ನು ಸದಾ ಬೇರೆಯವರ ಆಮೇಧ್ಯದತ್ತಲೇ ಚಾಚುವ ಜಾಯಮಾನದ ನಾಗಮಾರಪಳ್ಳಿಗೆ ಸಹಕಾರಿ ಸಂಘದ ನೌಕರಿ, ಅದೂ ಕಾರ್ಯದರ್ಶಿಯ ನೌಕರಿ ಸಿಕ್ಕರೆ ಕೇಳಬೇಕೆ? ಅಲ್ಲೆಲ್ಲ ಸಾಕಷ್ಟು ಗಲಾಟೆ ಮಾಡಿದ. ಯಾರ ಹೆಸರಿನ ಸಾಲವೋ, ಇನ್ಯಾರದೋ ಜಾಮೀನು, ಕಚೇರಿಗೆ ಬರದವರ ಹೆಸರಿನ ಮೇಲೂ ಸಾಲಗಳಾಗಿ ಹೋದವು. ಆಮೇಲೆ ಅಲ್ಲಿಂದ ಕತ್ತು ಹಿಡಿದು ದಬ್ಬಿಸಿಕೊಂಡು ಹೊರಬಂದ. ಸಹಕಾರಿ ಇಲಾಖೆಯಲ್ಲಿ ಹೇಗೆ ದಿನದಿಂದದಿನಕ್ಕೆ ಹೆಗ್ಗಣವಾಗಿ ನಾಗಮಾರಪಳ್ಳಿ ಬಲಿತುಹೋದ ಎಂಬುದನ್ನು ಹೇಳಬೇಕಾದರೆ ಅದೇ ಒಂದು ದೊಡ್ಡ ರಾಮಾಯಣವಾಗುತ್ತದೆ.

ಆದರೇನಂತೆ "ಜಾಡಿಸಿ ಒದ್ದರೆ ಹೋಳಿಗೆ ಪುಟ್ಟಿಯಲ್ಲಿ ಹೋಗಿ ಬಿದ್ದ" ಎಂದು ಹೇಳುತ್ತಾರಲ್ಲ ಹಾಗೆ ರಾಜಕೀಯ ಪುಢಾರಿತನದ ಅಖಾಡಕ್ಕೆ ಇಳಿದುಬಿಟ್ಟ. "ಘಟಿಂಗನ ಕೊನೆಯ ಆಸರೆಯೆ ರಾಜಕೀಯ" ಎಂಬುದು ಈತನಿಗೆ ಅರ್ಥವಾಗುತ್ತಿರುವಂತೆ ತನ್ನ ಬಳಲುಗಳನ್ನು ಥಾಳವಾಗಿ ಮೂಡಿಸುತ್ತ ರಾಜಕೀಯದಲ್ಲಿ ಒಂದೊಂದೇ ಹೆಜ್ಜೆ ಇಡತೊಡಗಿದ. ಗ್ರಾಮದ ಸರಪಂಚಸ್ಥಾನವನ್ನು ಕೆಲವೇ ದಿನಗಳಲ್ಲಿ ಆಕ್ರಮಿಸಿಕೊಂಡುಬಿಟ್ಟ. ಅದೇ ಹಳ್ಳಿಯ ಸಹಕಾರ ಸಂಘವೊಂದಕ್ಕೆ ಅಧ್ಯಕ್ಷನೂ ಆದ. ಸಹಕಾರಿ ಸಂಘದ ಲೈನ್ ಸಿಕ್ಕಿದ್ದೊಂದು ತಡ, ಈತ ಏರಿದ ಏಣಿ ಇಳಿಸುವುದಕ್ಕೂ ಆಗದಷ್ಟು ಜಿಗುಟಾಗಿ ಅದಕ್ಕೆ ಅಮರಿಕೊಂಡಿದ್ದಾನೆ.

ಈ ಹಿಂದೆ ಮಾಣಿಕರಾವ್ ಪಾಟೀಲ ಎಂಬ ರಾಜಕೀಯ ಧುರೀಣ ಹಾಗೂ ರಾಜ್ಯದ ಗೃಹಮಂತ್ರಿಯ ಚುಂಗು ಹಿಡಿದು ರಾಜಕೀಯ ಪ್ರವೇಶಿಸಿದ ನಾಗಮಾರಪಳ್ಳಿ ಮುಂದೆ ಕೆಲವೇ ವರ್ಷಗಳಲ್ಲಿ ಆತನಿಗೆ ಇದಿರಾಗಿ, ಆತನನ್ನೇ ರಾಜಕೀಯವಾಗಿ ಸರ್ವನಾಶ ಮಾಡಿದ ಕೀರ್ತಿಗೂ ಭಾಜನನಾಗಿದ್ದಾನೆ. ಈ ಗುರುಪಾದಪ್ಪನ ವ್ಯಕ್ತಿತ್ವದ ವೈಶಿಷ್ಟ್ಯವೇ ಇದು. ಸ್ವತಃ ತನ್ನ ಮಗನಾದ ಉಮಾಕಾಂತ ನಾಗಮಾರಪಳ್ಳಿಯ ಖಾಸಾ ಮಾವನೊಂದಿಗೆ ಇಟ್ಟುಕೊಂಡ ದ್ವೇಷ ಅದು ಕೊಲೆಯಾಗುವವರೆಗೂ ತಮದಂಡಿಯಾಗಲಿಲ್ಲ, ಅದು ಒಳಗೊಳಗೆ ಇನ್ನೂ ಬೂದಿಮುಚ್ಚಿದ



ಕೆಂಡವಾಗಿಯೇ ಉಳಿದು ಬಿಟ್ಟಿದೆ. ಮುಂದೊಂದು ದಿನ ಮಗ ಉಮಾಕಾಂತ ನಾಗಮಾರಪಳ್ಳಿಯೇ ಸ್ವತಃ ತನ್ನ ತಂದೆಯ ಕತ್ತು ಹಿಡಿದು ಜಗಳಕ್ಕೆ ನಿಂತು ಹೊಡಿ ಬಡಿ ಮಾಡಿಕೊಂಡರೆ ಯಾರೂ ಆಶ್ಚರ್ಯಪಡುವುದಿಲ್ಲ.


ಊಸರವಳ್ಳಿಯ ಪ್ರಮುಖ ಗುಣವನ್ನು ಗುರುತಿಸಿ ಅದನ್ನು ತನ್ನ ವ್ಯಕ್ತಿತ್ವದಲ್ಲಿ ಅಂಟಿಸಿಕೊಂಡಿರುವ ನಾಗಮಾರಪಳ್ಳಿ ಅನುಗಾಲದಿಂದಲೂ ಅದರ ಜೊತೆಗೆ ಇದ್ದಾನೆ. ತನ್ನ ಮೊದಲ ಹೆಂಡತಿಗೆ ಕೈಕೊಡುವುದಕ್ಕೂ ಪೂರ್ವದಲ್ಲಿ ಆಕೆಯ ಹೆಸರಿನಲ್ಲಿರುವ ಎಲ್ಲಾ ಆಸ್ತಿಯನ್ನು ಲಪಟಾಯಿಸಿಕೊಂಡ. ಆನಂತರ ಆಕೆ ತನ್ನ ಜೊತೆ ಇದ್ದರೆಷ್ಟು ಹೋದರೆಷ್ಟು? ಎಂದು ಅಸಡ್ಡೆಯಿಂದ ಕಂಡು ಮನೆಯಿಂದಲೇ ಹೊರಹಾಕಿದ. ಆಕೆ ಈಗಲೂ ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಹಳ್ಳಿಯೊಂದರಲ್ಲಿ ಕೂಲಿ-ನಾಲಿ ಮಾಡಿಕೊಂಡಿದ್ದಾಳೆ.

ದನದಾಹಕ್ಕಾಗಿ ಏನು ಬೇಕಾದರೂ ಮಾಡಲು ನಾಗಮಾರಪಳ್ಳಿ ಹಿಂದೆಮುಂದೆ ನೋಡುವುದಿಲ್ಲ. ಪಕ್ಷ-ಗಿಕ್ಷ ಎಲ್ಲವೂ ತಂತ್ರಗಳಷ್ಟೆ. ಆತ ಹೇಗಾದರೂ ಸೈ, ಯಾರಾದರೂ ಸೈ ನಡೆಯುವ ನಾಣ್ಯವಾಗಬೇಕಾದರೆ ತಾನು ಏನು ಮಾಡಬೇಕೋ ಅದೆಲ್ಲವನ್ನು ಮಾಡಲು ತುದಿಗಾಲ ಮೇಲೆ ನಿಂತಿರುತ್ತಾನೆ. ಆರಂಭದಲ್ಲಿ ಜನತಾ ಪರಿವಾರದ ಮೂಲಕ ರಾಜಕೀಯ ಪ್ರವೇಶಿಸಿ ಔರಾದ ಕ್ಷೇತ್ರದಿಂದ ಮೂರು ಸಲ ಸತತವಾಗಿ ಗೆದ್ದು ಬಂದು ಹ್ಯಾಟ್ರಿಕ್ ವಿಜಯಿ ಅನ್ನಿಸಿಕೊಂಡ. ಆದರೆ ತಾನು ಸೋತ ಮರು ಘಳಿಗೆಯಲ್ಲಿ ಮತ್ತೆ ಕಾಂಗ್ರೆಸ್ ಅಮ್ಮನ ಮಡಿಲು ಸೇರಿಕೊಂಡ.

ರಾಜಕೀಯಕ್ಕಿಂತ ಮುಖ್ಯವಾಗಿ ಈತನಿಗೆ ಬೇಕಾಗಿರುವುದು ತಮ್ಮ ಜಿಲ್ಲೆಯಲ್ಲಿಯ ಡಿಸಿಸಿ ಬ್ಯಾಂಕ್ ಮತ್ತು ನಾರಂಜಾ ಸಕ್ಕರೆ ಕಾರ್ಖಾನೆಗಳ ಚೇರ್ಮನ್‌ಗಿರಿ. ಈ ಎರಡು ಸಹಕಾರಿ ಸಂಘಗಳೆ ನಾಗಮಾರಪಳ್ಳಿ ಇಷ್ಟೆಲ್ಲ ದೌಲತ್ತಿನಿಂದ ಮೆರೆಯುತ್ತಿರಲು ಇರುವ ಮೂಲ ಬಂಡವಾಳಗಳು. ಇವನ್ನು ಬಿಟ್ಟರೆ, ನೀರ ಬಿಟ್ಟು ಮೀನು ಒಂದುಕ್ಷಣ ಇರದೆ ಹೇಗೆ ಸಾಯುತ್ತದೋ ಹಾಗೆ ಗುರುಪಾದಪ್ಪ ಶಿವನ ಪಾದವನ್ನು ಸೇರುತ್ತಾನೆ. ಸತತ ಹಿಂಡುವ ಹೈನವಾಗಿರುವ, ನಿತ್ಯವೂ ಬಂಗಾರದ ತತ್ತಿಯನ್ನು ಕೊಡುವ ಕಾಮಧೇನು-ಕಲ್ಪವೃಕ್ಷವಾದ ಈ ಎರಡೂ ಸಂಸ್ಥೆಗಳನ್ನು ಬಿಡಲು ಈತ ಸುತರಾಂ ತಯಾರಿಲ್ಲ.

ಯಾರೇ ಕೂಗಾಡಿದರೂ, ಯಾರೆಷ್ಟೇ ಹೋರಾಡಿದರೂ ಡಿಸಿಸಿ ಬ್ಯಾಂಕ್ ಹಾಗೂ ನಾರಂಜಾ ಸಕ್ಕರೆ ಕಾರ್ಖಾನೆಗಳನ್ನು ಬಿಟ್ಟುಕೊಡಲಿಕ್ಕೆ ತಯಾರಿಲ್ಲ. ಅಥವಾ ಸದರಿ ಸಂಸ್ಥೆಗಳ ಕುರ್ಚಿಯನ್ನು ಬಿಟ್ಟು ನಾಗಮಾರಪಳ್ಳಿ

ನಿರ್ಮಲಾ ವೆಂಕಟೇಶ್ ಎಂಬ ಕಾಂಗ್ರೆಸ್‌ನ 'ರಾಮುಭಕ್ತೆ'



'ಪಬ್'ನಲ್ಲಿ ಹಲ್ಲೆಗೊಳಗಾದ ಮಹಿಳೆಯರು ಮುಂದೆ ಬಂದು ಹೇಳಿಕೆ ನೀಡಲಿಲ್ಲ, ಅವರು ಯಾರು ಎಂಬುದೂ ಗೊತ್ತಿಲ್ಲ, ಹೀಗಾಗಿ ಅವರ ಬಗ್ಗೆ ಮಾಹಿತಿ ಪಡೆಯಲೆಂದೇ ನಾನು ಜೈಲಿಗೆ ಹೋಗಿ ಹಲ್ಲೆ ನಡೆಸಿದ ಶ್ರೀರಾಮ ಸೇನೆಯ ಕಾರ್ಯಕರ್ತರನ್ನು ಭೇಟಿಯಾದೆ. ಅವರನ್ನು ಮಾತನಾಡಿಸಿದಾಗ ಅವರ ಉದ್ದೇಶ ಈ ರೀತಿಯ ಹಲ್ಲೆ ನಡೆಸುವುದಾಗಿರಲಿಲ್ಲ ಎಂಬುದು ಮನದಟ್ಟಾಯಿತು' ಹೀಗೆ ಹೇಳಿಕೆ ನೀಡಿದ ಪುಣ್ಯಾತ್ಗಿತ್ತಿಯ ಹೆಸರು ನಿರ್ಮಲಾ ವೆಂಕಟೇಶ್!

ಈಕೆ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ, ಕನ್ನಡತಿ, ಜೊತೆಗೆ ಒಂದು ಕಾಲದಲ್ಲಿ ಕಾಂಗ್ರೆಸ್ ನಾಯಕಿ.

ಮಂಗಳೂರು ಪಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಮಂಗಳೂರಿಗೆ ಭೇಟಿ ನೀಡಿ, ವರದಿಯೊಂದನ್ನು ಈಕೆ ಸಿದ್ಧಪಡಿಸಿದ್ದಾಳೆ. ಈ ವರದಿಯಲ್ಲಿ ಮಹಿಳೆಯರ ಮೇಲೆ ಹಲ್ಲೆ ನಡೆಸಿದ ಶ್ರೀ ರಾಮಸೇನೆಯ ಕಾರ್ಯಕರ್ತರೆಲ್ಲಾ ನಿರಪರಾಧಿಗಳು, ಘಟನೆ ನಡೆಯಲು ಪಬ್‌ನಲ್ಲಿನ ಭದ್ರತೆಯ ಕೊರತೆಯೇ ಕಾರಣ ಎಂದು ವಿವರಿಸಿದ್ದಾಳೆ. ಹೀಗಾಗಿ ದೇಶದ ಮಹಿಳೆಯರೆಲ್ಲಾ ಈ 'ರಾಮ ಸೇನೆ ಭಕ್ತೆ'ಗೆ ಬಾಯಿಗೆ ಬಂದಹಾಗೆ ಉಗಿಯುತ್ತಿದ್ದಾರೆ.

ಮಂಗಳೂರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು, ತಾಲಿಬಾನರಂತೆ ಆಡಳಿತ ನಡೆಸಲು ಹೊರಟಿರುವ ಸಂಘಪರಿವಾರದ ಮುಂದರ ಪರವಾಗಿ ಈಕೆ ಹೀಗೆ ವರದಿ ಕೊಟ್ಟಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಾಂಗ್ರೆಸ್‌ನಲ್ಲಿದ್ದರೂ ಬಿಜೆಪಿಯೊಂದಿಗೆ ಅನೈತಿಕ ಸಂಬಂಧ ಹೊಂದಿರುವ ನಿರ್ಮಲಾ ವೆಂಕಟೇಶ್ ಬಿಜೆಪಿಗೆ ಈ ರೀತಿಯ 'ಹೆಲ್ಪ್' ಮಾಡುತ್ತಿರುವುದು ಇದು ಎರಡನೇ ಬಾರಿ. ಈಕೆಯ ವರದಿಯಿಂದ ಸಂತುಷ್ಟರಾಗಿರುವ ಬಿಜೆಪಿ ಮಂದಿ ಈಗ ಖಾಲಿ ಇರುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಸ್ಥಾನವನ್ನು ನೀಡಲು ನಿರ್ಧರಿಸಿದ್ದಾರೆಂಬ ಸುದ್ದಿ ಬಂದಿದೆ. ಹೀಗಾಗಿ ನಿರ್ಮಲಾ ವೆಂಕಟೇಶ್ ಮುಖ್ಯಮಂತ್ರಿ ಯಡ್ಡಿಯನ್ನೂ ಭೇಟಿಮಾಡಿ ದೆಲ್ಲಿಗೆ ಹಾರಿದ್ದಾಳೆ.

ಹಿಂದೆ ಬೆಂಗಳೂರಿನ ಬ್ಯಾಂಕೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ನಿರ್ಮಲಾ ವೆಂಕಟೇಶ್ ಆಗಾಗ ಮಹಿಳಾ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಳು. ಜಾತಿಯಲ್ಲಿ ಬೋವಿಯಾದರೂ, ತಾನು ಎಸ್ಸಿ ಎಂದು ಹೇಳಿಕೊಳ್ಳುತ್ತಿದ್ದಳು. ಹೀಗಾಗಿ ಕಾಂಗ್ರೆಸ್ ನಾಯಕರಿಗೆ ಈಕೆಯ ಬಗ್ಗೆ ಒಂದಿಷ್ಟು 'ಮಮಕಾರ'ವಿತ್ತು. ಎಸ್.ಎಂ. ಕೃಷ್ಣಗೆ ಅದ್ಯಾಕೆ ಈಕೆಯ ಬಗ್ಗೆ ಮಮಕಾರ ಜಾಸ್ತಿಯಾಯಿತೋ ಗೊತ್ತಿಲ್ಲ, 2001ರಲ್ಲಿ ಈಕೆಯನ್ನು ವಿಧಾನ ಪರಿಷತ್ ಸದಸ್ಯೆಯಾಗಿ ಮಾಡಿದ್ದರು. ಅಲ್ಲಿಂದ ನಿರ್ಮಲಾ ವೆಂಕಟೇಶ್ ಹಿಂತಿರುಗಿ ನೋಡಲಿಲ್ಲ. ರಾಜ್ಯ ಕಾಂಗ್ರೆಸ್ ನಾಯಕರ ತಲೆಮೇಲೆ ಕೈಯಿಟ್ಟು, ರಾಷ್ಟ್ರ ನಾಯಕರ ಪರಿಚಯ ಮಾಡಿಕೊಳ್ಳಲಾರಂಭಿಸಿದಳು. ಹೀಗೆ ಆಕೆಗೆ ಆತ್ಮೀಯರಾದವರೆಂದರೆ ಅಜಿತ್ ಜೋಗಿ.

2004ರವರೆಗೆ ವಿಧಾನ ಪರಿಷತ್ ಸದಸ್ಯೆಯಾಗಿದ್ದ ನಿರ್ಮಲಾ ವೆಂಕಟೇಶ್ ಅಜಿತ್ ಜೋಗಿಯ ಶಿಫಾರಸ್ಸಿನಿಂದಾಗಿ 2005ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆಯಾಗಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಲಾರಂಭಿಸಿದಳು. ವಾಸ್ತವವಾಗಿ ಆಯೋಗದ ಈ ಸದಸ್ಯ ಸ್ಥಾನಕ್ಕೆ ನೇಮಕಗೊಂಡವರು ಮಾಜಿ ಸಚಿವೆ ಮೋಟಮ್ಮ. ಆದರೆ ಅದ್ಯಾಕೋ ಅವರಿಗೆ ಈ ಕೆಲಸಮಾಡಲು ಇಷ್ಟವಾಗಲಿಲ್ಲ. 'ಬೇಡ'ಎಂದು ನಯವಾಗಿ ತಿರಸ್ಕರಿಸಿದರು. ಇದನ್ನೇ ಕಾಯುತ್ತಾ ಕುಳಿತಿದ್ದವಳಂತೆ ನಿರ್ಮಲಾ ವೆಂಕಟೇಶ್ ಈ ಸ್ಥಾನಕ್ಕೆ ಹಾರಿ ಕುಳಿತಳು.

ನಿಠಾರಿ ಪ್ರಕರಣ ಸೇರಿದಂತೆ ಅನೇಕ ಘಟನೆಗಳ ಬಗ್ಗೆ ವರದಿ ನೀಡಿ ಒಂದಿಷ್ಟು ಹೆಸರು ಮಾಡಿದ್ದ ನಿರ್ಮಲಾ ವೆಂಕಟೇಶ್, ಮಂಗಳೂರಿಗೆ ಹೊರಡುತ್ತಿದ್ದಂತೆಯೇ ಸಂಘಪರಿವಾರದ ನಾಯಕರು ಆಕೆಯನ್ನು ಸಂಪರ್ಕಿಸಿ ಹಳೆಯ ಸಂಬಂಧ ನೆನಪಿಸಿರಬೇಕು. ಮಂಗಳೂರಿಗೆ ಬಂದಾಗ ಈಕೆ 'ರಾಮುಭಕ್ತೆ'ಯಾಗಿ ಮಾರ್ಪಟ್ಟಿದ್ದಳು.

...ರಬಂದನೋ ಆತನನ್ನು ಇಡೀ ಬೀದರ ...ಯ ಜನತೆ ಕ್ಯಾಕರಿಸಿ ಮಾತ್ರ ಉಗುಳದೆ ಬೀದಿ ...ದಿಗಳಲ್ಲಿ ಪೊರಕೆಯ ಸೇವೆಯನ್ನೂ ...ಡುತ್ತಾರೆ. ಆದ್ದರಿಂದಲೆ ಯಾವುದೇ ...ಖೆಯಾದರೂ ಎಂಥದ್ದೇ ಸರಕಾರಿ ಆಜ್ಞೆ ...ದ್ದರೂ ಅದನ್ನು ಉಲ್ಲಂಘಿಸಿ ಮತ್ತದೆ ಕುರ್ಚಿಗೆ ...ುರಿಕೊಂಡು ಕುಳಿತುಬಿಡುತ್ತಾನೆ.

ಸಹಕಾರಿ ಕಾಯ್ದೆಯ ಪ್ರಕಾರ ಒಂದು ...ಸ್ಥೆಯಲ್ಲಿ ಚೇರ್ಮನ್ ಆಗಿರುವಾತ ಮತ್ತೊಂದು ...ಕಾರಿ ಸಂಘಕ್ಕೆ ಅಧ್ಯಕ್ಷನಾಗುವಂತಿಲ್ಲ. ಇದಿಷ್ಟೇ ...ಲ್ಲದೆ ತೀರಾ ಇತ್ತೀಚೆಗೆ ರೈತ ಹೋರಾಟಗಾರರ ...ರತ ಹೋರಾಟದಿಂದ ಡಿಸಿಸಿ ಬ್ಯಾಂಕ್ ಅನ್ನು ...ಮೂಲಾಗ್ರ ತನಿಖೆಗೆ ಒಳಪಡಿಸಲಾಗಿತ್ತು. ಆಗ ...ಸಿ ಬ್ಯಾಂಕ್ ಕಾನೂನನ್ನೂ 'ಉಲ್ಲಂಘಿಸಿದೆ ...ದು ಸ್ಪಷ್ಟವಾಗಿ ರಾಯಚೂರಿನ ಡಿಸ್ಟ್ರಿಕ್ಟ್ ...ಿಸ್ಟ್ರರ್ 16 ಚಾರ್ಜ ಕ್ಲೇಮ್ ಮಾಡಿದ. ಆದರೆ ...ಗಮಾರಪಳ್ಳಿ ಅವುಗಳೆಲ್ಲ ಸರಕಾರದ ಸಹಕಾರಿ ...ಾಖೆಯಲ್ಲಿ ಕೊಳೆಯುವಂತೆ ಮಾಡಿದ್ದಾನೆ. ...ಶ್ವರಪ್ಪ ಚಾಕೋತೆ ಎಂಬ ಪ್ರಾಮಾಣಿಕ ...ೋರಾಟಗಾರ ಈತನ ಬೆನ್ನುಹತ್ತಿ ಕೋರ್ಟ್ ...ಕಟೆಯನ್ನೂ ಹತ್ತಿದ. ಅಲ್ಲೂ ಅದೇನು ಗಿಮಿಕ್ ...ಾಡಿದನೋ ಕಾನೂನಿನ ಬಲಿಷ್ಠವಾದ ...ಗಳಿಂದಲೂ ಅದೇಗೋ ಬಚಾವಾಗುತ್ತ ...ಡೆದಿದ್ದಾನೆ.

ಹಲಾಲಖೋರರನ್ನು ತನ್ನ ಬೆನ್ನಿಗೆ ...ಟ್ಟುಕೊಂಡು ಸಹಕಾರಿ ಸಂಘಗಳನ್ನು ...ಶಪಡಿಸಿಕೊಂಡಿರುವ ನಾಗಮಾರಪಳ್ಳಿಗೆ ಜನ ಸಾಮಾನ್ಯನ ಅಭ್ಯುದಯಕ್ಕಿಂತ ತನ್ನ ಗುಡಾಣದ್ದೇ ಸದಾ ಚಿಂತೆ. ಬಿಜೆಪಿಯ ಸರಕಾರ ಬಂದಾಗ ಆರಂಭದಲ್ಲಿ ನಾಗಮಾರಪಳ್ಳಿ ಗ್ಯಾಂಗಿಗೆ ಸ್ವಲ್ಪ ಆತಂಕವೇ ಆಗಿತ್ತು. ಆದರೆ ಯಾವಾಗ ಸಹಕಾರಿ ಇಲಾಖೆಗೆ ಲಕ್ಷ್ಮಣ ಸವದಿ ಮಂತ್ರಿಯಾದನೋ ಆಗ ನಾಗಮಾರಪಳ್ಳಿಯ ದಿಲ್ ಖುಷ್ ಆಯಿತು. ಏಕೆಂದರೆ ಇದೆ ಸವದಿಯ ಜೊತೆಗೆ ಅಪೆಕ್ಸ್ ಬ್ಯಾಂಕ್‌ನ ಡೈರೆಕ್ಟರ್ ಆಗಿ ಇಪ್ಪತ್ತು ವರ್ಷ ಕಳೆದಿದ್ದಾನೆ. ಮೇಲಾಗಿ ಸವದಿ ನಾಗಮಾರಪಳ್ಳಿಯ ಶಿಷ್ಯ. ಶಿಷ್ಯನಾಗಿರುವ ಲಕ್ಷ್ಮಣ ಸವದಿಗೆ ತನ್ನ ಗುರುವಿನ ವಿರುದ್ಧ ಕ್ರಮ ಕೈಗೊಳ್ಳುವ ತಾಕತ್ತು ಇರಲು ಸಾಧ್ಯವೆ?

ಕೇವಲ ತನ್ನ ಅಸ್ತಿತ್ವದ ಉಳಿವಿಗಾಗಿ ಚೆಡ್ಡಿ ತೊಟ್ಟುಕೊಂಡು ನಾಗಮಾರಪಳ್ಳಿ ಬಿಜೆಪಿಗೆ ಸೇರಿದ್ದಾಗಿದೆ. ಆದರೆ ಜಿಲ್ಲೆಯ ಬಿಜೆಪಿ ಪಾಳೆಯದಲ್ಲಿಯೇ ಅಪಸ್ವರ ಹಬ್ಬಿದೆ. ಜಿಲ್ಲಾ ಬಿಜೆಪಿ ಅಧ್ಯಕ್ಷ ಮದಕಟ್ಟಿ, ಭಾಲ್ಕಿಯ ಮಾಜಿ ಶಾಸಕ ಪ್ರಕಾಶ ಖಂಡ್ರೆ, ಸುಭಾಷ ಕಲ್ಲೂರ ಮುಂತಾದವರು ಒಳಗೊಳಗೇ ಒಂದೇ ಸಮ ಹಲ್ಲು ಮಸೆಯುತ್ತಿದ್ದಾರೆ.

ದಸ್ತಬಿನ್‌ಗೆ ಸೇರಬೇಕಿದ್ದ ನಾಗಮಾರಪಳ್ಳಿಯನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡಿರುವ ಭಾರತೀಯ ಜನತಾ ಪಕ್ಷ ತನ್ನ ದಿವಾಳಿತನವನ್ನು ಮತ್ತೊಮ್ಮೆ ರಾಜ್ಯದ ಜನರ ಮುಂದೆ ಪ್ರದರ್ಶಿಸಿದೆ.

■ ವರದಿಗಾರ

ನಾಗಮಾರಪಳ್ಳಿ ಎಂಬ ಪಾಳೇಗಾರ

ಬೀದರ ಜಿಲ್ಲೆಗೆ ಯಾವುದೇ ಅಧಿಕಾರಿ ಬಂದರೂ ಆತ ನಾಗಮಾರಪಳ್ಳಿಯ ಹುಕುಂ ಪಾಲಿಸಲೇ ಬೇಕು ಎಂಬ ಅಲಿಖಿತ ನಿಯಮವೆ ಇದೆ. ಇದರಲ್ಲಿ ಸ್ವಲ್ಪವೆ ಘರಾಕಾದರೂ ಸಾಕು ಆತ ಮಾರನೆಯ ದಿನವೆ ಎತ್ತಂಗಡಿ ಆಗುತ್ತಾನೆ. ಇದು ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ.



ಆದರೆ ಒಂದೆರಡು ವರ್ಷಗಳ ಹಿಂದೆ ಇಲ್ಲಿಗೆ ಜಿಲ್ಲಾಧಿಕಾರಿಯಾಗಿ ಬಂದ ಹರ್ಷಗುಪ್ತ ಎಂಬ ಅಧಿಕಾರಿ ಬೀದರ ಜಿಲ್ಲೆಯ ನಕಾಶೆಯನ್ನೆ ತನ್ನ ಅಧಿಕಾರದ ಬಲದಿಂದ ಬದಲಾಯಿಸಿದ್ದಾರೆ. ಕಾನೂನುಗಳು, ಭಾರತದ ಸಂವಿಧಾನ ಇನ್ನೂ ಬದುಕಿದೆ ಎಂಬುದನ್ನು ಸಾಮಾನ್ಯ ಜನತೆಗೆ ತೋರಿಸಿದ್ದಾರೆ. ಶ್ರೀಸಾಮಾನ್ಯನಿಗೂ ಹಾಗೂ ನಾಗಮಾರಪಳ್ಳಿಯಂಥ ಐನಾತಿ ಆಸಾಮಿಗೂ ಒಂದೇ ರೀತಿಯ ಕಾನೂನು ಇರುತ್ತದೆ ಎಂದು ತೋರಿಸಿದ್ದಾರೆ. ಇದನ್ನೇ ನೆಪವಾಗಿಟ್ಟುಕೊಂಡು ನಾಗಮಾರಪಳ್ಳಿ ಇದೀಗ ಅವರನ್ನು ಎತ್ತಂಗಡಿ ಮಾಡುವ ಹುನ್ನಾರದಲ್ಲಿದ್ದಾನೆ.

ಇಂಥ ಹಲಾಲುಖೋರ ರಾಜಕಾರಣಿಯನ್ನು ಬೀದರ ಜನತೆ ಇನ್ನೆಷ್ಟು ದಿನ ಸಹಿಸುತ್ತಾರೊ? ■

ಇದು ಮೊದಲಲ್ಲ!

ಹೌದು. ನಿರ್ಮಲಾ ವೆಂಕಟೇಶ್ ಬಿಜೆಪಿ ಪರವಾಗಿ ಹೀಗೆ ಕೆಲಸ ಮಾಡುತ್ತಿರುವುದು ಇದೇ ಮೊದಲ ಬಾರಿಯೇನೂ ಅಲ್ಲ. ಕಾಂಗ್ರೆಸ್‌ನಿಂದ ವಿಧಾನ ಪರಿಷತ್ ಸದಸ್ಯೆಯಾಗಿದ್ದರೂ ಚೊಮ್ಮನಹಳ್ಳಿ ನಗರಸಭೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಈಕೆ ಸಹಕಾರ ನೀಡಿದ್ದಳು.

ನಗರಸಭೆಯ ಅಧ್ಯಕ್ಷ ಚುನಾವಣೆ ಆಗ ಕುತೂಹಲ ಮೂಡಿಸಿತ್ತು. ಬಿಜೆಪಿ ಮತ್ತು ಕಾಂಗ್ರೆಸ್ ಸಮಬಲ ಹೊಂದಿದ್ದವು. ವಿಧಾನ ಪರಿಷತ್ ಸದಸ್ಯೆಯಾಗಿದ್ದ ನಿರ್ಮಲಾ ವೆಂಕಟೇಶ್ ಈ ಏರಿಯಾದವರೇ ಆಗಿದ್ದರಿಂದ ಅವರಿಗೂ ಮತದಾನದ ಹಕ್ಕಿತ್ತು.

ಆಗ ಬಿಜೆಪಿ ನಾಯಕರ ಆಮಿಷಕ್ಕೆ ಬಲಿಯಾಗಿದ್ದ ನಿರ್ಮಲಾ ವೆಂಕಟೇಶ್ ಮತದಾನಕ್ಕೆ ಗೈರುಹಾಜರಾಗಿ ಬಿಜೆಪಿಯ ಅಭ್ಯರ್ಥಿ ಅಧ್ಯಕ್ಷರಾಗುವಂತೆ ಮಾಡಿದ್ದರು. ಈಗ ಮಂಗಳೂರು ಪಬ್ ಪ್ರಕರಣದಿಂದ ಬಿಜೆಪಿ ಸರ್ಕಾರ ಇಕ್ಕಟ್ಟಿಗೆ ಸಿಲುಕಿರುವಾಗ, ಮಹಿಳೆಯರ ಪರವಾಗಿರಬೇಕಾಗಿದ್ದ ಈಯಮ್ಮ ದಾಳಿ ಮಾಡಿಸಿದವರ ಪರ ನಿಂತಿದ್ದಾಳೆ. ಬಿಜೆಪಿ ಸರ್ಕಾರವನ್ನು ಬಚಾವ್ ಮಾಡಲು ಹೊರಟಿದ್ದಾಳೆ.

ಈಕೆಯನ್ನು ರಾಜ್ಯದ ಕಾಂಗ್ರೆಸಿಗರು ಪಕ್ಷದಿಂದ ಓಡಿಸದಿದ್ದಲ್ಲಿ, ರಾಜ್ಯದ ಮಹಿಳೆಯರು ನಾಡಿನಿಂದ ಓಡಿಸದಿದ್ದಲ್ಲಿ ಮುಂದೆ ಇನ್ನೇನು ಅನಾಹುತ ಮಾಡುತ್ತಾಳೋ ಆ 'ಕೃಷ್ಣ' ಪರಮಾತ್ಮನಿಗೆ ಗೊತ್ತು!

ಪತ್ರಕರ್ತರಿಗೆ ಗಣಿದಣಿಗಳ ಲ್ಯಾಪ್‌ಟಾಪ್

ಬಳ್ಳಾರಿಯ ಗಣಿದಣಿಗಳು ಬೆಂಗಳೂರಿನ ಮತ್ತು ಬಳ್ಳಾರಿಯ ಕೆಲ ಪತ್ರಕರ್ತರನ್ನು ಕೊಂಡುಕೊಂಡಿರುವುದು ಹಳೇ ಸುದ್ದಿ. ಈಗ ಹೊಸ ಸುದ್ದಿಯೊಂದು ಬಂದಿದೆ. ತಮ್ಮ ಪರವಾದ ಸುದ್ದಿಗಳನ್ನು ಕಂಪೋಸ್ ಮಾಡಲು ಗಣಿದಣಿಗಳು ಬಳ್ಳಾರಿಯ ಪತ್ರಕರ್ತರಿಗೆ 'ಲ್ಯಾಪ್‌ಟಾಪ್'ನ್ನು ಉಡುಗೊರೆಯಾಗಿ ನೀಡಿದ್ದಾರೆ.

ಗಣಿ ಲೂಟಿ ಮಾಡುತ್ತಾ ಕೋಟ್ಯಂತರ ರೂ. ಗಳಿಸಿರುವ ರೆಡ್ಡಿ ಪಟಾಲಂ ಈಗಾಗಲೇ ರಾಜ್ಯ ರಾಜಕೀಯದಲ್ಲಿ ತಮ್ಮ ಪ್ರಾಬಲ್ಯ ಮೆರೆಯುತ್ತಿದ್ದಾರೆ. ರಾಜ್ಯದ ಪ್ರಮುಖ ಚೆಡ್ಡಿ ಪತ್ರಿಕೆಗಳು ಗಣಿದಣಿಗಳನ್ನು ಹೊಗಳುವುದನ್ನೇ ತಮ್ಮ ನಿತ್ಯದ ಕಾಯಕವಾಗಿ ಮಾಡಿಕೊಂಡಿವೆ. ಆದರೆ ಇದು ಸಾಲದು. ಎಲ್ಲಾ ಮಾಧ್ಯಮಗಳೂ ತಮ್ಮ ಪರವಾಗಿರಬೇಕೆಂದು ಬಯಸಿದ ಗಣಿದಣಿಗಳು ಪತ್ರಕರ್ತರಿಗೆ 'ಲ್ಯಾಪ್‌ಟಾಪ್' ಗಿಫ್ಟ್ ನೀಡಲಾರಂಭಿಸಿದ್ದಾರೆ. ಮೊದಲಿಗೆ ಬಳ್ಳಾರಿಯ ಬಹುತೇಕ ಪತ್ರಕರ್ತರು ಗಣಿಗುಂಡಿಗೆ ಬಿದ್ದಿದ್ದಾರೆ.

ಬಳ್ಳಾರಿಯ ಕೆಲ ಪತ್ರಕರ್ತರಿಗೆ ತಿಂಗಳಿಗೆ ಇಂತಿಷ್ಟು ಎಂದು ಕವರ್‌ನಲ್ಲಿ ಗೋಪ್ಯವಾಗಿ ಹಣ ಸಂದಾಯಮಾಡುತ್ತಿದ್ದ ಗಣಿದಣಿಗಳು ಈಗ ಒಂದು ಹೆಜ್ಜೆ ಮುಂದೆಹೋಗಿ ಬಹಿರಂಗವಾಗಿಯೇ ಲ್ಯಾಪ್‌ಟಾಪ್ ನೀಡಿದ್ದಾರೆ. ಗಣಿಧೂಳಿನಲ್ಲಿಯೇ ಆನಂದ ಪಡುತ್ತಿರುವ ಪತ್ರಕರ್ತರು ಇದನ್ನು ಹೆಮ್ಮೆಯಿಂದ ಸ್ವೀಕರಿಸಿ ಮನೆಗೆ ತೆಗೆದುಕೊಂಡು ಹೋಗಿದ್ದಾರಂತೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈ ಗಿಫ್ಟ್ ನೀಡಲಾಗಿದೆಯಂತೆ.

ಇನ್ನು ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಗಣಿದಣಿಗಳು ಮತ್ತಷ್ಟು ಮಿಂಚಲಿದ್ದಾರೆ ಎಂಬುದರಲ್ಲಿ ಅನುಮಾನವೇ ಇಲ್ಲ.




ಜೆಡಿಎಸ್ ಬಾಗಿಲಲ್ಲಿ ಯತ್ನಾಳ್

ಯಡ್ಡಿಯ ವೈಯಕ್ತಿಕ ದ್ವೇಷಕ್ಕೆ ಬಿಜೆಪಿಯಲ್ಲಿ ಬೀಳುತ್ತಿರುವ ಮತ್ತೊಂದು ವಿಕೆಟ್ ಎಂದರೆ ವಿಜಾಪುರದ ಸಂಸದ ಬಸವನಗೌಡ ಪಾಟೀಲ್ ಯತ್ನಾಳ್. ಅತ್ತ ಯಡ್ಡಿಯೊಂದಿಗೆ ವಿರಸ, ಇತ್ತ ಯಡ್ಡಿಯ ಬದ್ಧವೈರಿ ಅನಂತೂನೊಂದಿಗೂ ಕಡಿದ ಸ್ನೇಹ, ಎರಡೂ ಸೇರಿ ಈಗ ಯತ್ನಾಳ್ ಪಕ್ಷದೊಳಗೇ ಪರದೇಶಿಯಾಗಿಬಿಟ್ಟಿದ್ದಾರೆ. ಇನ್ನೂ ಇಲ್ಲೇ ಉಳಿದರೆ ಶಾಶ್ವತವಾಗಿ ರಾಜಕೀಯ ಸನ್ಯಾಸ ಸ್ವೀಕರಿಸಬೇಕಾಗುತ್ತದೆಂದು ಅರಿತು ಜೆಡಿಎಸ್ ಹೊಸ್ತಿಲಲ್ಲಿ ನಿಂತು ಕುಮಾರಣ್ಣನ ಆಶೀರ್ವಾದಕ್ಕಾಗಿ ಕದತಟ್ಟುತ್ತಾ ನಿಂತಿದ್ದಾರೆ. "ಕೆಲವೇ ದಿನಗಳಲ್ಲಿ ಬಿಜೆಪಿಯಲ್ಲಿ ಬಿರುಗಾಳಿ ಎಬ್ಬಿಸುತ್ತೇನೆ" ಎಂದು ಅವರು ಗುಟುರು ಹಾಕಿದ್ದೂ ಆಗಿದೆ. ಆದರೆ, ಪಕ್ಷದಲ್ಲಿ ಸೂಕ್ತ ಸ್ಥಾನ-ಮಾನಕ್ಕಾಗಿ ಆಗಾಗ 'ಪಕ್ಷ ತೊರೆಯುತ್ತೇನೆ, ಬಂಡಾಯ ಎಬ್ಬಿಸುತ್ತೇನೆ' ಎಂದೆಲ್ಲಾ ಪುಂಗಿ ಊದುವುದು ಯತ್ನಾಳ್‌ರ ಹುಟ್ಟು ಗುಣವಾದ್ದರಿಂದ ಅವರ ಮಾತನ್ನು ಯಾರೂ ಸೀರಿಯಸ್ಸಾಗಿ ತೆಗೆದುಕೊಂಡಿಲ್ಲ. ಒಂದು ರೀತಿಯಲ್ಲಿ "ತೋಳ ಬಂತು ತೋಳ" ಎಂಬ ಕತೆಯಂತಾಗಿದೆ ಯತ್ನಾಳರ ಈ ಯತ್ನ!

ಯತ್ನಾಳ್ ಬಿಜಾಪುರದ ಹಾಲಿ ಸಂಸದ. ಆದರೆ, ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಈ ಕ್ಷೇತ್ರ ಎಸ್‌ಸಿಗೆ ಮೀಸಲಾಗಿ ಹೋಗಿದ್ದು ಯಡ್ಡಿಗೆ ಯತ್ನಾಳ್‌ನನ್ನು ತುಳಿಯಲು ಒಂದು ವರವಾಗಿ ಪರಿಣಮಿಸಿತು. ಯಡ್ಡಿ ಅದನ್ನು ಚೆನ್ನಾಗಿ ಬಳಸಿಕೊಂಡರು. ಒಂದೆಡೆ, ದೇವರ ಹಿಪ್ಪರಗಿ ವಿಧಾನಸಭಾ ಕ್ಷೇತ್ರಕ್ಕೆ ಯತ್ನಾಳ್‌ಗೆ ಟಿಕೆಟ್ ಕೊಟ್ಟು ಇನ್ನೊಂದೆಡೆ ಕಾಶಿನಾಥ ಎಂಬ ಪಂಚಮಸಾಲಿಯನ್ನು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಸಿಬಿಟ್ಟರು. ಯಡ್ಡಿಯ ಲೆಕ್ಕಾಚಾರ ಸರಿಯಾಗಿಯೇ ಕೆಲಸ ಮಾಡಿತು. ಯತ್ನಾಳ್ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಅಲ್ಲಿಗೆ, ಯತ್ನಾಳ್‌ನನ್ನು ಶಾಶ್ವತವಾಗಿ ಮುಗಿಸಬೇಕೆಂಬ ಯಡ್ಡಿಯ ಪ್ಲಾನ್‌ನ ಮೊದಲ ಹಂತ ಯಶಸ್ವಿಯಾಗಿ ಪೂರ್ಣಗೊಂಡಿತು. ಅದರೊಂದಿಗೆ ರಾಜ್ಯದಲ್ಲಿ ಎಮ್ಮೆಲ್ಲೆಯಾಗಿ ಮಂತ್ರಿ ಪದವಿ ಗಿಟ್ಟಿಸಬೇಕೆಂಬ ಯತ್ನಾಳ್ ಕನಸು ನುಚ್ಚುನೂರಾಗಿ ಹೋಯಿತು.

ಈಗ ಲೋಕಸಭಾ ಚುನಾವಣೆಗಾಗಿ ಟಿಕೆಟ್ ಹಂಚುವಾಗ ಯತ್ನಾಳ್ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದನ್ನೇ ಯಡ್ಡಿ ಮತ್ತೊಂದು ಅಸ್ತ್ರವಾಗಿ ಬಿಟ್ಟರು. "ವಿಧಾನಸಭೆ ಸೀಟು ಗೆಲ್ಲಲಾರದವರು ಲೋಕಸಭೆ ಸೀಟನ್ನು ಹೇಗೆ ಗೆಲ್ಲುತ್ತಾರೆ?" ಎಂದು ನೆಪವೊಡ್ಡಿ ಯತ್ನಾಳ್‌ಗೆ ಟಿಕೆಟ್ ನಿರಾಕರಿಸಿದರು. ಅಲ್ಲಿಗೆ, ಯತ್ನಾಳ್‌ನನ್ನು ತುಳಿಯುವ ಯಡ್ಡಿಯ ಕಾರ್ಯಕ್ರಮ ಯಶಸ್ವಿಯಾಗಿ ಮುಗಿದಂತಾಯಿತು.



'ಬಿಜಾಪುರ ಎಸ್‌ಸಿ ಮೀಸಲು ಕ್ಷೇತ್ರವಾದರೇನಂತೆ, ಪಕ್ಕದ ಬಾಗಲಕೋಟೆ ಕ್ಷೇತ್ರಕ್ಕೆ ಟಿಕೆಟ್ ಕೊಡಿ' ಎಂದು ಮೊದಮೊದಲು ಯತ್ನಾಳ್ ದುಂಬಾಲು ಬಿದ್ದಿದ್ದು ನಿಜ. ಅವರ ಈ ಒತ್ತಾಯದ ಹಿಂದೆ ಒಂದು ತಾರ್ಕಿಕ ಕಾರಣವೂ ಇತ್ತು. ಪ್ರಸ್ತುತವಾಗಿ ಬಾಗಲಕೋಟೆ ಎಂಪಿಯಾಗಿರುವ ಪಿ.ಸಿ.ಗದ್ದಿಗೌಡರ್ ಗಾಣಿಗ ಜಾತಿಗೆ ಸೇರಿದವರು. ಯತ್ನಾಳ್ ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಸೇರಿದವರು. ಬಾಗಲಕೋಟೆಯಲ್ಲಿ ಬಹುಸಂಖ್ಯಾತರು, ನಿರ್ಣಾಯಕರು ಎಂದರೆ ಪಂಚಮಸಾಲಿಗಳೇ. ಹಾಗಾಗಿ ಪಂಚಮಸಾಲಿಯಾದ ತನಗೆ ಟಿಕೆಟ್ ಕೊಟ್ಟರೆ ಗೆಲ್ಲುವುದು ಗ್ಯಾರಂಟಿ ಎಂಬ ಭರವಸೆ ಯತ್ನಾಳ್‌ರದ್ದು. ಆದರೆ, ಯಡ್ಡಿ ಅದಕ್ಕೆ ಸಮ್ಮತಿಸಬೇಕಲ್ಲ? ಅದೂಅಲ್ಲದೇ, ಪಿ.ಸಿ.ಗದ್ದಿಗೌಡರ್ ಹೇಳಿಕೇಳಿ ರಮೇಶ್ ಜಿಗಜಿಣಗಿಯ ಪಟ್ಟದ ಶಿಷ್ಯ. ಅಷ್ಟು ಸುಲಭವಾಗಿ ಬಿಟ್ಟುಕೊಡುತ್ತಾರೆಯೆ?

ಯಡ್ಡಿಯ ತಂತ್ರ ಅರ್ಥವಾಗುತ್ತಿದ್ದಂತೆಯೇ ಯತ್ನಾಳ್ ಅನಂತೂ ಪಾದಕ್ಕೆರಗಿದರು. ಆದರೆ, ಅವರೂ ಕೂಡ ಯತ್ನಾಳ್‌ನನ್ನು ಹಚ್ಚಿಕೊಳ್ಳಲಿಲ್ಲ. ಅತ್ತ ಯಡ್ಡಿಯೊಂದಿಗೆ ದ್ವೇಷ, ಇತ್ತ ಅನಂತೂನೊಂದಿಗೆ ವಿರಸದಿಂದಾಗಿ ಯತ್ನಾಳ್ ಅಕ್ಷರಶಃ ಅಂತರಪಿಶಾಚಿಯಾಗಿಬಿಟ್ಟರು.

ಬಿಜೆಪಿ ಟಿಕೆಟ್ ಸಿಗೋಲ್ಲ ಎಂಬುದು ಗ್ಯಾರಂಟಿಯಾಗುತ್ತಿದ್ದಂತೆಯೇ ಯತ್ನಾಳ್ ಮೊದಲು ಕಾಂಗ್ರೆಸ್‌ನ ಕದ ತಟ್ಟಿ ಬಾಗಲಕೋಟೆಯ ಟಿಕೆಟ್‌ಗಾಗಿ ಹಂಬಲಿಸಿದರು. ಆದರೆ, ಇವರದ್ದೇ ಕುಲಬಾಂಧವರಾದ ಶಿವಾನಂದ ಪಾಟಿಲ್ ಈಗ ಇವರ ಕಡುವೈರಿ. ಅಲ್ಲದೇ ಸದ್ಯಕ್ಕೆ ರಾಜಕೀಯ ನಿರುದ್ಯೋಗಿ ಕೂಡ. ಯತ್ನಾಳ್ ಕಾಂಗ್ರೆಸ್ ಸೇರಿದರೆ ಈಗ ತಾತ್ಕಾಲಿಕವಾಗಿರುವ ರಾಜಕೀಯ ನಿರುದ್ಯೋಗ ಪರ್ಮನೆಂಟಾಗುತ್ತದೆ ಎಂಬುದನ್ನು ಚೆನ್ನಾಗಿ ಬಲ್ಲ ವ್ಯಕ್ತಿ. ಹಾಗಾಗಿ ಯತ್ನಾಳ್ ಕಾಂಗ್ರೆಸ್ ಸೇರುವುದಕ್ಕೆ ಏನೆಲ್ಲಾ ಅಡೆತಡೆಯೊಡ್ಡಬೇಕೋ ಅದನ್ನೆಲ್ಲಾ ಒಡ್ಡಿ ಹಾದಿಯಲ್ಲಿ ಮುಳ್ಳಾಗಿ ನಿಂತುಬಿಟ್ಟರು.

ಕೊನೆಗೆ ದಾರಿಕಾಣದೇ ಈಗ ಬೆಂಗಳೂರಿನ ಪದ್ಮನಾಭನಗರದ ದೊಡ್ಡ ಗೌಡರ ಬಂಗಲೆಯ ಎದುರು ನಿಂತಿದ್ದಾರೆ ಯತ್ನಾಳ್. ಕುಮಾರಣ್ಣ ಕೂಡ ಒಂದೆರಡು ಬಾರಿ ಖುದ್ದಾಗಿ ಮಾತನಾಡಿದ್ದಲ್ಲದೇ ನಿರಂತರ ಸಂಪರ್ಕದಲ್ಲಿರುವುದೂ ನಿಜ. ಜೆಡಿಎಸ್‌ಗೂ ಬಾಗಲಕೋಟೆಯಲ್ಲಿ ಹೇಳಿಕೊಳ್ಳುವಂಥ ಲೋಕಸಭಾ ಅಭ್ಯರ್ಥಿ ಇಲ್ಲ. ಜಾತಿಯಲ್ಲಿ ಪಂಚಮಸಾಲಿಯಾಗಿರುವ ಯತ್ನಾಳ್ ಬಾಗಲಕೋಟೆಯಲ್ಲಿ ಪ್ರಬಲರಾಗಿರುವ ಪಂಚಮಸಾಲಿ ಮತಗಳನ್ನು ಒಡೆಯುವಲ್ಲಿ ಯಶಸ್ವಿಯಾಗುತ್ತಾರೆಂಬುದು ಕುಮಾರಣ್ಣನ ಲೆಕ್ಕಾಚಾರ. ಹೀಗಾಗಿ, ಬಸವನಗೌಡ ಪಾಟೀಲ್ ಯತ್ನಾಳ್ ಜೆಡಿಎಸ್‌ನಿಂದ ಬಾಗಲಕೋಟೆಯಲ್ಲಿ ಸ್ಪರ್ಧಿಸುವುದು ಹೆಚ್ಚೂಕಡಿಮೆ ತೀರ್ಮಾನವಾದಂತಿದೆ. ಹಾಗೇನಾದರೂ ಆದರೆ ಯತ್ನಾಳ್ ಗೆದ್ದೇ ಗೆಲ್ಲುತ್ತಾರೆ ಎಂದು ಹೇಳುವುದು ಕಷ್ಟವಾದರೂ ಬಿಜೆಪಿಯ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಮತಗಳನ್ನು ಒಡೆದು ಅವರ ಸೋಲಿಗೆ ಕಾರಣವಂತೂ ಆಗಬಹುದು.

ಯತ್ನಾಳರ ದೃಷ್ಟಿಯಿಂದ ನೋಡಿದರೂ ಜೆಡಿಎಸ್ ಸೇರುವುದು ಅವರ ರಾಜಕೀಯ ಭವಿಷ್ಯಕ್ಕೂ ಒಳ್ಳೆಯದೆ. ಏಕೆಂದರೆ, ಬಿಜೆಪಿಯಲ್ಲಿದ್ದು ಮೂಲೆಗುಂಪಾಗುವುದಕ್ಕಿಂತ ಜೆಡಿಎಸ್‌ನಂತ ಪಕ್ಷ ಸೇರಿಕೊಂಡು ತಮ್ಮದೇ ಆದ ಜಾಗ ಮಾಡಿಕೊಳ್ಳುವುದು ಸರಿ. ಇಂದಲ್ಲಾ ನಾಳೆ ಅವರಿಗೆ ಅಲ್ಲಿ ಭವಿಷ್ಯವಿದೆ. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗುವುದನ್ನು ಬಿಟ್ಟು "ಬಿಜೆಪಿಯಲ್ಲಿ ಬಿರುಗಾಳಿ ಎಬ್ಬಿಸುತ್ತೇನೆ, ಬಂಡಾಯ ಎಬ್ಬಿಸುತ್ತೇನೆ" ಎಂತೆಲ್ಲಾ ಹಳೇ ಡೈಲಾಗ್‌ಗಳನ್ನು ಹೊಡೆಯುತ್ತಾ ಬಿಜೆಪಿ ನಾಯಕತ್ವಕ್ಕೆ ಬೆದರಿಸಿ ಟಿಕೆಟ್ ಪಡೆಯುತ್ತೇನೆಂದುಕೊಂಡರೆ ಅವರಂಥ ಅವಿವೇಕಿಗಳು ಮತ್ತೊಬ್ಬರಿಲ್ಲ.

■ ಮೇಘರಾಜ್



ಕಿರಾತಕ ಮುತಾಲಿಕ

ಪ್ರೇಮಕ್ಕೂ ಪರ್ಮಿಟ್ಟಾ?

ಪ್ರಮೋದ್ ಮುತಾಲಿಕನ ತಿಕ್ಕಲುತನಗಳು ಕರ್ನಾಟಕದ ಜನರಿಗೆ ಹೊಸದೇನಲ್ಲ. ಹೊಣೆಯರಿತ ನಾಗರಿಕ ಸರ್ಕಾರವೊಂದು ಇದ್ದಿದ್ದರೆ ಮುತಾಲಿಕ್ ಇಷ್ಟು ಹೊತ್ತಿಗೆ ಜೀವಾವಧಿ ಸೆರೆಮನೆಯಲ್ಲಿರಬೇಕಿತ್ತು. ಆದರೇನು ಮಾಡುತ್ತೀರಿ, ಈ ರಾಜ್ಯದ ಗೃಹಮಂತ್ರಿ ಒಬ್ಬ ಅಯೋಗ್ಯ, ಇನ್ನು ಮುಖ್ಯಮಂತ್ರಿಯೋ ಇದೇ ಮುತಾಲಿಕನ ಇನ್ನೊಂದು ಅವತಾರ! Valentine's Day ದಿನ ಯಾರೇ ಹುಡುಗ-ಹುಡುಗಿ ಜೊತೆಯಾಗಿ ಕಾಣಿಸಿಕೊಂಡರೆ ಈ ಶ್ರೀರಾಮ ಸೇನೆಯ ಲೋಫರ್ ಕಾರ್ಯಕರ್ತರು ಅವರನ್ನು ಹಿಡಿದು ಮದುವೆ ಮಾಡಿಸಿಬಿಡುತ್ತಾರಂತೆ, ಇಲ್ಲಾ ಒಪ್ಪದೆ ಹೋದರೆ ಸ್ಥಳದಲ್ಲೇ ರಾಖಿ ಕಟ್ಟಿಸುತ್ತಾರಂತೆ!

ಹುಚ್ಚಾಸ್ಪತ್ರೆಯಲ್ಲಿರಬೇಕಾದ ಕಮಂಗಿಯೊಬ್ಬ ಇವತ್ತು ಹಿಂದೂ ಸಂಸ್ಕೃತಿಯ ರಕ್ಷಣೆಗೆ ನಿಂತುಬಿಟ್ಟಿದ್ದಾನೆ.

ಪ್ರಮೋದ್ ಮುತಾಲಿಕನ ತಿಕ್ಕಲುತನಗಳು ಕರ್ನಾಟಕದ ಜನರಿಗೆ ಹೊಸದೇನಲ್ಲ. ಹೊಣೆಯರಿತ ನಾಗರಿಕ ಸರ್ಕಾರವೊಂದು ಇದ್ದಿದ್ದರೆ ಮುತಾಲಿಕ್ ಇಷ್ಟು ಹೊತ್ತಿಗೆ ಜೀವಾವಧಿ ಸೆರೆಮನೆಯಲ್ಲಿರಬೇಕಿತ್ತು. ಆದರೇನು ಮಾಡುತ್ತೀರಿ, ಈ ರಾಜ್ಯದ ಗೃಹಮಂತ್ರಿ ಒಬ್ಬ ಅಯೋಗ್ಯ, ಇನ್ನು ಮುಖ್ಯಮಂತ್ರಿಯೋ ಇದೇ ಮುತಾಲಿಕನ ಇನ್ನೊಂದು ಅವತಾರ!



ಇಂಥ ತ್ರಿಮೂರ್ತಿಗಳು ಒಟ್ಟಿಗೆ ಸೇರಿದರೆ ಏನೇನಾಗುವುದೋ ಅಂಥದ್ದೆಲ್ಲಾ ಈಗ ಘಟಿಸುತ್ತಿದೆ.

ನಾಳಿನ ಫೆಬ್ರವರಿ 14 ರ ಪ್ರೇಮಿಗಳ ದಿನಕ್ಕೆ (Valentine's Day) ಇವರು ಹಾಕಿರುವ ಬೆದರಿಕೆಯೂ ಅದರಲ್ಲೊಂದು.

ಅವತ್ತಿನ ದಿನ ಯಾರೇ ಹುಡುಗ-ಹುಡುಗಿ ಜೊತೆಯಾಗಿ ಕಾಣಿಸಿಕೊಂಡರೆ ಈ ಶ್ರೀರಾಮ ಸೇನೆಯ ಲೋಫರ್ ಕಾರ್ಯಕರ್ತರು ಅವರನ್ನು ಹಿಡಿದು ಮದುವೆ ಮಾಡಿಸಿಬಿಡುತ್ತಾರಂತೆ, ಇಲ್ಲಾ ಒಪ್ಪದೆ ಹೋದರೆ ಸ್ಥಳದಲ್ಲೇ ರಾಖಿ ಕಟ್ಟಿಸುತ್ತಾರಂತೆ!

ಕಳೆದ ವಾರ ತಾನೆ ಈ ಸಾಮಾಜಿಕ ಕೇಡಿಗಳ ಗುಂಪು ಮಂಗಳೂರಿನ ಪಬ್ ಮೇಲೆ ದಾಳಿ ಮಾಡಿ ಅಲ್ಲಿದ್ದ ಯುವಕ-ಯುವತಿಯರನ್ನು ಥಳಿಸಿ ದಾಂಧಲೆ ಎಬ್ಬಿಸಿದ್ದರು. 'ಇದೇನು ಅನಾಗರೀಕ ವರ್ತನೆ ಈ ಪುಂಡರನ್ನು ಕಂಟ್ರೋಲ್ ಮಾಡಬಾರದಾ?' ಅಂತ ಪತ್ರಕರ್ತರು ಕೇಳಿದರೆ ಗೃಹಮಂತ್ರಿ ಆಚಾರ್ಯನೆಂಬ ಅವಿವೇಕಿ 'ಅಪ್ಪ-ಅಮ್ಮ ಮಕ್ಕಳನ್ನು ಹದ್ದುಬಸ್ತಿನಲ್ಲಿಡಲಿ' ಎಂದಿದ್ದಾನೆ.

ಅಂದರೆ ಅಲ್ಲಿಗೆ ಶ್ರೀರಾಮ ಸೇನೆ, ಭಜರಂಗ ದಳ ಹಾಗೂ ಆಡಳಿತಾರೂಢ ಬಿಜೆಪಿಗಳು ಒಂದೇ ನಾಣ್ಯದ ಹಲವಾರು ಮುಖಗಳೆಂದಾಯಿತು. ಹಾಗಾಗಿ ಫೆಬ್ರವರಿ 14 ರಂದು ಎಲ್ಲೋ ನಾಲ್ಕಾರು ಕಡೆ ಮುತಾಲಿಕನ ದುಷ್ಟ ಗುಂಪು ಮತ್ತೆ ದಾಂಧಲೆ ನಡೆಸಿದರೂ ಪೊಲೀಸರು ಕ್ರಮ ಕೈಗೊಳ್ಳುತ್ತಾರೆಂದು ಜನ ಕಾಯುವಂತಿಲ್ಲ. ಇಂಥದಕ್ಕೆಲ್ಲಾ ಅವಕಾಶ ನೀಡದಂತೆ ಮುತಾಲಿಕನ ಮುಂಜಾಗರೂಕತಾ ಬಂಧನವಾಗುವ ಸಾಧ್ಯತೆಯೂ ಕಾಣುತ್ತಿಲ್ಲ.

ಪರಿಸ್ಥಿತಿ ಈ ಹಂತಕ್ಕೆ ಹೋದ ಮೇಲೆ ಜನ ಏನು ಮಾಡಬೇಕು?

ಕಾನೂನಿಗಿಂತಾ ದೊಡ್ಡವನಾ?

ಹಿಂದೂ ಧರ್ಮ-ಸಂಸ್ಕೃತಿಯ ಸ್ವಯಂಘೋಷಿತ ರಕ್ಷಕನಂತೆ ಪೋಸು ನೀಡುತ್ತಿರುವ ಪ್ರಮೋದ್ ಮುತಾಲಿಕನ ಪಾಲಿಗೆ ಕಾಯ್ದೆ ಕಾನೂನುಗಳೆಲ್ಲಾ ಸತ್ತು ಹೋಗಿರುವಂತಿದೆ.

ಇವನು ಮಾಲೆಗಾಂವ್ ಬಾಂಬ್ ಸ್ಫೋಟ ನಡೆಸಿದ ಕೇಸರಿ ಟೆರರಿಸ್ಟರನ್ನು ಸಮರ್ಥಿಸಿ ಹೇಳಿಕೆ ಕೊಡುತ್ತಾನೆ. ಹಿಂದೂ ಯುವಕರಿಗೆ ಬಂದೂಕು ತರಬೇತಿ ಏರ್ಪಡಿಸುತ್ತಾನೆ. ದಲಿತ-ಮುಸ್ಲಿಂ-ಕ್ರಿಶ್ಚಿಯನ್ನರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುತ್ತಾನೆ. ದಂಗೆ-ದೊಂಬಿಯ ಪ್ರಚೋದನಕಾರಿ ಭಾಷಣ ಮಾಡುತ್ತಾನೆ. ಅಮಾಯಕ ಮಹಿಳೆಯರನ್ನು ಅಟ್ಟಿಸಿಕೊಂಡು ಹೋಗಿ ಕತ್ತೆ ಕಿರುಬದಂತೆ ದಾಳಿ ಮಾಡುತ್ತಾನೆ.....

ಆಶ್ಚರ್ಯ ಅಂದರೆ ಇಷ್ಟೆಲ್ಲಾ ನೀಚ ಕೆಲಸ ಮಾಡಿಯೂ ಸರ್ವತಂತ್ರ ಸ್ವತಂತ್ರನಂತೆ ರಾಜ್ಯ ಪೂರ್ತಿ ಅರಾಮಾಗಿ ತಿರುಗಾಡಿಕೊಂಡಿದ್ದಾನೆ!

ಕರ್ನಾಟಕ ಪೊಲೀಸರು ತಿನ್ನುತ್ತಿರುವ ಹಿಂದೂ ಅಫೀಮಿನ ಪರಿಣಾಮ ಇದು.

ಇಷ್ಟೆಲ್ಲಾ ಅನಾಹುತ ಮಾಡಿದ ಮೇಲೂ ತನ್ನನ್ಯಾರು ತಡೆಯದ ಕಾರಣ ಮುತಾಲಿಕನ ಕಪಿಸೇನೆ ಈಗ ಪ್ರೇಮಿಗಳ ಮೇಲೆ ಅತ್ಯಾಚಾರ ನಡೆಸುವ ಬೆದರಿಕೆ ಹಾಕುತ್ತಿದೆ.

ಜನ ಡೋಂಟ್ ಕೇರ್

ಹಾಗೆ ಹೇಳಬೇಕೆಂದರೆ ಈ ಪ್ರೇಮಿಗಳ ದಿನ ಕರ್ನಾಟಕದ ಮಟ್ಟಿಗೆ ಒಂದು ದೊಡ್ಡ ಹಬ್ಬವೇನಲ್ಲ. ಈ ಆಚರಣೆಗೆ ನಮ್ಮ ಸಂಸ್ಕೃತಿ ಪರಂಪರೆಯ ಹಿನ್ನೆಲೆ ಇಲ್ಲ ಎಂಬುದೇನೊ ಸತ್ಯ. ಆದರೆ ಅದಕ್ಕೆ ಮುತಾಲಿಕ್ ಬೊಗಳುತ್ತಿರುವಂತೆ ಹಿಂದೂ ಧರ್ಮದ ಶ್ರೇಷ್ಠ ಸಾಂಸ್ಕೃತಿಕ ಮೌಲ್ಯಗಳು ಕಾರಣವಲ್ಲ. ಬದಲಾಗಿ ಈ ಹೊಲಸು ನಾರುವ ಹಿಂದೂ ಧರ್ಮದೊಳಗೆ ಜಾತಿ, ಉಪಜಾತಿ, ಒಳಪಂಗಡ, ಶ್ರೇಣೀಕರಣಗಳಿಂದ ಭ್ರಾತೃತ್ವ, ನೆಂಟಸ್ತಿಕೆ, ಮದುವೆ, ಪ್ರೀತಿ-ಪ್ರೇಮಗಳಿಗೆ ಅವಕಾಶವೇ ಇಲ್ಲದಿರುವುದೇ ಕಾರಣವಾಗಿದೆ. ಇಂಥ ಉಸಿರುಗಟ್ಟಿಸುವ ಸಾಮಾಜಿಕ ವ್ಯವಸ್ಥೆಯೊಳಗಿನಿಂದ ಮನುಷ್ಯ ಸಹಜ ಪ್ರೀತಿಯ ಭಾವನೆಗಳು ಅರಳಲು ಸಾಧ್ಯವೆ?

■ ಪಾರ್ವತೀಶ

ಪ್ರೇಮಿಗಳ ದಿನ ಎಂಬುದು ಸ್ವದೇಶಿಯೋ ಪರದೇಶಿಯೋ ಈ ಕಾಲಗಟ್ಟದ ಯುವಜನತೆ ಬೆರಗು ಸಂಭ್ರಮಗಳಿಂದ ಅದನ್ನು ತಮ್ಮತಮ್ಮಲ್ಲೇ ಆಚರಿಸಿಕೊಳ್ಳುತ್ತಾರೆ. ಒಬ್ಬ ಹುಡುಗ-ಹುಡುಗಿ ಕುಂತು ಮಾತಾಡಿಕೊಂಡರೆ ಒಂದು ಶುದ್ಧ ಸ್ನೇಹ ಅಥವಾ ಸಹಜ ಪ್ರೀತಿ ಬೆಳೆಸಿಕೊಂಡರೆ ಈ ಮುತಾಲಿಕನಿಗೇಕೆ ಉರಿಯಬೇಕು? ಇದಿಷ್ಟರಿಂದಲೇ ಅವನ ಮಹಾನ್ ಹಿಂದೂ ಧರ್ಮ ಕುಸಿದು ಬಿಟ್ಟುಹೋಗುತ್ತೆಂದರೆ ಅದಿನ್ನೆಂತಾ ಗದ್ದಲು ಹಿಡಿದ ಧರ್ಮವಿರಬೇಕು ಹೇಳಿ?

ಇದೆಲ್ಲಾ ತರ್ಕದ ಮಾತಾಯಿತು. ವಾಸ್ತವವಾಗಿ ಯಾರಿಗೆ ಬೇಕೊ ಬೇಡವೊ ಫೆಬ್ರವರಿ 14 ರ ಪ್ರೇಮಿಗಳ ದಿನ ತಂತಾನೆ ಬಂದುಹೋಗುತ್ತದೆ. ಮುತಾಲಿಕನ ಬೆದರಿಕೆ ಇಲ್ಲದಿದ್ದಾಗಲೂ ಈ ಪ್ರೇಮಿಗಳ ದಿನವನ್ನೇನೂ ಯಾರು ಹೋಳಿಹಬ್ಬ, ರಾಜ್ಯೋತ್ಸವದಂತೆ ಹಾದಿಬೀದಿಯಲ್ಲೆಲ್ಲಾ ಆಚರಿಸುತ್ತಿರಲಿಲ್ಲ. ಅದಕ್ಕೆಂದು ಪೊಲೀಸ್ ರಕ್ಷಣೆ ಬೇಕಿರಲಿಲ್ಲ.

ಅದೊಂಥರ ಪಿಸುಮಾತಿನ, ಕೆಲವೊಮ್ಮೆ ಮಾತೇ ಬೇಕಿರದ ಆಚರಣೆ ಮಾತ್ರ.

ಇಷ್ಟಕ್ಕೂ ಇದನ್ನು ಆಚರಿಸುವ ಲಕ್ಷಾಂತರ ಯುವಜನರನ್ನು ನಿಯಂತ್ರಿಸುವಷ್ಟು, ಕಾವಲು ನಿಲ್ಲುವಷ್ಟು ಜನರೂ ಈ ಹಡಬೆ ಮುತಾಲಿಕನ ಜೊತೆಗಿಲ್ಲ. ಅವರಿರುವುದೇ ಮೂರು ಮುಕ್ಕಾಲು ಜನ. ಜನ ರೆಡಿಯಾದರೆ ಅಂತ ಹೇಡಿಗಳನ್ನು ಅಟ್ಟಿಸಿಕೊಂಡು ಹೋಗಿ ಬಡಿದು ಬುದ್ಧಿ ಕಲಿಸುವುದೂ ಅಂತ ದೊಡ್ಡ ವಿಚಾರವೇನಲ್ಲ.

ಈ ವ್ಯಾಲೆಂಟೇನ್ಸ್ ಡೇ ಅನ್ನುವುದೂ ಒಂದು ವ್ಯಾಪಾರದ ಸರಕಾಗಿದೆ ಎಂಬ ಬಗ್ಗೆ ಆಕ್ಷೇಪವಿರುವುದು ಹೊರತುಪಡಿಸಿದರೆ ದೂರಲು ಬೇರೇನಿಲ್ಲ.

ಅದು ಪ್ರೇಮಿಗಳ ದಿನವಿರಲಿ ಇಲ್ಲಾ ಪೋಷಕರ ದಿನ, ಪರಿಸರ ದಿನಾಚರಣೆಯಾಗಲೀ ಅಂತದರಲೆಲ್ಲಾ ಮುತಾಲಿಕನಂಥ ಕಿರಾತಕರು ತಲೆ ಹಾಕಲು ಬಿಡಬಾರದೆಂಬ ಎಚ್ಚರ ಎಲ್ಲರಿಗೂ ಬರಬೇಕಿದೆ ಅಷ್ಟೆ.



ನೀವು ಏನು ಮಾಡಬಹುದು

ನಿಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ಅಡ್ಡಪಡಿಸುವ ಹಕ್ಕು ಮುತಾಲಿಕನಿಗಿರಲಿ ಬಿಜೆಪಿ ಸರ್ಕಾರಕ್ಕೂ ಇಲ್ಲ.

ಅದು ಸ್ನೇಹವಿರಲಿ ಅಥವಾ ಪ್ರೇಮವಾಗಲಿ ನಿಮಗನ್ನಿಸಿದ್ದನ್ನು ವ್ಯಕ್ತಪಡಿಸಲು ಹಿಂಜರಿಯುವ ಅಗತ್ಯವಿಲ್ಲ. ಶ್ರೀರಾಮನ ಕಪಿ ಸೈನಿಕರಿಗೆ ನೀವು ಹೆದರುವ ಅಗತ್ಯವೂ ಇಲ್ಲ.

ಈ ಕೇಡಿಗಳನ್ನು ಬಗ್ಗುಬಡಿಯಲು ನೀವೇನು ಮಾಡಬಹುದೆಂದರೆ

* ನೀವು ನಿಮ್ಮ ಗೆಳೆಯ ಅಥವಾ ಗೆಳತಿಯೊಂದಿಗಿರುವಾಗ ಯಾರೇ ಆಗಲಿ ಬಂದು ಪ್ರಶ್ನಿಸಿದರೆ ಕೂಡಲೇ ಅಂತವರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿ, ಅದಕ್ಕೆ ಸಾರ್ವಜನಿಕರ ನೆರವು ಪಡೆಯಿರಿ.
* ಗೆಳೆಯ-ಗೆಳತಿಯರ ಒಂದು ದೊಡ್ಡ ಗುಂಪಿದ್ದರೆ ಅಂತಲ್ಲಿಗೆ ಹಿಂದೂ ಕಪಿ ಸೇನೆಯ ಕಾರ್ಯಕರ್ತರು ಬಂದು ಕಿರುಕುಳ ನೀಡಿದರೆ ಮುಖಮೂತಿ ನೋಡದೆ ಏಟು ಹಾಕಿ. ನಿಮ್ಮ ಆತ್ಮರಕ್ಷಣೆಗಾಗಿ ಮಾಡುವ ಆ ಕೆಲಸ ಯಾವುದೇ ಕಾನೂನಿನ ಉಲ್ಲಂಘನೆಯಾಗುವುದಿಲ್ಲ.
* ನಿಮ್ಮ ಗೆಳೆಯ-ಗೆಳತಿಯರನ್ನು ಭೇಟಿಯಾಗುವ, ಓಡಾಡುವ ವ್ಯಾಪ್ತಿಯ ಪೊಲೀಸ್ ಠಾಣೆಯ ಫೋನ್ ನಂಬರ್ ನಿಮ್ಮಲ್ಲಿಟ್ಟುಕೊಳ್ಳಿ. ಪೊಲೀಸ್ ಕಂಟ್ರೋಲ್ ರೂಂನ ದೂರವಾಣಿ 100 ಕ್ಕೆ ಫೋನ್ ಮಾಡಿ ಕೇಳಿದರೆ ಯಾವುದೇ ಠಾಣೆಯ ನಂಬರ್ ಅನ್ನು ನೀಡುತ್ತಾರೆ.
* ವಾಲೆಂಟೈನ್ಸ್ ಡೇ ದಿನ ಸಾಧ್ಯವಾದರೆ ಪರಿಚಿತರ ಒಂದು get together ಏರ್ಪಡಿಸಿ, ಸಾಕಷ್ಟು ಪ್ರಚಾರ ಮಾಡಿ, ಹೆಚ್ಚು ಜನ ಸೇರಿಸಿ.
* ನಿಮ್ಮ ಗೆಳೆತನ, ಸೋದರ ಭಾವ, ಪ್ರೀತಿ-ಪ್ರೇಮಗಳ ಅಭಿವ್ಯಕ್ತಿಗೆ ಯಾವ ದೊಣ್ಣೆ ನಾಯಕನ ಅನುಮತಿಯೂ ನಿಮಗೆ ಬೇಕಿಲ್ಲ ಎಂಬುದನ್ನು ಸದಾ ನೆನಪಿಡಿ.

ಏನಿದು ವ್ಯಾಲೆಂಟೇನ್ಸ್ ಡೇ?

ಇದರ ಹಿನ್ನೆಲೆ ಅಸ್ಪಷ್ಟವಾಗಿದೆ. ಈ ಕಾಲದ ವ್ಯಾಲೆಂಟೇನ್ಸ್ ಡೇ ಆಚರಣೆ ಬಗ್ಗೆ ಸಿಂಪಲ್ಲಾಗಿ ಹೀಗೆ ವಿವರಿಸಬಹುದು. ಫೆಬ್ರವರಿ 14 ರ ಆ ದಿನ ಒಬ್ಬರ ಬಗ್ಗೆ ಇರುವ ಪ್ರೇಮದ ಭಾವನೆಯನ್ನು ವ್ಯಕ್ತಪಡಿಸಲು ಜನ valentine card ...ಡುತ್ತಾರೆ. ಬರೀ ಮಾತಿನಲ್ಲಿ ಹೇಳಲಾಗದ ಭಾವನೆಗಳಿಗೆ, ಪ್ರೇಮ ಯಾಚನೆಗೆ ಈ ದಿನ ಒಂದೊಳ್ಳೆ out letನಂತಿರುತ್ತದೆ. ಪ್ರೇಮಕ್ಕೆ ಮಾತ್ರವಲ್ಲ ಸರಳ ಸ್ನೇಹ-ಗೆಳೆತನ ವ್ಯಕ್ತಪಡಿಸಲೂ ಈ ದಿನ ಒಂದು ಸಾಂಕೇತಿಕ ಅಭಿವ್ಯಕ್ತಿ.

ಪ್ರಾಚೀನ ಕ್ರಿಶ್ಚಿಯನ್ ಮತಪ್ರಚಾರಕರಲ್ಲಿ ವಾಲೆಂಟೇನ್ ಹೆಸರಿನ ಅನೇಕರಿದ್ದಾರೆ. ಅವರಲ್ಲಿ ಒಬ್ಬ ವಾಲೆಂಟೇನ್ ತನ್ನ ಪ್ರೇಮ ತಿರಸ್ಕರಿಸಿದ ಒಬ್ಬಾಕೆಗೆ ತನ್ನ ಹೃದಯವನ್ನೇ ಚಾಕುವಿನಿಂದ ಬಗೆದು ತೆಗೆದು ಕಳುಹಿಸಿಬಿಟ್ಟನಂತೆ... ತನ್ನ ಪ್ರೀತಿಯ ಉತ್ಕಟತೆಗೆ ಸಾಕ್ಷಿಯಾಗಿ!

ಹೃದಯದ ಆಕಾರವು ಪ್ರೀತಿಯ ಚಿಹ್ನೆಯಾಗಿದ್ದು ಆಗಿನಿಂದಲೇ ಅಂತೆ.

ಇನ್ನೊಂದು ಕತೆ ಏನೆಂದರೆ ರೋಮ್ ಚಕ್ರವರ್ತಿ ಕ್ಲಾಡಿಯಸ್ ತನ್ನ ಸಾಮ್ರಾಜ್ಯದಲ್ಲಿ ಯುವಕರಿಗೆ ಪ್ರೇಮ-ಮದುವೆ ನಿಷೇಧಿಸಿದ್ದನಂತೆ, ಯಾಕೆ ಗೊತ್ತಾ? ಯುವಕರು ಸೈನಿಕರಾಗಲು ನಿರಾಸಕ್ತಿ ತೋರಬಹುದೆಂದು!

ಆಗ ವಾಲೆಂಟಿನ್ ಎನ್ನುವ ಪಾದ್ರಿ ಪ್ರೇಮಿಗಳ ರಹಸ್ಯ ಭೇಟಿ, ಮದುವೆ ಮಾಡಿಸುವುದು ಮುಂತಾದ ನೆರವು ನೀಡುತ್ತಿದ್ದನಂತೆ. ಕೊನೆಗೆ ಕ್ಲಾಡಿಯಸ್‌ಗೆ ಈ ವಿಚಾರ ಗೊತ್ತಾಗಿ ವಾಲೆಂಟೇನ್‌ಗೆ ಮರಣದಂಡನೆಯಾಯಿತು. ತಾನು ಸಾಯುವ ಮುನ್ನ ಸೆರಮನೆ ಅಧಿಕಾರಿಯ ಮಗಳ ಪ್ರೇಮ ಗೆದ್ದುಕೊಂಡ ಈ ಪಾದ್ರಿ ಒಂದು ಕಟ್ಟಕಡೆಯ ಪ್ರೇಮಪತ್ರ ಬರೆದು ಅದರಡಿ ವಾಲೆಂಟೇನ್ ಎಂದು ಸಹಿ ಮಾಡಿದ.

ಮುಂದೆ ಅದೇ ಒಂದು ಟ್ರೆಂಡ್ ಆಗಿ ವಾಲೆಂಟಿನ್ ಕಾರ್ಡ್‌ಗಳಾಗಿ ಕಾಣಿಸಿಕೊಂಡವು. ಇದನ್ನು ನೀವು ಯಾರಿಗಾದರೂ ಕಳುಹಿಸಲು ಅಥವಾ ಬಂದಿದ್ದನ್ನು ಪಡೆಯಲು ಮುತಾಲಿಕನ ಅಪ್ಪಣೆಗೆ ಕಾಯಬೇಕಿಲ್ಲ ಅಷ್ಟೆ.

...ದೂ ನಾಯಕರ ವಿಕೃತ ಪ್ರೇಮ!

...ಮಿಗಳ ದಿನ ಆಚರಿಸುವುದು ಭಾರತೀಯ ಸಂಸ್ಕೃತಿಯಲ್ಲ ...ಲ್ಲವೆ ಈ ಮಹಾನ್ ಹಿಂದೂ ನಾಯಕರು? ಹಾಗಾದರೆ ...ಜೆಪಿ ಪಕ್ಷದ, ನಾಯಕರ ಸಂಸ್ಕೃತಿ ಏನು?

...ದ, ಹಾದರ ಮಾಡಿದಕ್ಕಾಗಿ ಕೊಲೆ, ಆತ್ಮಹತ್ಯೆ, ರಾದ್ಧಾಂತಗಳ ...ಟನೆಗಳನ್ನೇ ಈ ನೀಚರು ಸೃಷ್ಟಿಸುತ್ತಿಲ್ಲವೆ?


...ದ್ ಮಹಾಜನ್ ಕೊಲೆ ಯಾಕಾಯಿತು?



ಬಿಜೆಪಿಗಳ ನಾಯಕ ಪ್ರಮೋದ್ ಮಹಾಜನ್‌ಗೆ ಗುಂಡಿಕ್ಕಿ ಸಾಯಿಸಿದ್ದು ಸ್ವತಃ ಅವನ ತಮ್ಮ ಪ್ರವೀಣ್ ಮಹಾಜನ್. ಮೋಸ, ವಂಚನೆಯ ಕಾರಣ ಮತ್ತು ತಮ್ಮನ ಪತ್ನಿ ಸಾರಂಗಿ ಜೊತೆ ಪ್ರಮೋದ್ ಮಹಾಜನ್ ಅಕ್ರಮ ಸಂಬಂಧ ಹೊಂದಿದ್ದ ಎಂಬ ಅನುಮಾನವೇ ಈ ಕೊಲೆಗೆ ಕಾರಣವಾಗಿತ್ತು, 2006 ರಲ್ಲಿ ನಡೆದ ...ಯ ಕಾರಣ ಬಿಜೆಪಿಗಳಿಗೂ ಗೊತ್ತು.

... ಹಿಂದೂ ಸಂಸ್ಕೃತಿಯಾ?

ರಘುಪತಿ ಭಟ್ಟ-ಪದ್ಮಪ್ರಿಯಾ



ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟನ ಕಚ್ಚೆಹರುಕುತನ ನೋಡಿ ನೋಡಿ ಬೇಸತ್ತ ಪತ್ನಿ ಪದ್ಮಪ್ರಿಯಾ ಮನೆ ತ್ಯಜಿಸಿ ಹೊರಗಡೆ ಬಂದು ಸ್ವತಂತ್ರವಾಗಿ ಬದುಕಲು ...ಸ್ವಳು. ಆದರೆ ದೆಹಲಿಯಲ್ಲಿದ್ದ ಪದ್ಮಪ್ರಿಯಾಗೆ ನೇಣು ಕಾಣಿಸಿದ್ದು ...ಳೇ. ಇವತ್ತಿನವರೆಗೂ ರಘುಪತಿ ಭಟ್ಟನ ಸ್ತ್ರೀ ಲಂಪಟತನಗಳ ...ವರು ಕನಿಷ್ಠ ಟೀಕೆಯನ್ನು ಮಾಡಿಲ್ಲ, ಇವರು ಮೆಚ್ಚ ...ಡುವ ಹಿಂದೂ ಸಂಸ್ಕೃತಿ ಇದೇನಾ?

...ತ್ರಾದೇವಿ ಹತ್ಯೆ-ಯಡ್ಡಿ ಪಾತ್ರ ಏನು?

...ನ್ಯ ಬಿಜೆಪಿಗಳ ಚಾಂಪಿಯನ್ ನಾಯಕ, ದಿನಬೆಳಗಾದರೆ ... ಧರ್ಮದ ತುತ್ತೂರಿ ಊದುವ ಮುಖ್ಯಮಂತ್ರಿ




ಯಡಿಯೂರಪ್ಪನ ಹಲ್ಕಟ್‌ಗಿರಿ ಇದು.

2004 ರ ಅಕ್ಟೋಬರ್‌ನಲ್ಲಿ ಯಡ್ಡಿ ಪತ್ನಿ ಮೈತ್ರಾದೇವಿ ಶಿವಮೊಗ್ಗದ ಅವರ ಮನೆಯಲ್ಲಿ ನಿಗೂಢವಾಗಿ ...ದರು. ಇದಕ್ಕೆ ಯಡ್ಡಿಗಿದ್ದ ಪರಸ್ತ್ರೀ ಸಂಪರ್ಕಗಳೇ ...ಗಿತ್ತೆಂಬುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ.

...ಗ ಇದನ್ನು ಆಕಸ್ಮಿಕ ಸಾವೆಂದು ಬಿಂಬಿಸಿ ಪ್ರಕರಣ ಮುಚ್ಚಹಾಕಲಾಗಿತ್ತು, ಈಗ ಶಿವಮೊಗ್ಗ ಕೋರ್ಟ್ ಮೈತ್ರಾದೇವಿ ಸಾವಿನ ಮರುತನಿಖೆ ಮಾಡಲು ಆದೇಶಿಸಿದೆ. ಹೀಗಿದೆ ಹಿಂದೂ ರಾಜಕೀಯ ನಾಯಕರ ಚಾರಿತ್ರ್ಯ.

ನರ್ಸ್ ರೇಣುಕಾಚಾರ್ಯನ ಪ್ರೇಮ ಪ್ರಕರಣ

ಮೂರು ಲೋಕಗಳಿಗೂ ಗೊತ್ತಿರುವ ಈ ಮನೋರಂಜಕ ಪ್ರೇಮ ಪ್ರಕರಣದ ನಾಯಕ ರೇಣುಕಾಚಾರ್ಯ ಹಾಲಿ ಬಿಜೆಪಿ ಶಾಸಕ. ಬಾಯಿ ತೆರೆದರೆ ಬರೀ ಸಂಸ್ಕೃತಿ, ಹಲ್ಕಾ ಮಾತಿನ ಈ ಹಡಬೆ ಹಿಂದೂ ನಾಯಕ ನರ್ಸ್ ಜಯಲಕ್ಷ್ಮೀ ಜೊತೆ ನಡೆಸಿದ



ಬಾನಾಗಡಿಯ ಫೋಟೋಗಳೆಲ್ಲಾ ಪತ್ರಿಕೆ-ಟಿವಿಯಲ್ಲಿ ಪ್ರಚಾರ ಪಡೆದಿದ್ದವು. ಆದರೇನು ಬಿಜೆಪಿಗಳು ರೇಣುಕನನ್ನು ಶಿಕ್ಷಿಸುವ ಬದಲಾಗಿ ಹಟ್ಟಿ ಚಿನ್ನದ ಗಣಿಯ ಅಧ್ಯಕ್ಷಗಿರಿಗೆ ತಂದು ಕೂರಿಸಿದ್ದಾರೆ.

ತಮ್ಮದೇ ಪಕ್ಷದ ಶಾಸಕನ ಇಂಥ ಥರ್ಡ್ ಕ್ಲಾಸ್ ವರ್ತನೆಯನ್ನು ಖಂಡಿಸಿ ಮಾತಾಡದವರು ಈಗ ಹಿಂದೂ ಸಂಸ್ಕೃತಿ ಬಗ್ಗೆ ಬೊಗಳುತ್ತಿದ್ದಾರೆ.

ವಸುಂಧರಾ-ಕಿರಣ್ ಮಜುಂದಾರ್ ವಿಕೃತ ಜೋಡಿ

2006 ರ ನವೆಂಬರ್‌ನಲ್ಲಿ ಬಹಿರಂಗವಾಗೇ ನಡೆದ ಕಿಸ್ಸಿಂಗ್ ಹಗರಣ ಇದು. ಇದ್ಯಾವ ಸೀಮೆ ಭಾರತೀಯ ಸಂಸ್ಕೃತಿಯೋ ಏನೋ. ರಾಜಸ್ಥಾನದ ಬಿಜೆಪಿ ಮುಖ್ಯಮಂತ್ರಿ ವಸುಂಧರ ರಾಜೆ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್‌ಳನ್ನು ಬರಸೆಳೆದು ತುಟಿಗೆ ತುಟಿ ಬೆಸೆದು ಮುತ್ತಿಕ್ಕಿದ್ದರು. ಆ ಘಟನೆ ದೇಶಾದ್ಯಂತ ಗೇಲಿಗೊಳಗಾಗಿತ್ತು.




ಈಗ ಹಿಂದೂ ಸಂಸ್ಕೃತಿಯ ಬಗ್ಗೆ ಬೊಗಳುತ್ತಿರುವ ಯಾವ ನಾಯಿಯೂ ಅವತ್ತು ತಮ್ಮದೇ ಗುಂಪಿನ ವಸುಂಧರಾಳನ್ನು ಏನಿದು ನಿನ್ನ ಕುಚೇಷ್ಟೆ ಎಂದು ಟೀಕಿಸಲಿಲ್ಲ, ಪ್ರಶ್ನಿಸಿಯೂ ಇರಲಿಲ್ಲ, ಹುಡುಕಿ ಹೇಳಿದರೆ ಇಂಥ ಇನ್ನೂ ನೂರು ಕೊಳೆತ ಹೆಗ್ಗಣಗಳು ಈ ಬಿಜೆಪಿಗಳ ತಟ್ಟೆಯಲ್ಲಿ ಕಾಣಸಿಗುತ್ತದೆ.

ಒಬ್ಬ ಹುಡುಗ-ಹುಡುಗಿ ನಿಂತು ಮಾತಾಡಿದರೆ, ಓಡಾಡಿದರೆ ಪ್ರೀತಿಸಿದರೆ ತಪ್ಪೆನ್ನುತ್ತಾರಲ್ಲ, ಇದರಲ್ಲಿ ಅನೈತಿಕವಾದದ್ದು ಏನಿದೆ?

ಜನರಿಗೆ ನೈತಿಕತೆ ಬಗ್ಗೆ ಪುಗಸಟ್ಟೆ ಭಾಷಣ ಕೊಡುವ ಈ ಹಿಂದೂವಾದಿಗಳ ನಾಯಕರೇ ಖುದ್ದು ಅನೈತಿಕ-ಹಾದರಗಳಲ್ಲಿ ಮುಳುಗೇಳುತ್ತಿದ್ದಾರಲ್ಲ ಇವರಿಗೆ ನಾಚಿಕೆ ಮಾನಮರ್ಯಾದೆ ಏನಾದರು ಇದೆಯಾ?

ಶಭಾಶ್ ಡಿಕೆ... ಥೂ ಆಚಾರ್ಯ



ಕರ್ನಾಟಕದ ಜನತೆ ಬಹಳ ಕಾಲದಿಂದ ಕಾಯುತ್ತಿದ್ದ ಹೋರಾಟವೊಂದಕ್ಕೆ ಚಾಲನೆ ಸಿಕ್ಕಿದೆ. ರಾಜ್ಯ ಕಾಂಗ್ರೆಸ್ ಪಕ್ಷ ಕೋಮುವಾದಿ ಬಿಜೆಪಿ ವಿರುದ್ಧ ಈಗ ನೇರ ಸಂಘರ್ಷಕ್ಕಿಳಿದಿದೆ.

ಇದು ಸಾಧ್ಯವಾಗಿರುವುದು ಡಿ.ಕೆ. ಶಿವಕುಮಾರ್‌ರಿಂದಾಗಿ!

ಡಿಕೆಶಿ ಕಾಂಗ್ರೆಸ್ ಕಾರ್ಯಾಧ್ಯಕ್ಷರಾದ ಮೇಲೆ ಹೊಸ ಹುರುಪು ಪಡೆದಿರುವ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಗಳ 'ಭಯೋತ್ಪಾದನಾ ಜಾಗೃತಿ' ಎಂಬ ಕೋಮುವಾದಿ ಕಾರ್ಯಕ್ರಮವನ್ನು ತಡೆಯಲು ಸಜ್ಜಾಗಿದ್ದಾರೆ.

ಶಿಕ್ಷಣ ಇಲಾಖೆಯ ಮೂಲಕ ರಾಜ್ಯದ ಲಕ್ಷಾಂತರ ವಿದ್ಯಾರ್ಥಿ ಯುವ ಜನರಲ್ಲಿ ಮುಸ್ಲಿಮರ ವಿರುದ್ಧ ಅಸಹನೆ, ಅನುಮಾನ ಮೂಡಿಸುವ ಈ ಚಡ್ಡಿಗಳ ಪಿತೂರಿಗೆ ಸರ್ಕಾರದ 5 ಕೋಟಿ ರೂಪಾಯಿ ಖರ್ಚಾಗುತ್ತಿದೆ. ಆದರೆ ಈ ಪ್ರಚಾರಾಂದೋಲನದಲ್ಲಿ ಅಪ್ಪಿತಪ್ಪಿಯೂ ಹಿಂದೂ ಅರ್ಥಾತ್ ಕೇಸರಿ ಟೆರರಿಸ್ಟರ ಬಗ್ಗೆ ಮಾತೇ ಆದಿಲ್ಲ, ಗೋಧ್ರಾ ಪಿತೂರಿ, ಮಾಲೇಗಾಂವ್ ಸ್ಫೋಟ, ಹುಬ್ಬಳ್ಳಿ ಬಾಂಬ್ ಸ್ಫೋಟಗಳಲ್ಲಿ ಕೇಸರಿ ಭಯೋತ್ಪಾದಕರ ಕೈವಾಡವಿರುವುದು ಸಾಬೀತಾದ ಮೇಲೂ ಬಿಜೆಪಿಗಳು ಅದರ ಬಗ್ಗೆ ತಮ್ಮ ಪ್ರಚಾರಾಂದೋಲನಗಳಲ್ಲಿ ಚಕಾರವೆತ್ತುತ್ತಿಲ್ಲ.


ರಾಜ್ಯದ ಜನತೆ ಇದನ್ನೆಲ್ಲಾ ಅಸಹನೆಯಿಂದಲೇ ನೋಡುತ್ತಿರುವಾಗಲೇ ಬಹುಶಃ ಇದೇ ಮೊದಲ ಬಾರಿಗೆ ಡಿಕೆ ನೇತೃತ್ವದ ಕಾಂಗ್ರೆಸ್ ನೇರವಾಗಿ ಅಖಾಡಕ್ಕಿಳಿದಿದೆ. ಇದಕ್ಕೆ ಷಹಬಾಶ್‌ಗಿರಿ ಸಲ್ಲಬೇಕಾದ್ದು ಡಿ.ಕೆ. ಶಿವಕುಮಾರ್‌ಗೆ.

ಇದರೊಂದಿಗೆ ವಿರೋಧ ಪಕ್ಷಗಳಾದ ಕಾಂಗ್ರೆಸ್ ಹಾಗೂ ಜನತಾದಳಗಳು ಮಾಡಬೇಕಾದ ಇನ್ನೊಂದು ಮುಖ್ಯ ಕೆಲಸ ಏನೆಂದರೆ ಗೃಹಮಂತ್ರಿ ಆಚಾರ್ಯನ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನಾ ಆಂದೋಲನ ಮಾಡುವುದು.

ಕರ್ನಾಟಕ ಸರ್ಕಾರದ ಗೃಹಮಂತ್ರಿಯಾಗಿದ್ದುಕೊಂಡು ಓರ್ವ ಯಕಶ್ಚಿತ್ ಬೀದಿ ಪುಂಡನಂತೆ ಮಾತನಾಡುತ್ತಿದ್ದಾನೆ ವಿ.ಎಸ್. ಆಚಾರ್ಯ.

ಮಂಗಳೂರಿನಲ್ಲಿ ಚಡ್ಡಿ ಮುತಾಲಿಕನ ಪುಂಡರ ಗುಂಪಿನಿಂದ ಪಬ್ ಮೇಲೆ ದಾಳಿಯಾದರೆ ಆಚಾರ್ಯಗೆ ಅದು ಪೋಷಕರ ತಪ್ಪಾಗಿ ಕಾಣುತ್ತಿದೆ. ಫೆಬ್ರವರಿ 14 ರ ಪ್ರೇಮಿಗಳ ದಿನದಂದು ಯುವಜನರ ಮೇಲೆ ದಾಳಿ ಮಾಡುವುದಾಗಿ ಇದೇ ಮುತಾಲಿಕ್ ಬೆದರಿಸುತ್ತಿದ್ದರೆ ಅದು ಕಾನೂನು ಸುವ್ಯವಸ್ಥೆಯ ಪ್ರಶ್ನೆ ಅನಿಸುತ್ತಿಲ್ಲ ಆಚಾರ್ಯಗೆ!

ಇದಿಷ್ಟೇ ಅಲ್ಲ, ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳು ಗಮನಿಸಬೇಕಾದ ಇನ್ನೊಂದು ಮುಖ್ಯ ವಿಚಾರವಿದೆ.



ಅದು ಕೇಸರಿ ಭಯೋತ್ಪಾದಕರೊಂದಿಗೆ ಮುತಾಲಿಕನಿಗಿರುವ ನಂಟಿನ ವಿಚಾರ.

ಈ ಸಂಬಂಧ ರಾಜ್ಯ ಪೊಲೀಸರು ಮುತಾಲಿಕನ ಹಂತಕ ಪಡೆಯ ಕೆಲವರನ್ನು ಅರೆಸ್ಟ್ ಮಾಡಿದ್ದಾರೆ. ಆದರೆ ಮುತಾಲಿಕನನ್ನು ಇವತ್ತಿಗೂ ಪ್ರಶ್ನಿಸಿಲ್ಲ, ಅಷ್ಟೇ ಅಲ್ಲ ಬಿಜೆಪಿಗಳು ಯಾವಾಗ್ಯಾವಾಗ ತಮ್ಮ ಮುಖವಾಡ ಬಯಲಾಗುತ್ತಾ ಬಂದಿದೆಯೋ ಆವಾಗೆಲ್ಲ ಜನರ ಗಮನ ಬೇರೆಡೆ ಸೆಳೆಯಲು ಇನ್ನಾವುದೋ ವಿವಾದ ಸೃಷ್ಟಿಸುತ್ತಾ ಹೋಗುತ್ತಿದ್ದಾರೆ. ಹುಬ್ಬಳ್ಳಿ ಕೋರ್ಟ್ ಬಾಂಬ್ ಸ್ಫೋಟದಲ್ಲಿ ಭಜರಂಗ ದಳದವರ ಕೈವಾಡವಿರುವುದು ಸಾಬೀತಾಗುತ್ತಿದ್ದಂತೆ ಅದನ್ನು ಗೌಣಗೊಳಿಸಲು ಬೆಳಗಾಂ ಗಡಿ ವಿವಾದಕ್ಕೆ ಪ್ರಚೋದನೆ ನೀಡಲಾಯಿತು. ಎಷ್ಟೆಂದರೂ ಈ ಶಿವಸೇನೆ-ಬಿಜೆಪಿಗಳೆರಡು ಒಬ್ಬಳೇ ರಕ್ಕಸಿಯ ವಿಕೃತ ಸಂತಾನಗಳು ತಾನೆ?

ಬೆಳಗಾಂ ಗದ್ದಲದಲ್ಲಿ ಹುಬ್ಬಳ್ಳಿ ಬಾಂಬ್ ಪ್ರಕರಣ ಮೂಲೆಗುಂಪಾಯಿತಷ್ಟೇ. ನಂತರ ಕಳೆದ ವಾರ ಮಂಗಳೂರು ಪಬ್ ದಾಳಿ ನಡೆಯಿತು. ದೇಶಾದ್ಯಂತ ಜನ, ಮೀಡಿಯಾಗಳು ಇದನ್ನು ಖಂಡಿಸಿದರೆ ನಮ್ಮ ಮಹಾನ್ ಗೃಹಮಂತ್ರಿ ಉಸಿರೆತ್ತಲಿಲ್ಲ. ಅದರ ಬದಲಾಗಿ ಸಿಸಿಬಿ ಪೊಲೀಸರನ್ನು ಛೂ ಬಿಟ್ಟು ಬೆಂಗಳೂರು ಸ್ಫೋಟದ ಸಂಚನ್ನು ಬೇಧಿಸಲಾಗಿದೆ ಎಂದು ಸುದ್ದಿ ಹೊರಡಿಸುತ್ತಿದ್ದಾರೆ.


ಒಂದು ಕಡೆ ಮಗುವನ್ನು ಚಿವುಟ ಮತ್ತೊಂದೆಡೆ ತೊಟ್ಟಿಲು ತೂಗುವ ಕುತಂತ್ರದ ಕಾರ್ಯ ಇದು. ಈ ಆಚಾರ್ಯ ಎಂಥ ನಾಲಾಯಕ್ ಮತ್ತು ರೋಗಿಷ್ಟನೆಂದರೆ ಉಡುಪಿ ಬಿಜೆಪಿ ಶಾಸಕ ರಘುಪತಿ ಭಟ್ಟನ ಬೆಂಬಲಕ್ಕೆ ನಿಂತು ಆತನ ಪತ್ನಿ ಪದ್ಮಪ್ರಿಯ ಸಾವಿಗೆ ನೇರ ಹೊಣೆಗಾರನಾಗಿದ್ದಾನೆ. ಈಗ ಮುಖ್ಯಮಂತ್ರಿ ಯಡಿಯೂರಪ್ಪನ ಬಗ್ಗೆ ಮರುತನಿಖೆಗೆ ಶಿವಮೊಗ್ಗ ಕೋರ್ಟ್ ಆದೇಶಿಸಿದೆಯಷ್ಟೇ. ಆದರೆ ಪೊಲೀಸರಿಗೆ ಇದೆಂಥ ಮುಖಭಂಗವೆಂಬುದು ಆಚಾರ್ಯಗೆ ಅರ್ಥವಾದಂತಿಲ್ಲ, ಇನ್ನು ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ದಲಿತರು-ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರ ಮೇಲಿನ ಬಿಜೆಪಿಗಳ ದಾಳಿ ನಡೆಯುತ್ತಲೇ ಇದೆ ಹಾಗೂ ಆಚಾರ್ಯ ಇದರಲ್ಲೆಲ್ಲಾ ಶಾಮೀಲಾಗಿ ಪೊಲೀಸರನ್ನು ನಿಷ್ಕ್ರಿಯಗೊಳಿಸಿ ಬಿಟ್ಟಿದ್ದಾರೆ. ಸದ್ಯಕ್ಕೆ ಸಮಾಧಾನ ಪಡಬೇಕಾದ ಒಂದೇ ಸಂಗತಿ ಏನೆಂದರೆ ಅಜಯ್‌ಕುಮಾರ್ ಸಿಂಗ್ ಎಂಬ ದಕ್ಷ ಪ್ರಾಮಾಣಿಕ ಅಧಿಕಾರಿ ರಾಜ್ಯ ಪೊಲೀಸ್ ಮುಖ್ಯಸ್ಥರಾಗಿ ಬಂದಿದ್ದಾರೆ. ಗೃಹ ಸಚಿವ ಆಚಾರ್ಯನ ನೀಚ ತಂತ್ರಗಳಿಗೆ ರಾಜ್ಯ ಪೊಲೀಸರು ಬಲಿ ಬೀಳದಂತೆ ರಕ್ಷಿಸಿ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವಂತೆ ನೋಡಿಕೊಳ್ಳುವ ಹೊಣೆ ಅಜಯ್‌ಕುಮಾರ್ ಸಿಂಗ್‌ರ ಮೇಲಿದೆ.

ಕಲ್ಬುರ್ಗಿಯ ಶರಣಬಸವೇಶ್ವರ ಸಂಸ್ಥಾನಕ್ಕೆ ಆಧುನಿಕ ಶರಣಬಸಪ್ಪ ಅಪ್ಪ ಪೀಠಾಧಿಪತಿಯಾಗಿ 25 ವರ್ಷ ಕಳೆದಿರುವ ಹಿನ್ನೆಲೆಯಲ್ಲಿ ಅದ್ದೂರಿ ಕಾರ್ಯಕ್ರಮ ಆಚರಿಸುತ್ತಿದ್ದಾರೆ. ಇವರ ಅನ್ನ ದಾಸೋಹದ ಮಠದಲ್ಲಿ ಒಲೆ ಹತ್ತಿ ಉರಿದು ವರ್ಷಗಳೇ ಆಗಿವೆ. ಆದರೆ ಜ್ಞಾನ ದಾಸೋಹದ ಸಂಸ್ಥೆಗಳಲ್ಲಿ ಹಣದ ಹೊಳೆಯೇ ಹರಿಯುತ್ತಿದೆ.

ಕಲಬುರ್ಗಿ ಶರಣಬಸಪ್ಪ ಅಪ್ಪ ಆಧುನಿಕ ಯಯಾತಿಯೆ?




ಕಲಬುರ್ಗಿ ಶರಣಬಸವೇಶ್ವರ ಸಂಸ್ಥಾನ ಮಠದ ಇಂದಿನ ಮಠಾಧೀಶ ಆಧುನಿಕ ಶರಣಬಸಪ್ಪ ಅಪ್ಪ ತಮ್ಮ ಪೀಠಾರೋಹಣದ ರಜತಮಹೋತ್ಸವ ಆಚರಿಸುತ್ತಿದ್ದಾರೆ. ಇದರ ಪ್ರಯುಕ್ತ "ಕಾಗೆ ವಿಷ್ಠವಿಸುವ ಕಲಶವಾಗುವುದಕ್ಕಿಂತ ಶರಣರ ಚಮ್ಮಾವುಗೆ ಆಗುವುದೆ ಲೇಸೆಂದ"; "ಆ 'ಬಸವ ಮಾರ್ಗಿ'ಗಳಿಗೆ ಎಂದು ಬುದ್ಧಿ ಬರಬೇಕು?" ಎಂದು ಸತ್ಯವನ್ನು ತಿಳಿದುಕೊಂಡಿರುವ ನಮ್ಮ 'ಅಪ್ಪ' ಶರಣಬಸವೇಶ್ವರರ ಗೋಪುರದ ಕಲಶವನ್ನು ಬಂಗಾರದಿಂದ ಸಿಂಗಾರಗೊಳಿಸುತ್ತಿದ್ದಾರೆ. ಭಕ್ತರು ಕೊಟ್ಟ ದೇಣಿಗೆ ದುಡ್ಡಿನಿಂದ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಜಾಹಿರಾತು ನೀಡುತ್ತಿದ್ದಾರೆ. ಇನ್ನು ಇವರನ್ನು ಹಾಡಿಹೊಗಳುವ ಕಾರ್ಯಕ್ರಮಗಳಂತೂ ಭರ್ಜರಿಯಾಗಿ ಆಯೋಜನೆಗೊಂಡಿವೆ.



ಈ ಆಧುನಿಕ ಶರಣಬಸಪ್ಪ ಅಪ್ಪ ಪವಿತ್ರ ಶರಣಬಸವೇಶ್ವರ ಸಂಸ್ಥಾನಪೀಠದಲ್ಲಿ ಇಪ್ಪತ್ತೈದು ವರ್ಷ ಕಳೆದಿರುವುದು ಕೇವಲ ಕಲಬುರ್ಗಿ ಮಾತ್ರವಲ್ಲ, ಇಡೀ ಉತ್ತರ ಕರ್ನಾಟಕದ ಜನರ ದೌರ್ಭಾಗ್ಯ. ಎತ್ತಣ ಶರಣಬಸವೇಶ್ವರರು, ಎತ್ತಣ ಈ ಆಧುನಿಕ ಅಪ್ಪ?

ಆಧುನಿಕ ಶರಣ ಶರಣಬಸವಪ್ಪ ಅಪ್ಪನ ಶರಣ ಚರಿತಾಮೃತ ಕೇಳುತ್ತ ಕುಳಿತರೆ ಕೇಳುತ್ತಲೇ ಇರಬೇಕು ಅನಿಸುತ್ತದೆ. ಈ ಪುಣ್ಯ ಪುರುಷನ ಚರಿತೆಯ ಪುರಾಣದ ಪೊತ್ತಿಗೆ ಯಾವ ಪುರಾಣಿಕರ ಕೈಗೆ ಸಿಕ್ಕರೂ ಅದು ಅತ್ಯಂತ ಮನೋರಂಜನಾತ್ಮಕವಾಗಿ, ನವರಸಭರಿತ ಪುರಾಣವಾಗುತ್ತದೆ. ದೊಡ್ಡಪ್ಪ ಅಪ್ಪ ಹಾಗೂ ಗೋದುತಾಯಿ ಅಮ್ಮನವರ ಪುಣ್ಯ ಗರ್ಭದಲ್ಲಿ ಇಂಥ ಪುಣ್ಯಾತ್ಮ ಹುಟ್ಟುತ್ತಾನೆಂದು ಯಾರೂ ಊಹಿಸಿರಲಿಲ್ಲ. "ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎಂಬಂತೆ ಈತನ ಬಾಲಲೀಲೆಗಳು ಒಂದೆ, ಎರಡೆ, ಮೂರೆ ಎಂದು ಹೇಳಲು ಸಾಧ್ಯವೆ? ಅವು ಹಲವು ಹತ್ತು. ಅವುಗಳನ್ನೆಲ್ಲ ಇಲ್ಲಿ ಬಣ್ಣಿಸುತ್ತ ಕುಳಿತರೆ ನಮ್ಮ ಪತ್ರಿಕೆಯ ಪುಟಗಳು ಸಾಲುವುದಿಲ್ಲ.

ಹದಿನೇಳನೆಯ ಶತಮಾನದ ಚರಿತ್ರೆಯ ಪುಟಗಳಲ್ಲಿ ಅಚ್ಚಳಿಯದ ಶರಣವ್ಯಕ್ತಿತ್ವವನ್ನು ರೂಪಿಸಿಕೊಂಡು ಹೆಸರಿಗೆ ಅನ್ವರ್ಥಕವಾಗಿ ಬದುಕಿಬಾಳಿ ಹೋದವರು ಕಲಬುರ್ಗಿಯ ಶರಣಬಸವೇಶ್ವರರು. ಹರಳಗುಂಡಿಗೆಯಂಥ ಕುಗ್ರಾಮದಲ್ಲಿ ಹುಟ್ಟಿದರೂ ಇಡೀ ನಾಡಿಗೆ ತನ್ನ ನಡತೆ - ಮಾನವೀಯತೆಗಳ ಮೂಲಕ ಬೆಳಕಾದವರು. ಕಡಕೋಳದ ಮಡಿವಾಳಪ್ಪನಂಥ ವಾಗ್ಗೇಯಕಾರನನ್ನು ಜೊತೆಯಾಗಿರಿಸಿಕೊಂಡು ಮಾಡಿದ ಸಾಮಾಜಿಕ ಪರಿವರ್ತನೆಯ ಕಾರ್ಯ ಆದರಣೀಯ. ಹಳೆಪೇಟೆ ಬಸ್ಸಯ್ಯನಂಥ ಜಾತಿ ಜಂಗಮನ ಉಪಟಳ ತಾಳದೆ ಮಡಿವಾಳಪ್ಪ ಕಂಗಾಲಾಗಿ ಲಿಂಗದೀಕ್ಷೆಗೆ ಹಂಬಲಿಸಿದಾಗ ಅದು ತನ್ನ ಗುರುವಿನ ಮೂಲಕ ಕರುಣಿಸಿದ ಮಹಾಸಾತ್ವಿಕ ಶರಣಬಸವೇಶ್ವರರು.



ಬಸವರಾಜಪ್ಪ

ಇಡೀ ನಾಡಿಗೆ ನಾಡೇ ಬರದ ಬೇಗೆಯಲ್ಲಿ ಬೇಯುತ್ತಿದ್ದಾಗ ತನ್ನ ಹೊಲದಲ್ಲಿಯ ಜೋಳ, ಸಜ್ಜೆ ಮುಂತಾದವುಗಳನ್ನು ದಾಸೋಹ ಮಾಡಿದ ಸಚ್ಚಾರಿತ್ರ್ಯವಂತ. ಉಳ್ಳವರಿಂದ ಕಾಳುಕಡ್ಡಿಗಳನ್ನು ಪಡೆದು ಇಲ... ಅದನ್ನು ಹಂಚಿ ದಾಸೋಹ ಮಾಡುತ್ತ, ಭಾವತೃಪ್ತಿಯಲ್ಲಿ ತನ್ನನ್ನು ತಾನು ಮರೆಯುತ್ತಿದ್ದ ದಾಸೋಹಿ. ಇಂಥ ನಿತ್ಯ ದಾಸೋಹದ ಮಠ... ಪೀಠಾರೋಹಣವಾಗಿರುವವರು ಸದ್ಯ... ಪುರುಷ ಶರಣಬಸಪ್ಪ ಅಪ್ಪ.

ತಾನು ಬರೆದ 'ಮಹಾದಾಸೋಹದ ಸೂ... ಬಸವಾದಿ ಶರಣರ ಹರಿತವಾದ ವಿಚಾರಗಳಿಗಿ... ತೂಕದಲ್ಲಿ ಮಿಗಿಲೆಂದು ಬಣ್ಣಿಸಿಕೊಳ್ಳುತ್ತಾರೆ ಈ ಆಧುನಿಕ ಶರಣ ಶರಣಬಸಪ್ಪ ಅಪ್ಪ. ಇಂಥ ಸೂ... ಕನ್ನಡ ಸಾರಸ್ವತ ಲೋಕದ ದಿಗ್ಗಜರೆಲ್ಲ ಭಾಷ್ಯ ಬರೆದಿದ್ದಾರೆ. ಹಂಪಿ ವಿಶ್ವವಿದ್ಯಾಲಯದ ... ಕುಲಸಚಿವರಾದ ಚಂದ್ರಶೇಖರ ಕಂಬಾರ ಮೆಚ್ಚಿಕೊಂಡಿದ್ದಾರಂತೆ! ಅಷ್ಟೇ ಏಕೆ? ಅವರು ಹ... ಕನ್ನಡ ವಿಶ್ವವಿದ್ಯಾಲಯದಲ್ಲಿ ಇರುವವರೆಗೂ ... ಕಚೇರಿಯಲ್ಲಿ ಅಪ್ಪನವರ ಸೂತ್ರಗಳೆ ರಾರಾಜಿಸುತ್ತಿದ್ದ... ಅಪ್ಪನ ಸೂತ್ರಗಳಲ್ಲಿ "ಜ್ಞಾನ-ವಿಜ್ಞಾನ-ವೈಜ್ಞಾ... ಏನೆಲ್ಲವೂ ಇದೆಯಂತೆ!" ಬಲ್ಲವರು ... ಸರ್ಟಿಫಿಕೇಟ್ ಕೊಟ್ಟ ಮೇಲೆ ಇದನ್ನು ಯಾರಾ... ನಿರಾಕರಿಸುವ ಧೈರ್ಯ ಮಾಡಲು ಸಾಧ್ಯವೆ? ... ದಾರ್ಷ್ಟ್ಯ ಯಾರಿಗೆ ಬರಬೇಕು?

ಕಲಬುರ್ಗಿಗೆ ಬಂದು ಹೋಗುವ ರಾಜ್ಯ-... ಮಟ್ಟದ ಪುಢಾರಿಗಳೆಲ್ಲ ಖಾಜಿ ಬಂದೇನವಾಜ ದ... ಭೇಟಿಕೊಟ್ಟಂತೆ ನಮ್ಮ ಕಥಾ ಪುರುಷ ವಿರಾಜ... ವಾಗಿರುವ ಶರಣಬಸವೇಶ್ವರರ ಪೀಠಕ್ಕೂ ಭೇಟಿಕೊ... ಹೋಗೇ ಹೋಗುತ್ತಾರೆ. ಆದರೆ ಶರಣಬಸಪ್ಪ ಅಪ್ಪ... ಶ್ರೀಸಾಮಾನ್ಯರಂತೆ ಕಂಡರೂ ಶ್ರೀಸಾಮಾನ್ಯ... ಅಸಾಮಾನ್ಯರು - ಅಗಣಿತ ಚರಿ... ಮಹಿಮಾ ಪುರುಷರು. ನೀವು ಮೊ... ಹೇಳಿ ಬರದೆಹೋದರೆ ನಿಮಗೆ ಅಪಾಯಿ... ಮೆಂಟ್ ಸಿಗುವುದು ಕಷ್ಟ-ಕಷ್ಟ! ಬ... ವೇಳೆ ಭೇಟಿಯನ್ನು ಹೇಗೋ ಕುದುರಿಸಿಕೊಂ... ಒಳ ಬಂದಿರಾದರೆ ನೀವು ಫೋಟೋಕ್ಕೆ ಮ... ಕೊಡಲೇಬೇಕು. ಏಕೆಂದರೆ ನಿಮ್ಮ ರಾಜಕೀ... ವರ್ಚಸ್ಸಿನ ಮುಖದ ಜೊತೆಗೆ ನಮ್ಮ ಅಪ್ಪ... ಮುಖವೂ ತೂರಿಕೊಂಡು ಅದು ಮ... ಆವರಣದ ಗೋಡೆಯಲ್ಲಿ ಥಳಗುಟ್ಟುತ್ತಿರು... ರಾಜ್ಯ-ರಾಷ್ಟ್ರಮಟ್ಟದ ಘಟಾನುಘಟಿ ನಾಯಕರುಗಳೇ ... ದಿಂದಿರುಳಿ ಹೋದ ಮೇಲೆ ನಮ್ಮ ನಿಮ್ಮಂಥ ...

ಹಳೆಅಂಗಡಿ: ಇಲ್ಲಿ ಮಕ್ಕಳಿಗೆ ವಿಷವುಣ್ಣಿಸಿದರು

ದಕ್ಷಿಣಕನ್ನಡ ಜಿಲ್ಲೆಯ ಹಳೆಅಂಗಡಿ, ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಮೂಲ್ಕಿ ಮತ್ತು ಮಂಗಳೂರುಗಳ ನಡುವೆ ಸಿಗುವ ಒಂದು ಪುಟ್ಟ ಊರು. ಅಂಗಡಿ ಎಂದು ಕೊನೆಗೊಳ್ಳುವ ಹೆಚ್ಚಿನ ಊರ ಹೆಸರುಗಳು, ಆ ಊರುಗಳ ಜೈನ ಪರಂಪರೆಯನ್ನು ಸೂಚಿಸುತ್ತವೆ. ಹಳೆಅಂಗಡಿ ಕೂಡಾ ಕರಾವಳಿಯ ಒಂದು ಜೈನಕೇಂದ್ರವಾಗಿದ್ದು ಮೂಲ್ಕಿ ಸೀಮೆಯ ಒಂಬತ್ತು ಮಾಗಣೆಯ ಜೈನ ಅರಸರು ಇಲ್ಲಿಂದಲೇ ತಮ್ಮ ಸೀಮೆಯ ಕಾರುಬಾರು ನಡೆಸುತ್ತಿದ್ದರು. ಅಲ್ಲಿ ಈಗಲೂ ಸುಮಾರು 30 ಜೈನ ಕುಟುಂಬಗಳು ವಾಸವಾಗಿದ್ದು, ಒಂದು ಪ್ರಾಚೀನ ಬಸದಿಯೂ ಇದೆ. ಹಳೆಅಂಗಡಿಯ ವ್ಯಾಪ್ತಿಯೊಳಗೆ ಬರುವ ಸುಮಾರು 2000 ಮನೆಗಳಲ್ಲಿ ಶೇಕಡಾ 80 ರಷ್ಟು ಹಿಂದುಗಳಿದ್ದು, ಅವರನ್ನು ಬಿಟ್ಟರೆ ಊರಿನ ಅತಿದೊಡ್ಡ ಸಮುದಾಯ ಮುಸ್ಲಿಮರದ್ದು. ಅಲ್ಲಿ ಸುಮಾರು 100 ಕ್ರಿಶ್ಚಿಯನ್ ಮನೆಗಳೂ ಇದ್ದು ಅವರದು ಅತ್ಯಂತ ಕಿರಿ ಸಮುದಾಯ. ಈ ಕ್ರಿಶ್ಚಿಯನ್ ಸಮುದಾಯದಲ್ಲೇ ಪ್ರಾಟೆಸ್ಟೆಂಟ್ ಮತ್ತು ಕ್ಯಾಥೋಲಿಕ್ ಪಂಥದವರ ಜೊತೆ ಪೆಂಟಿಕೋಸ್ಟಲ್ ಚರ್ಚ್‌ಗೆ ನಡೆದುಕೊಳ್ಳುವ ಐದಾರು ಕುಟುಂಬಗಳೂ ಹಳೆಅಂಗಡಿಯಲ್ಲಿ ವಾಸವಾಗಿವೆ.

ಊರಿನಲ್ಲಿ ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್‌ನ ಒಂದು ಹೈಯರ್ ಪ್ರೈಮರಿ ಶಾಲೆ ಇದ್ದು ಶಾಲೆಗೆ ತಾಗಿಕೊಂಡೇ ಒಂದು ಹಳೆಯ ಚರ್ಚು ಇದೆ. ಕರಾವಳಿಯ ಪ್ರಾಟೆಸ್ಟೆಂಟ್ ಕ್ರೈಸ್ತ ಪಂಥಕ್ಕೆ ಸೇರಿದ ಯುಬಿಎಂಸಿ ಶಾಲೆಗಳಿಗೆ ಕನಿಷ್ಠ 100 ವರ್ಷಗಳ ಇತಿಹಾಸವಿದೆ. ಹಳೆಅಂಗಡಿಯ ಯುಬಿಎಂಸಿ ಶಾಲೆ ಸುಮಾರು 150 ವರ್ಷಗಳಷ್ಟು ಹಳೆಯದು. ಚರ್ಚ್ ಆಫ್ ಸೌತ್ ಇಂಡಿಯ (ಸಿಎಸ್‌ಐ) ಆಡಳಿತಕ್ಕೆ ಒಳಪಟ್ಟಿರುವ ಈ ಶಾಲೆಯಲ್ಲಿ ಈಗ ಸುಮಾರು 430 ವಿದ್ಯಾರ್ಥಿಗಳು 1ರಿಂದ 7ನೇ ಇಯತ್ತೆವರೆಗೆ ಶಿಕ್ಷಣ ಪಡೆಯುತ್ತಿದ್ದಾರೆ. ಇವರಲ್ಲಿ ಶೇಕಡಾ 85ರಷ್ಟು ವಿದ್ಯಾರ್ಥಿಗಳು ಆ ಪರಿಸರದ ಬಡ ಹಿಂದೂ ಕುಟುಂಬಗಳಿಂದ ಬರುವವರು. ಈ ಶಾಲೆ ಪ್ರಾರಂಭವಾದಾಗ ಹೇಗೋ ಹಾಗೆಯೇ ಈಗಲೂ ಕೂಡ ಹಳೆಅಂಗಡಿಯ ಆಸುಪಾಸಿನ ಬಡಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಸಂಸ್ಥೆ ಈ ಶಾಲೆ ಸರಕಾರಿ ಅನುದಾನಿತ ಸಂಸ್ಥೆಯಾದರೂ ಶಾಲೆಯ ಆಡಳಿತ ಮಂಡಳಿಯವರು ಮುತುವರ್ಜಿ ವಹಿಸಿ ತಮ್ಮದೇ ಖರ್ಚಿನಲ್ಲಿ ಕಂಪ್ಯೂಟರ್ ಶಿಕ್ಷಣವನ್ನೂ ಒದಗಿಸುತ್ತಿದ್ದಾರೆ. ಮಕ್ಕಳ ಮಧ್ಯಾಹ್ನದ ಊಟಕ್ಕೂ ತಮ್ಮ ಕೊಡುಗೆಯನ್ನು ನೀಡುತ್ತಿದ್ದಾರೆ. ಸಿಎಸ್‌ಐ ಸಂಸ್ಥೆ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುಮಾರು 40 ಶಾಲೆಗಳನ್ನು ನಡೆಸುತ್ತಿದ್ದು ಅವೆಲ್ಲವೂ ತಮ್ಮ ದಕ್ಷತೆ ಮತ್ತು ಪ್ರಾಮಾಣಿಕ ಸೇವೆಗೆ ಹೆಸರಾಗಿವೆ. ಹಳೆಅಂಗಡಿಯ ಯುಬಿಎಂಸಿ ಹೈಯರ್ ಪ್ರೈಮರಿ ಶಾಲೆಯೂ ನಿಸ್ಸಂದೇಹವಾಗಿ ಅಂತಹ ಒಂದು ವಿದ್ಯಾದಾನದ ಸಂಸ್ಥೆ.



ಜನವರಿ 28, 2009 ಬುಧವಾರದಂದು ಈ ಶಾಲೆಯ ವಾರ್ಷಿಕ ಸಮಾರಂಭ ನಡೆಯುವುದಿತ್ತು, ಆದರೆ ಕೊನೇಗಳಿಗೆಯಲ್ಲಿ ಅದು ರದ್ದುಗೊಂಡಿತು. ಆ ಶಾಲೆಯ ಇತಿಹಾಸದಲ್ಲೂ, ಆ ಊರಿನ ಇತಿಹಾಸದಲ್ಲೂ ಬಹುಶಃ ಈ ಹಿಂದೆ ಇಂತಹದ್ದು ಸಂಭವಿಸಿರಲಿಲ್ಲ. ಪ್ರತಿವರ್ಷ ಹಳೆ ಅಂಗಡಿಯ ಯುಬಿಎಂಸಿ ಶಾಲೆಯ ಸ್ಕೂಲ್ ಡೇಯ ಕಾರ್ಯಕ್ರಮದಲ್ಲಿ ಹಾಡು, ನೃತ್ಯ ನಾಟಕ ಇತ್ಯಾದಿಗಳ ಜೊತೆ ಬೈಬಲ್‌ಗೆ ಸಂಬಂಧಿಸಿದ ಕಿರುರೂಪಕವೊಂದನ್ನು ಪ್ರಸ್ತುತ ಪಡಿಸುವುದು ಸಂಪ್ರದಾಯ. ವಾಸ್ತವವಾಗಿ ಶಾಲೆಯ ಆಡಳಿತ ಮಂಡಳಿ ಇದರಲ್ಲಿ ಎಂದೂ ತಲೆ ಹಾಕಿದ್ದಿಲ್ಲ. ಶಾಲೆಯ ಅಧ್ಯಾಪಕರಲ್ಲಿ ಮೊದಲಿನಿಂದಲೂ ಹೆಚ್ಚಿನವರು ಹಿಂದೂಗಳೇ ಆಗಿದ್ದು, ಅವರೇ ಈ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದರು. ಶಾಲೆ ಒಂದು ಕ್ರಿಶ್ಚಿಯನ್ ಸಂಸ್ಥೆ ಎಂಬ ಅಲ್ಲಿನ ಶಿಕ್ಷಕರ ಕೃತಜ್ಞತಾಭಾವ ಇದಕ್ಕೆ ಒಂದು ಕಾರಣವಾದರೆ, ವಿದ್ಯಾರ್ಥಿಗಳಿಗೆ ಬೈಬಲ್‌ನ ರೂಪಕಗಳೂ ಒಂದು ಶಿಕ್ಷಣ ಎಂಬುದು ಇನ್ನೊಂದು ಕಾರಣ.

ಈ ವರ್ಷವೂ ಶಾಲೆಯ ಈ ಸಂಪ್ರದಾಯಕ್ಕೆ ಅನುಗುಣವಾಗಿ ಮಕ್ಕಳು ಇತರ ಐಟಂಗಳ ಜೊತೆಗೆ 'ಕ್ರೈಸ್ತ ಮಹಾತ್ಮೆ' ಎಂಬ ಯಕ್ಷಗಾನ ಪ್ರದರ್ಶನಕ್ಕೆ ಎರಡು ತಿಂಗಳಿನಿಂದ ತಾಲೀಮು ನಡೆಸಿದ್ದರು. ಈ ಯಕ್ಷಗಾನ ಪ್ರದರ್ಶನದ ಭಾಗವತಿಕೆ, ಚೆಂಡೆ, ಮದ್ದಳೆ ಮತ್ತು ಕುಣಿತದ ತರಬೇತಿಗಾಗಿ 6 ವೃತ್ತಿನಿರತ ಯಕ್ಷಗಾನ ಕಲಾವಿದರನ್ನೂ ನೇಮಿಸಲಾಗಿತ್ತು. ಹುಡುಗರೂ ಅತ್ಯುತ್ಸಾಹದಲ್ಲಿ ಪ್ರದರ್ಶನಕ್ಕಾಗಿ ತಯಾರಿ ನಡೆಸಿದ್ದರು. ಸ್ಕೂಲ್ ಡೇ ಇನ್ನೇನು ಹತ್ತಿರ ಬಂತು ಎನ್ನುವಾಗ ಸ್ಥಳೀಯ ಭಜರಂಗದಳದವರು ಎನ್ನಲಾದ ಕೆಲವರು 'ಕ್ರೈಸ್ತ ಮಹಾತ್ಮೆ' ತಾಲೀಮಿನಲ್ಲಿ ಪಾಲುಗೊಂಡಿದ್ದ ವಿದ್ಯಾರ್ಥಿಗಳ ಹೆತ್ತವರ ಬಳಿ ಹೋಗಿ "ಹಿಂದೂ ವಿದ್ಯಾರ್ಥಿಗಳು ಅದರಲ್ಲಿ ಪಾರ್ಟು ಮಾಡಬಾರದು; ಸ್ಕೂಲ್ ಡೇ ದಿನ ಗಲಾಟೆ ಆದರೆ ನಾವು ಜವಾಬ್ದಾರರಲ್ಲ"ಎಂದು ಎಚ್ಚರಿಕೆ ನೀಡಿದರು. ಆ ಯಕ್ಷಗಾನ ಪ್ರದರ್ಶನ ನಡೆದರೆ ತಾವು ಖಂಡಿತ ಗಲಾಟೆ ಮಾಡುತ್ತೇವೆ ಎಂದು ಅವರು ಕೊಟ್ಟ ನೋಟೀಸು ಅದು. ಭಜರಂಗದಳದವರ ಈ ಧಮಕಿಯ ಸುದ್ದಿ ಶಾಲ... ಮುಖ್ಯಸ್ಥರಿಗೂ ತಲುಪಿ, ಅವರು ಸ್ಕೂಲ್ ಡೇ ಆಚರಣೆ... ಕುರಿತು ಸಮಾಲೋಚಿಸಲು ವಿದ್ಯಾರ್ಥಿಗಳ ಹೆತ್ತ... ಸಭೆ ಕರೆದರು. ಸಭೆಯಲ್ಲಿ ಪಾಲುಗೊಂಡಿದ್ದವ... ಹೆಚ್ಚಿನವರು ಕ್ರೈಸ್ತ ಮಹಾತ್ಮೆ ಯಕ್ಷಗಾನದಲ್ಲಿ ತ... ಮಕ್ಕಳು ಪಾರ್ಟು ಮಾಡುತ್ತಿರುವುದು ತಮಗೆ ಸಂತೋಷ... ವಿಷಯ; ಆದರೆ ನಾಳೆ ಊರಿನಲ್ಲಿ ಹೆಚ್ಚುಕಡಿಮೆ ಆ... ತಮಗೆ ಯಾರು ರಕ್ಷಣೆ ಕೊಡುತ್ತಾರೆ? ಎಂದು ... ಆತಂಕ ವ್ಯಕ್ತಪಡಿಸಿದರು. ತಮ್ಮ ಸಂಸ್ಥೆಯ ಉಳಿವು ಪ... ಭವಿಷ್ಯ ಎಲ್ಲಕ್ಕಿಂತ ಮುಖ್ಯ ಎಂದು ಭಾವಿಸಿದ ಶಾಲೆ... ಆಡಳಿತ ಮಂಡಳಿ ಯಕ್ಷಗಾನ ಪ್ರದರ್ಶನದ ಜೊ... ಸ್ಕೂಲ್ ಡೇ ಸಮಾರಂಭವನ್ನೂ ರದ್ದುಪಡಿಸಿತು.

ಯಾಕೆ ಹಳೆಅಂಗಡಿಯ ಯುಬಿಎಂಸಿ ಶಾಲೆ ... ಸ್ಕೂಲ್ ಡೇ ಸಮಾರಂಭದಲ್ಲಿ ಕ್ರೈಸ್ತ ಮಹಾತ್ಮೆಯ... ಪ್ರದರ್ಶಿಸಬಾರದು? ಯಾಕೆ ಅದರಲ್ಲಿ ಹಿಂ... ವಿದ್ಯಾರ್ಥಿಗಳು ಪಾರ್ಟು ಮಾಡಕೂಡದು? ಹಳೆಅಂ... ಯಲ್ಲಿ ಭಜರಂಗಿಗಳನ್ನು ಹೀಗೆ ಪ್ರಶ್ನಿಸುವ ಧೈ... ಯಾರಿಗೂ ಇಲ್ಲ. ಇದು ಅವರನ್ನು ಹೀಯಾಳಿ... ಆಡಿದ ಮಾತಲ್ಲ. ಇತರ ಎಲ್ಲ ಊರುಗಳ ಸಂಸಾರವಂ... ಹಾಗೆಯೇ ಹಳೆಅಂಗಡಿಯವರೂ ವೀರರಲ್ಲ, ಶೂರ... ಅವರು ನಮ್ಮ ನಿಮ್ಮೆಲ್ಲರ ಹಾಗೆಯೇ ಅನ್ನ ... ಸಾಮಾನ್ಯರು. ಶೂರರನ್ನು ಬಯಸುವ ದೇಶದ ... ಅತ್ಯಂತ ದುರದೃಷ್ಟದ್ದು ಎಂದು ಬರ್ಟೋಲ್ಟ್ ... ಹೇಳಿದ. ಶೂರರಿರುವ ನಾಡಿನಲ್ಲಿ ವಿಧವೆಯರು, ಕೈ... ತುಂಡಾದವರು ಮತ್ತು ಅನಾಥ ಮಕ್ಕಳ ಸಂಖ್ಯೆ... ದೊಡ್ಡದಿರುತ್ತದೆ. ಕರಾವಳಿಯ ಎರಡು ಜಿಲ್ಲೆಗಳಲ್ಲಿ ... ಭಜರಂಗಿಗಳನ್ನು ಎದುರಿಸುವ ಶೂರರಿಲ್ಲ. ಹಳೆಅ... ಮಾತ್ರವೇ ಏಕೆ, ಈಗ ರಾಜ್ಯದ ಹೆಚ್ಚಿನ ಊರು... ಯಾವುದು ನಮ್ಮ ಧರ್ಮ ಮತ್ತು ಸಂಸ್ಕೃತಿ ಯಾ... ಹರಕೀಯ ಎಂದು ಜನರಿಗೆ ತಾಕೀತು ಮಾಡುತ್ತಿರು... ಭಜರಂಗಿಗಳು. ಅವರಿಗೆ ನಮ್ಮ ಮಠಾಧೀಶರ...

▶▶

ಷಲು ಮಾನವರನ್ನು ಕೇಳುವವರ್‍ಯಾರು? ನಾವು ಅಪ್ಪನ ಗದ್ದುಗೆಗೆ ಹಣ್ಣು ಹಚ್ಚಿ ಕಾಯಿ ಒಡೆದು- ಕರ್ಪೂರ ಬೆಳಗಿಸಿಕೊಂಡು ಬರಬೇಕಷ್ಟೆ. ನವರದು ಯಾವಾಗಲೂ ಹೆಣ್ಮಕ್ಕಳಂತೆ ಅಂತಃ ಜೀವ. ಅದು ಯಾವಾಗಲೂ ಹೆಣ್ಣು ಮಕ್ಕಳನ್ನು ಮ್ಮಲ ಮರುಗುತ್ತಿರುತ್ತದೆ. ಅವರನ್ನು ಕಂಡರೆ ಣೀರುತ್ತಿರುತ್ತದೆ. "ಪ್ರೀತಿ ಇಲ್ಲದ ಮೇಲೆ ಹೂವು ಹೇಗೆ? ಮೋಡ ಕಟ್ಟಿತು ಹೇಗೆ? ಮೋಡ ಳು ಬೆಸೆದು ಮಳೆ ಸುರಿಸೀತು ಹೇಗೆ?" ಿ ಜಿ.ಎಸ್.ಎಸ್. ಅವರ ಕವಿತೆಯ ಸಾಲುಗಳನ್ನು ನೆಯೆ ತಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಂಡಿದ್ದಾರೆ ಅಪ್ಪ, ಈ ಪ್ರೀತಿಯ ಕಾರಣಕ್ಕಾಗಿಯೆ ್ವಾಗ ಮಾಡಿದ ಬಾಲಲೀಲೆಗಳಿಂದ ಕುಪಿತರಾದ ಾಜ್ಯ ತಂದೆ ದೊಡ್ಡಪ್ಪ ಅಪ್ಪ ಅವರಿಂದ ಹಲವಾರು ರ್ಮದೇಟು' ತಿಂದದ್ದೂ ಉಂಟು. ಆದರೆ "ಪ್ರೀತಿ ಾನು ಏನನ್ನೂ ಮಾಡಲಾರೆ" ಎಂಬ 'ಚಂಪಾ' ಸಾಲನ್ನು ತಮ್ಮ ಬದುಕಾಗಿಸಿಕೊಂಡ ಅಪ್ಪ ನ್ನು ಇಲ್ಲದೆ ಬದುಕಲು ಸಾಧ್ಯವೆ? ಕೋಮಲಾ ಂಥ ಸದ್ಗುಣಿಯ ಕೈ ಹಿಡಿದರೂ ಅಕ್ಕನ ಮಗಳ ಒಂದು 'ಕುಡಿಗಣ್ಣು' ಹಾರಿಸದೆ ಇರಲಾರರು.

ವರ ಪವಿತ್ರ ಪ್ರೀತಿಗೆ ಾಗಿ ತಾನಾದರೂ ಮುಕಿರಬೇಕು ಎಂದು ನಿಸಿದ ಾದೇವಿಯವರು 'ಇಹಲೋಕ ಯಾತ್ರೆ ುೀ ಬಿಟ್ಟರು. ಅಪ್ಪ ಎದೆಗುಂದವೆ, 'ದೈವೆಚ್ಛೆ' ಎಂದು ಂದರು, ಪಾಪ! ರೂ ಶರಣಬಸಪ್ಪ ೀತಿಯಿಂದ ಹಿಂದೆ ಿಲ್ಲ, ತಾನು ವ, ತನ್ನ ಮೊಮ್ಮಕ್ಕಳ ಗೆ ಸರಿಸಮವಾಗಿರುವ ಅಕ್ಕನ ಮಗಳನ್ನೇ ಮಡಿ ಪ್ರೀತಿಯ ಪತಾಕೆಯನ್ನು ಹಾರಿಸಿದರು. ಇದನ್ನು ಲವಾರು ಪತ್ರಕರ್ತರು ಏನೇನೋ ಮಟಗುಟ್ಟಿದರು. "ಮುದುಕನ ಮದುವೆ" ಎಂದು ಛೇಡಿಸಿದರು. ಇಳಿವಯಸ್ಸಿನಲ್ಲಿ ಇದೆಂಥ ಚಪಲ?!" ಎಂದು ಕೆಲವರು ಹುಬ್ಬೇರಿಸಿದರು. ಆದರೆ "ಯಾರೇನೆಂದರೂ ಓರಂತಿಪ್ಪುದೆ ಸಮತೆ" ಎಂಬ ಶರಣ ತತ್ವದಂತೆ ಮೌನವಾಗಿ ಮನೆಯಲ್ಲಿಯೆ ಕುಳಿತು ಮೌನಾನುಷ್ಠಾನ ಮಾಡಿದರು. ನಿತ್ಯ ಹಾಲು, ಮೊಸರು ಕುಡಿದು, ಬಾದಾಮಿ, ಉತ್ತುತ್ತಿ ಕಲ್ಲುಸಕ್ಕರೆ, ಗೋಡಂಬಿ ತಿಂದುಂಡು ಸಾಮು ದಂಡ ಮಾಡಿ ಏಕರಲಾಡಿದರೂ ಹೊಸ ಅವ್ವನ ಮಡಿಲು ಚಿಗುರಲಿಲ್ಲ. ಶರಣಬಸವೇಶ್ವರ ಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿಯಾದ ಒಬ್ಬ ಗಂಡು ಮಗ ಹುಟ್ಟಲಿಲ್ಲ! ಈ ಕಾರಣಕ್ಕಾಗಿಯೆ ಅಪ್ಪಾ ಅವರು ಮಾಡಿದ ತೀರ್ಥಯಾತ್ರೆಗಳಿಗೆ ಲೆಕ್ಕವೇ ಇಲ್ಲ. ನಾಡಿನ ವೈದ್ಯರುಗಳು ಕೈಚೆಲ್ಲಿದರು. ಪರನಾಡಿನ ವೈದ್ಯರ ಕೈಗೆ ಅಪ್ಪವರ ಸಮಸ್ಯೆ ಸಿಕ್ಕರೂ ಬಗೆಹರಿಸಲಾಗಲಿಲ್ಲ. ಇದು ಈ ನಾಡಿನ ಜನಗಳ ದುರ್ವಿಧಿಯೊ? ಏನೋ? ಮುಂಬರುವ ದಿನಗಳೇ ಇದಕ್ಕೆ ಉತ್ತರ ಹೇಳಲಿವೆ.

ವಿಚಿತ್ರ ಹಾಗೂ ಆಶ್ಚರ್ಯವೆಂದರೆ ನಾಡಿನ ಮೂಲೆ ಮೂಲೆಗಳಿಂದಷ್ಟೆ ಅಲ್ಲದೆ ಪರ ರಾಜ್ಯಗಳಿಂದಲೂ 'ಶರಣಬಸವೇಶ್ವರರ ಗುಡಿಗೆ ಹೋಗಿ ಮಡಿಯಿಂದ ನಡಕೊಂಡು ಬಂದರೆ ಮಕ್ಕಳಾಗುತ್ತವೆ' ಎಂದು ಜನ ಇಂದಿಗೂ ಬರುತ್ತಾರೆ. ಎಲ್ಲಾ ಜನಗಳಿಗೂ ಕಾಮಧೇನು ಕಲ್ಪವೃಕ್ಷವಾಗಿ ಮಕ್ಕಳ ಭಾಗ್ಯವನ್ನು ಕರುಣಿಸುವ ಶರಣ



ಬಸವೇಶ್ವರರು ತನ್ನ ಕರುಳ ಕುಡಿಯಾದ ಶರಣಬಸಪ್ಪ ಅಪ್ಪವರ ಕನಸು ನನಸು ಮಾಡದಿರುವುದು ವಾಸ್ತವಿಕ ಸತ್ಯ.

"ಹೊಗಳೆ ಹೊಗಳಿ ಹೊನ್ನ ಶೂಲ"ದಲ್ಲಿ ತಮ್ಮನ್ನು ಇರಿಸಿಕೊಳ್ಳುವುದೆಂದರೆ 'ಅಪ್ಪಾ' ಅವರಿಗೆ ಎಲ್ಲಿಲ್ಲದ



ಹಿಗ್ಗು. ಸದಾ ತನ್ನ ಕಾಲೇಜಿನ ಪ್ರಾಂಶುಪಾಲರನ್ನು, ಉಪನ್ಯಾಸಕರನ್ನು ಮುಂದೆ ಕುಳ್ಳಿರಿಸಿಕೊಂಡು ತನ್ನನ್ನು ಹೊಗಳಿಸಿಕೊಳ್ಳುತ್ತಲೇ ಇರಬೇಕೆಂಬ ಚಪಲ. ಇದಕ್ಕೆ ತಕ್ಕಂತೆ ಕಾಲೇಜಿನ ಎಲ್ಲಾ ಗಣಂಗಳು ಅಪ್ಪನ ಮೇಲ್ಮಟ್ಟದಲ್ಲಿ ಹಳಾಯಿಸಿ ಅಟ್ಟಕ್ಕೆ ಏರಿಸಿದ್ದೇ ಏರಿಸಿದ್ದು. 'ಅಪ್ಪ' ಹಗಲು ಎಂದರೆ ಹಗಲು, 'ರಾತ್ರಿ' ಎಂದರೆ ರಾತ್ರಿ ಎಂದು ಹೇಳಲೇಬೇಕು. ಯಾರಾದರೂ ಅವರ ಮಾತನ್ನು ಮೀರಿ ತಮ್ಮ ಅಭಿಪ್ರಾಯ ಹೇಳಲು ಸಾಧ್ಯವೆ? ಅಂಥವರು ಅಪ್ಪನ ಊಳಿಗದಲ್ಲಿ ಇರಲು ನಾಲಾಯಕ್‌ರು. ಸದಾ ಇವರ ಸುತ್ತ ಮುತ್ತ ಕೈಮೊಸೆಯುತ್ತ ಕಾಲು ಬೀಳುತ್ತ ಖುಷಿ ಪಡಿಸುತ್ತ ಇದ್ದು ಬಿಟ್ಟರೆ ಅಪ್ಪ ಅವರಿಗೆ ಕಲ್ಪವೃಕ್ಷ, ಕಾಮಧೇನುವಾಗುತ್ತಾರೆ. ಹೆಂಗರುಳಿನ ಅಪ್ಪ ಹೆಣ್ಣು ಮಕ್ಕಳಿಗೆ ಇಂಥದರಲ್ಲಿ ಹೆಚ್ಚಿನ ಸದರನ್ನು ನೀಡಿರುತ್ತಾರೆಂಬುದೇ ಒಂದು ಹೆಗ್ಗಳಿಕೆ.

ಶರಣರ ವಿಚಾರಗಳನ್ನು ಚಾಚೂತಪ್ಪದೆ ಪಾಲಿಸಬೇಕೆಂಬುದು ಇವರ ನಂಬುಗೆ. ಹಾಗಾಗಿಯೇ ಇರಬೇಕು. ತನ್ನ ತಮ್ಮ ಬಸವರಾಜಪ್ಪ ಅಪ್ಪನನ್ನು ಗುಡಿಯ ಹತ್ತಿರಕ್ಕೂ ಬಿಟ್ಟುಕೊಳ್ಳುವುದಿಲ್ಲ. ಅವರ ಮಕ್ಕಳನ್ನಂತೂ ಸಮೀಪಕ್ಕೂ ಬರಗೊಡುವುದಿಲ್ಲ. ಅವರೆಲ್ಲ 'ಇಂಡಿಯನ್ ಆಯಿಲ್ ಕಂಪನಿ'ಯಂಥ ಸಂಸ್ಥೆಗಳ ಏಜೆನ್ಸಿ ಪಡಕೊಂಡು ಕೆಲಸ ಮಾಡಿಕೊಂಡಿದ್ದಾರೆ. ಜೊತೆಗೆ ಇಂಥವರಿಗೆ ಸದರ ಕೊಟ್ಟರೆ ಮುಂದೊಂದು ದಿನ ತನಗೆ ಗಂಡು ಮಕ್ಕಳಾಗಿಲ್ಲದ್ದರಿಂದ ಅವರೇ ಮಹಾದಾಸೋಹ ಪೀಠದ ಅಧಿಪತಿಗಳಾದರೆ? ಎಂಬ ಅಳುಕು ನಮ್ಮ ಕಥಾ ನಾಯಕ ಅಪ್ಪವರಿಗೆ ಕಾಡುತ್ತದೆ. ಜೊತೆಗೆ "ನಂಟುಭಕ್ತ ನಾಯಕ ನರಕ" ಎಂಬುದು ಇವರು ನಂಬಿಕೊಂಡು ಬಂದ ವಿಚಾರ.

ಹೇಳಿಕೇಳಿ ದಾಸೋಹ ಪೀಠದ ಅಧಿಪತಿಗಳು ನಮ್ಮ ಅಪ್ಪ. ಇಡೀ ಊರಿಗೆ ಊರೇ ಉಪವಾಸಬಿದ್ದರೂ, ದೂರದ ಊರುಗಳಿಂದ ಬಂದ ಭಕ್ತರು ಉಪವಾಸ ಉಳಿದರೂ ತನಗೆ ಆಗಬೇಕಾದದ್ದೇನು? ಎಂಬ ತತ್ವ ಅಪ್ಪನದು. ಹಾಗಾಗಿ ಇಲ್ಲಿನ ಅಡುಗೆ ಮನೆಯಲ್ಲಿ ಒಲೆ ಹತ್ತಿ ಉರಿಯದೆ ವರ್ಷಗಳೆಷ್ಟೋ ಉರುಳಿ ಹೋಗಿವೆ. ಇದನ್ನು ಅರಿಯದ ಮೂಢ ಭಕ್ತರು ತಮ್ಮ ಮನೆಯಲ್ಲಿಯ ಹಸು-ಕರುಗಳನ್ನು ತಂದು ದಾಸೋಹದ ಮನೆಗೆ ಒಪ್ಪಿಸಿ ಕೃತಾರ್ಥರಾಗುತ್ತಾರೆ. ಆದರೆ ಅಪ್ಪಾ ಅವನ್ನು ನೇರ 'ಕಸಾಯಿಖಾನೆ'ಗೆ ಸಾಗಹಾಕಿ 'ಸ್ವರ್ಗ ಸುಖ' ಅನುಭವಿಸುತ್ತಾರೆ. ಏಕೆಂದರೆ ಅವೆಲ್ಲ ಮಠದ ಆವರಣದಲ್ಲಿ ತಿರುಗಾಡಿ ಸಗಣಿ ಹಾಕಿ ರಾಡಿ ರಮರಾಡಿ ಮಾಡಿಬಿಟ್ಟರೆ ಅವನ್ನೆಲ್ಲ ಯಾರು ತೊಳೆಯಬೇಕು? ಅವುಗಳ ಸಂರಕ್ಷಣೆ ಯಾರು ಮಾಡಬೇಕು? ಎಂಬ ಮುಂದಾಲೋಚನೆ ನಮ್ಮ 'ಅಪ್ಪ'ನಿಗೆ.

ಹಿಂದೊಮ್ಮೆ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದ ಶರಣಬಸಪ್ಪ ಅಪ್ಪ, ಅದು ತಾನು ಈಗಾಗಲೆ ಕುಳಿತಿರುವ ದಾಸೋಹ ಪೀಠಕ್ಕೆ ಸರಿಸಮವಾಗಲಾರದು ಎಂಬ ಧೋರಣೆಯಿಂದ ತೆಪ್ಪಗೆ ಕುಳಿತುಕೊಂಡು ಶರಣತನ ಮೆರೆದರಂತೆ! ಇವರ ಮೌನ ಕ್ರಾಂತಿ ಬಹು ಮಹತ್ತರ ಪ್ರಚಾರವನ್ನು ಅ.ಭಾ.ವೀ. ಮಹಾಸಭೆಗೆ ತಂದುಕೊಟ್ಟಿತು ಎಂಬುದು ಅಪ್ಪ ಅವರ ಅಂಬೋಣ! ಯಾರಾದರೂ ಈ ಮಾತನ್ನು ಅಲ್ಲಗಳೆಯಲಾದೀತೆ?

ತೀರಾ ಇತ್ತೀಚಿನ ವರ್ಷಗಳಲ್ಲಂತೂ ಅಪ್ಪ ಮಾಡಿರುವ, ಮಾಡಿಸುತ್ತಿರುವ ಕಾಲೇಜುಗಳಲ್ಲಿ ಸೀಟು ಗಿಟ್ಟಿಸಿಕೊಳ್ಳುವುದೆಂದರೆ ಯಮಸಾಹಸ ಪಡಲೇಬೇಕಾಗಿಲ್ಲ. ಕುರುಡು ಕಾಂಚಾಣ ಝಣ ಝಣ ಕುಣಿಯತೊಡಗಿದರೆ ಅಪ್ಪ ಅವರ ರೆಪ್ಪೆಗಳು "ಮೇನಕೆ ಕಂಡ ವಿಶ್ವಾಮಿತ್ರನ ಮನಸ್ಸಿನಂತೆ" ಪತರಗುಟ್ಟತೊಡಗುತ್ತದೆ. ಇದೆಲ್ಲ ಮಾಡುತ್ತಿರುವುದು ಅಪ್ಪ ತನ್ನ "ಗೇಣು ಹೊಟ್ಟೆಗಾಗಿ ತುಂಡು ಬಟ್ಟೆಗಾಗಿ". ಅನ್ನ ದಾಸೋಹದ ಮಠವಂತೂ ಹೊಗೆಯಿಲ್ಲದ ಅಡುಗೆಕೋಣೆಗಳಿಂದ ಕಂಗೊಳಿಸುತ್ತಿದ್ದರೆ, ಜ್ಞಾನ ದಾಸೋಹದ ಇಂಜಿನಿಯರಿಂಗ್, ಎಂ.ಬಿ.ಎ., ಪಾಲಿಟೆಕ್ನಿಕ್, ಪಿಯು, ಸೈನ್ಸ್ ಮುಂತಾದ ರೆಸಿಡೆನ್ಸಿಯಲ್ ಕಾಲೇಜುಗಳು ಹಣದ ಹೊಳೆಯಲ್ಲಿ ತೇಲುತ್ತಿವೆ.

ಇಲ್ಲಿಯತನಕ ಆಧುನಿಕ ಅಪ್ಪನನ್ನು ಕಲಬುರ್ಗಿಯ ಜನ ಸಹಿಸಿಕೊಂಡಿದ್ದಾರಲ್ಲ, ಅದೇ ವಿಶೇಷ! ■

ರ್ಗದವಿದೆ. ಪತ್ರಿಕೆಗಳ ಬೆಂಬಲವಿದೆ. ಸರ್ಕಾರವಂತೂ ಇದೆ. ಹೀಗಿರುತ್ತಾ ಕರಾವಳಿಯಲ್ಲಿ ಭಜರಂಗಿಗಳನ್ನು ಯುವ ಶೂರರಿಲ್ಲ ಎಂದು ಹೇಳಿದರೆ ಅದು ಖಂಡಿತ ಳಿನದ ಮಾತಲ್ಲ.

ಳೆಅಂಗಡಿಯ ಯುಬಿಎಂಸಿ ಶಾಲೆಯಲ್ಲಿ ಕ್ರೈಸ್ತ ಸ್ಕೃತಿಯ ಪ್ರದರ್ಶನ ತಡೆಯುವುದರ ಮುಖಾಂತರ ಗದಳ ಇಲ್ಲಿನ ಕ್ರೈಸ್ತ ಪ್ರಜೆಗಳಿಗೆ "ನೀವು ಈ ಲ್ಲಿ ಇತರರ ಜೊತೆ ಸಮಾನ ಹಕ್ಕುಗಳನ್ನು ಪಡೆದಿರುವ ಲ್ಲ"ಎಂಬ ಸಂದೇಶವನ್ನು ತಲುಪಿಸಿದೆ. ಭಜರಂಗಿ ಜೊತೆ ಸಂಘರ್ಷ ಬೇಡ ಎಂದು ತೀರ್ಮಾನಿಸಿ ಆಡಳಿತ ಮಂಡಳಿ ತನ್ನ ಕಾರ್ಯಕ್ರಮವನ್ನು ರದ್ದುಪಡಿಸಿದೆ. ಅದು ಪೊಲೀಸ್ ಕಂಪ್ಲೇಂಟ್ ಕ್ರಮಗಳ ಗೋಜಿಗೆ ಹೋಗಿಲ್ಲ, ಆದರಿಂದ ಪ್ರಯೋಜನವಾಗುತ್ತಿರಲಿಲ್ಲ, ಆ ಮಾತು ಬೇರೆ. ಲ್ಲಿ ಹಳೆಅಂಗಡಿಯಲ್ಲಿ ಭಜರಂಗದಳಕ್ಕೆ ವಾಕ್ ಸಿಕ್ಕಿದೆ. ಕೇವಲ ಬಾಯ್ದೆರೆಯ ಬೆದರಿಕೆ ಮತ್ತು ರೆಯ ಪಿಸುಮಾತಿನ ಪ್ರಚಾರಗಳಿಂದ ಅವರು ತಮ್ಮ ಶವನ್ನು ಈಡೇರಿಸಿಕೊಂಡಿದ್ದಾರೆ. ಆದರೆ ಶಾಲೆ ವರಲ್ಲಿ ಬೈಬಲ್‌ನ ಕತೆಯನ್ನು ಒಳಗೊಂಡ ಒಂದು ಾನ ಪ್ರದರ್ಶನವನ್ನು ತಡೆದಿದ್ದರಿಂದ ಭಜರಂಗ ವರು ಯಾವ ಸಂಸ್ಕೃತಿಯನ್ನು ರಕ್ಷಿಸುತ್ತಿದ್ದಾರೆ. ಬೈಬಲ್ ಭಾಷಾಂತರಗೊಂಡು ಈಗ ಸುಮಾರು ನೂರೈವತ್ತು ಗಳಾಗಿವೆ. ಅನಂತರ ಕನ್ನಡ ಬೈಬಲ್‌ನ ಹಲವು ಗಳು ಪ್ರಕಟವಾಗಿವೆ. ತುಳು ಮತ್ತು ಕೊಂಕಣಿ ಗಳಲ್ಲೂ ಬೈಬಲ್ ಅನುವಾದಗೊಂಡಿವೆ. ಏಸುಕ್ರಿಸ್ತ ಸಗೇರುವ ಬೈಬಲ್‌ನ ಹೃದಯವಿದ್ರಾವಕ ಅಧ್ಯಾಯ ಆಧರಿಸಿ ಕನ್ನಡದ ಹಿರಿಯ ಕವಿ, ವಿದ್ವಾಂಸ, ಗೋವಿಂದ ಪೈಗಳು ತಮ್ಮ "ಗೊಲ್ಗೊಥಾ" ಎಂಬ ಕಾವ್ಯವನ್ನು ರಚಿಸಿದ್ದು 1947ರಲ್ಲಿ. ಭಾರತದ ಸ್ವತಂತ್ರವಾದ ವರ್ಷ ಅದು. ಮಂ.ಗೋವಿಂದ ಪೈಗಳಿಗೆ ನುಡಿ ಮತ್ತು ಪರಂಪರೆಯ ಕುರಿತು ಇದ್ದ ನ್ನು ವಿವರಿಸುವ ಅಗತ್ಯವಿಲ್ಲ. ಸಂಸ್ಕೃತಿ ಮತ್ತು ಯು ಸಂಶೋಧನೆ ಅವರಿಗೆ ವೃತ್ತಿಯೂ ಹೌದು; ಯೂ ಹೌದು. ಸಂಪ್ರದಾಯ ನಿಷ್ಠ ಗೌಡ ಸಾರಸ್ವತ ಬವೊಂದರಲ್ಲಿ ಹುಟ್ಟಿಬೆಳೆದ ಗೋವಿಂದಪೈಗಳ ಮಾತು ಕೊಂಕಣಿ. ಅವರ ಸಂಸ್ಕೃತಿ ನಿಷ್ಠೆ ಯಾವ ದ್ದು ಎಂದರೆ, ಸಾಧ್ಯವಿದ್ದಿದ್ದರೆ ತಾನು ಕೊಂಕಣಿಯಲ್ಲೇ ಬರೆಯುತ್ತಿದ್ದೆ ಎಂದು ಅವರು ಹೇಳಿಕೊಂಡಿದ್ದಾರೆ. 1950ರಲ್ಲಿ ಮುಂಬಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾಡಿದ ಭಾಷಣದಲ್ಲಿ ಅವರು ಹೇಳಿದ್ದರು "ನಾನು ಎರಡು ತಾಯಂದಿರ ಕೂಸು. ಕೊಂಕಣಿ ನನ್ನ ಹೆತ್ತತಾಯಿ, ಕನ್ನಡ ಸಾಕು ತಾಯಿ. ಆದರೆ ನನ್ನ ತಾಯಿಯ ಮೊಲೆಯಲ್ಲಿ ಹಾಲಿಲ್ಲ, ಕೊಂಕಣಿಯಲ್ಲಿ ಸಾಹಿತ್ಯವಿಲ್ಲ, ಆಕೆ ಆ ಬಗ್ಗೆ ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಈ ದಾಯಿಯಾದರೆ ಪಯಸ್ವಿನಿ." ಇಷ್ಟು ಗಾಢವಾದ ಭಾಷಾ ನಿಷ್ಠೆಯ ಗೋವಿಂದ ಪೈಗಳಿಗೆ ಬೈಬಲ್‌ನ ಪ್ರಸಂಗವೊಂದನ್ನು ಅದು ತನ್ನ ಒಳಗಿನದ್ದೇ ಎಂಬ ತುಡಿತದಲ್ಲಿ ನಿರೂಪಿಸಲು ಪರಧರ್ಮದ ಕುರಿತ ಭಯ ಅಡ್ಡಬರಲಿಲ್ಲ. ಹಳೆಅಂಗಡಿಯ ಶಾಲೆಯ ಹುಡುಗರು ಕ್ರಿಸ್ತಮಹಾತ್ಮೆಯನ್ನು ಯಕ್ಷಗಾನ ಶೈಲಿಯಲ್ಲಿ ಪ್ರಸ್ತುತಪಡಿಸಲು ಬಯಸಿದ್ದು, ಗೋವಿಂದ ಪೈಗಳು ಹಾಕಿಕೊಟ್ಟ ಪರಂಪರೆಯ



ಮುಂದುವರಿಕೆಯೇ ಆಗಿದೆ. ಪೈಗಳು ತಮ್ಮ ಕಾವ್ಯವನ್ನು ಪರಂಪರಾಗತ ಲಲಿತ ರಗಳೆಯಲ್ಲಿ ಬರೆದು ಬೈಬಲ್ ಗ್ರಂಥವನ್ನು ಕನ್ನಡದ ಪುರಾಣವಾಗಿಸಿದರು. ಹಲವು ತಲೆಮಾರುಗಳ ವಿದ್ಯಾರ್ಥಿಗಳು (ಈ ಲೇಖಕನೂ ಸೇರಿದಂತೆ) ವಿವಿಧ ತರಗತಿಗಳಲ್ಲಿ ಗೊಲ್ಗೊಥಾವನ್ನು ಪಠ್ಯವಾಗಿ ಅಭ್ಯಾಸ ಮಾಡಿದರು. ಆದರೆ ನಾವು ಯಾರೂ ಮತಾಂತರಗೊಳ್ಳಲಿಲ್ಲ, ಮಹಾತ್ಮನೊಬ್ಬನ ಬಗ್ಗೆ ಅರಿವು ಮೂಡಿದ ಧನ್ಯತಾಭಾವ ಮಾತ್ರ ನಮ್ಮದಾಯಿತು.


ಕರಾವಳಿಯಲ್ಲಿ ಬೈಬಲ್ ಆಧಾರಿತ ಯಕ್ಷಗಾನ ಪ್ರದರ್ಶನಗಳಿಗೆ ಕನಿಷ್ಠ ನೂರು ವರ್ಷಗಳ ಚರಿತ್ರೆ ಇದೆ. ಮೊನ್ನೆಮೊನ್ನೆವರೆಗೆ ನಮ್ಮ ಜೊತೆಗೆ ಬದುಕಿದ್ದ ಈ ನಾಡಿನ ಹಿರಿಯ ಯಕ್ಷಗಾನ ಕಲಾವಿದ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಗಾಂಧಿವಾದಿ ಮಲ್ಪೆ ಶಂಕರನಾರಾಯಣ ಸಾಮಗರು (1910-1999) 'ಏಸುಕ್ರಿಸ್ತ ಮಹಾತ್ಮೆ' ಎಂಬ ಯಕ್ಷಗಾನ ಪ್ರಸಂಗದಲ್ಲಿ ಏಸುಕ್ರಿಸ್ತನ ಪಾತ್ರ ವಹಿಸುತ್ತಿದ್ದರು. ಅವರ ಹೃದಯಸ್ಪರ್ಶಿ ಅಭಿನಯವನ್ನು ಈಗಲೂ ಕರಾವಳಿಯ ಯಕ್ಷಗಾನ ಪ್ರೇಮಿಗಳು ನೆನಪಿಸಿಕೊಳ್ಳುತ್ತಾರೆ. ಅವರ ಹಾಗೆ ಅವರ ಮಗ, ಸ್ವತಃ ಒಬ್ಬ ಯಕ್ಷಗಾನ ಕಲಾವಿದರೂ ಆದ ಈ ಇಂಗ್ಲಿಷ್ ಪ್ರಾಧ್ಯಾಪಕ ಎಂ.ಎಲ್. ಸಾಮಗರೂ ಈ ಪ್ರಸಂಗದಲ್ಲಿ ಏಸುವಿನ ಪಾತ್ರ ಮಾಡುತ್ತಿದ್ದರು. ಉಡುಪಿಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಲೇಖಕರೂ ಆಗಿರುವ ಅಂಬಾತನಯ ಮುದ್ರಾಡಿಯವರು ಸ್ವತಃ 'ಕ್ರಿಸ್ತಕಾರುಣ್ಯ' ಎಂಬ ಯಕ್ಷಗಾನ ಪ್ರಸಂಗವೊಂದನ್ನು ರಚಿಸಿದ್ದು, ಅದರಲ್ಲಿ ಅವರೇ ಏಸುವಿನ ಪಾತ್ರ ಮಾಡುತ್ತಿದ್ದರು. ಉಡುಪಿಯ ಪ್ರಸಿದ್ಧ ನೃತ್ಯ ನಿರ್ದೇಶಕ ವಾಸುದೇವ ಭಟ್ ಅವರ ಬೈಬಲ್ ಆಧಾರಿತ ರೂಪಕ "ಭುವನ ಜ್ಯೋತಿ" ನಾಡಿನಾದ್ಯಂತ ಪ್ರದರ್ಶನ ಕಂಡಿದೆ. ಆದರೆ ಇದೆಲ್ಲದಕ್ಕಿಂತ ಬಹಳ ಮೊದಲೇ, ಬೈಬಲ್‌ನ ಜೀಸಸ್ ಏಸುವಾಗಿ, ಮೇರಿ ಮರಿಯಾಳಾಗಿ, ಡೇವಿಡ್ ದಾವೀದನಾಗಿ ಕನ್ನಡೀಕರಣಗೊಂಡಿದ್ದರು. ಕನ್ನಡದ ಈ ಕ್ರೈಸ್ತ ಹೆಸರುಗಳು ಅವುಗಳ ಆರ್ಮಾಯಿಕ್ ಭಾಷೆಯ ಮೂಲಶಬ್ದಗಳಿಗೆ ಧ್ವನಿಯಲ್ಲಿ ಆಶ್ಚರ್ಯ ಹುಟ್ಟಿಸುವಷ್ಟು ಹತ್ತಿರವಾಗಿದೆ. ಕಡೆಯ ಪಕ್ಷ ಇದರಿಂದಲಾದರೂ ಕ್ರೈಸ್ತ ಧರ್ಮ ವಿಷ್ಯಾ ಖಂಡದ ಧರ್ಮ ಎಂಬುದನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಕನ್ನಡ ಪರಂಪರೆಯಲ್ಲಿ ಮೋಗ್ಲಿಂಗ್, ರೆವ.ಕಿಟ್ಟೆಲ್, ಚನ್ನಪ್ಪ ಉತ್ತಂಗಿ, ಮಂ. ಗೋವಿಂದ ಪೈ, ದೊಡ್ಡ ಸಾಮಗರು (ಮಲ್ಪೆಶಂಕರ ನಾರಾಯಣ ಸಾಮಗರ ತಮ್ಮ ರಾಮದಾಸ ಸಾಮಗರೂ ಹೆಸರಾಂತ ಯಕ್ಷಗಾನ ಕಲಾವಿದರಾಗಿರುವುದರಿಂದ ಅಣ್ಣನಿಗೆ ಊರವರ ಬಾಯಲ್ಲಿ ಈ ಹೆಸರು) ಅಂಬಾತನಯ ಮುದ್ರಾಡಿ, ಉಡುಪಿ ವಾಸು ದೇವಭಟ್ ಮುಂತಾದವರಿಗೆ ಸ್ಥಾನವಿದ್ದರೆ ಬೈಬಲ್‌ಗೂ ಇದೆ. ಇವರ ದೋಹದಿಂದ ಬೈಬಲ್ ಕನ್ನಡದ ಪುರಾಣವಾಗಿದೆ. ಕನ್ನಡದ್ದಲ್ಲದ ಕೃತಿಗಳ ಜೊತೆ ನಿಯೋಗವೂ ಕನ್ನಡ ಪರಂಪರೆಯ ಭಾಗವಾಗಿದೆ. ಭಜರಂಗಿಗಳು ರಕ್ಷಿಸುತ್ತಿರುವುದು ಯಾವ ಪರಂಪರೆಯನ್ನು?

ಇಷ್ಟಕ್ಕೂ ಕರ್ನಾಟಕದ ಶಾಲೆಯೊಂದರ ಮಕ್ಕಳು ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಒಂದು ರೂಪಕವನ್ನು ಪ್ರದರ್ಶಿಸುವುದಕ್ಕೆ ಸಮರ್ಥನೆಗಳೆಲ್ಲ ಯಾಕೆ ಬೇಕು? ನಮ್ಮದು ಪ್ರಜಾಪ್ರಭುತ್ವವೇ ಹೌದಾದರೆ ಈ ಯಾವ ಸಾಂಸ್ಕೃತಿಕ ಹಿನ್ನೆಲೆ ಇಲ್ಲದೆಯೂ ಆ ಶಾಲೆಯ ಆಡಳಿತ ಮಂಡಳಿಗೆ ಆ ರೂಪಕವನ್ನು ಪ್ರದರ್ಶಿಸುವ ಹಕ್ಕಿದೆ. ಹಳೆಯಂಗಡಿಯ ಶಾಲೆ ಕ್ರೈಸ್ತರ ಆಡಳಿತಕ್ಕೆ ಸೇರಿದ ಸಂಸ್ಥೆಯಾಗಿರಬಹುದು. ಆದರೆ ಆ ಶಾಲೆಯ ಮಕ್ಕಳು ಓದುವುದು ಕರ್ನಾಟಕ ಸರಕಾರದಿಂದ ನಿಗದಿಗೊಂಡಿರುವ ಪಠ್ಯಪುಸ್ತಕಗಳನ್ನೇ. ಆ ಸಂಸ್ಥೆಯ ಸ್ಕೂಲ್ ಡೇ ಸಮಾರಂಭದಲ್ಲಿ ಕ್ರೈಸ್ತ ರೂಪಕವೊಂದನ್ನು ಬಿಟ್ಟರೆ ಉಳಿದ ಅಷ್ಟೂ ಕಾರ್ಯಕ್ರಮಗಳು ಇಲ್ಲಿನ ಪ್ರಧಾನ ಧರ್ಮ ಹಾಗೂ ಪರಂಪರೆಗೆ ಸಂಬಂಧಿಸಿದ ವಸ್ತುಗಳನ್ನು ಆಧರಿಸಿರುವಂತಹವು. ಉದಾಹರಣೆಗೆ ಕಳೆದ ವರ್ಷದ ಸ್ಕೂಲ್ ಡೇಯಲ್ಲಿ ಆ ಶಾಲೆ ಮಕ್ಕಳು ಅಭಿನಯಿಸಿದ ಪ್ರಧಾನ ನಾಟಕ "ಏಕಲವ್ಯ"ಪ್ರಸ್ತುತ ಆ ಶಾಲೆಯಲ್ಲಿರುವ 8 ಶಿಕ್ಷಕರಲ್ಲಿ ಐವರು ಹಿಂದೂಗಳು. ಕರಾವಳಿಯಲ್ಲಿ ಭಜರಂಗಿಗಳು ಹಿಂದುಗಳ ಹೆಸರಿನಲ್ಲಿ ಭಜರಂಗಿಗಳು ಯಾರನ್ನು ಪ್ರತಿನಿಧಿಸುತ್ತಾರೆ? ಏನನ್ನು ಪ್ರತಿನಿಧಿಸುತ್ತಾರೆ? ಈಗ ಘೋಷಿತ ಹಾಗೂ ಅಘೋಷಿತ ಎರಡೂ ಬಗೆಯ ಸೆನ್ಸಾರ್‌ಗಳನ್ನು ಬಲಪ್ರಯೋಗ ಮತ್ತು ಬೆದರಿಕೆಗಳ ಮುಖಾಂತರ ಜಾರಿಗೆ ತರುತ್ತಿದ್ದಾರೆ. ಹಳೆಅಂಗಡಿ ಶಾಲೆಯಲ್ಲಿ ನಡೆದಂತಹ ಘಟನೆಗಳಿಂದ, ಇತರ ಶಿಕ್ಷಣ ಸಂಸ್ಥೆಗಳು ಯಾರೂ ಹೇಳದೇ ತಮಗೆ ತಾವೇ ನಿರ್ಬಂಧಗಳನ್ನು ಹಾಕಿಕೊಳ್ಳುತ್ತವೆ. ಈಗಾಗಲೇ ರಾಜ್ಯದಲ್ಲಿ ಆ ಪ್ರಕ್ರಿಯೆ ಪ್ರಾರಂಭವಾಗಿದೆ. ಕರ್ನಾಟಕ ಸಾಂಸ್ಕೃತಿಕವಾಗಿ ಬೆಂಗಾಡಾಗುತ್ತಿದೆ. ಆದರೆ ಇದು ಕೇವಲ ಸಂಸ್ಕೃತಿ ಮತ್ತು ಅಭಿರುಚಿಗೆ ಸಂಬಂಧಿಸಿದ ಸಮಸ್ಯೆಯಲ್ಲ, ರಾಜ್ಯದಲ್ಲಿ ಜನರ ನಾಗರಿಕ ಹಕ್ಕು ಮತ್ತು ಬದುಕಿನ ಮೂಲಭೂತ ಹಕ್ಕುಗಳು ಕೂಡಾ ಅಪಾಯವನ್ನು ಎದುರಿಸುತ್ತಿವೆ. ಹಳೆಅಂಗಡಿಯ ಪ್ರಕರಣ, ರಾಜ್ಯದಲ್ಲಿ ಸಂಸ್ಕೃತಿಯ ಹಂದರ ಮತ್ತು ಕಾನೂನಿನ ಆಳ್ವಿಕೆ -ಎರಡೂ ನೆಲಕಚ್ಚಿರುವುದರ ಸಂಕೇತವಾಗಿದೆ. ■

ಎಲ್.ಬಿ. ಅವರ ಮೈಲಿಗಲ್ಲು ಭಾಷಣ

[illegible] ಅವರು ನಾಡಿನ ಸಾಹಿತ್ಯದ [illegible] ನಿಷ್ಠುರ ಚಿಂತಕರು. ಬಸವರಾಜು ಅವರು [illegible] ಸಮ್ಮೇಳನದಲ್ಲಿ ಸೇರಿದ್ದ ಅಷ್ಟೂ ಜನರಿಗೆ ಪರಿಚಯವಿರಲಿಲ್ಲ. ಅವರನ್ನು ನಿರೂಪಕರು ಕಿಂಚಿತ್ತೂ ಸೌಜನ್ಯಕ್ಕಾದರೂ ಪರಿಚಯ ಮಾಡಲಿಲ್ಲ. ಅನಂತರದ ಗೋಷ್ಠಿಗಳಲ್ಲಿ ರಾಜಕಾರಣಿಗಳ ಕೈಕಾಲು ಹಿಡಿದು ಹೆಸರು ಹಾಕಿಸಿಕೊಂಡು ಬಂದ ಸಾಹಿತ್ಯದ ಗಂಧಗಾಳಿಯೂ ಇಲ್ಲದ ಅನೇಕರನ್ನು ಉದ್ದುದ್ದ ಮಾತುಗಳ ಮೂಲಕ ಪರಿಚಯ ಮಾಡಲಾಯಿತು. ಆದರೆ ಎಲ್‌ಬಿ ಅವರ ಬಗ್ಗೆ ಒಂದೇ ಒಂದು ಮಾತಿನ ಪರಿಚಯ ಮಾಡದೇ ಹೋದದ್ದು ಲೋಪ ಎಂದು ಯಾರಿಗೂ ಅನಿಸಲೇ ಇಲ್ಲ. ಅಸಮಾನ ವ್ಯವಸ್ಥೆಯ ವಿರುದ್ಧ 90ರ ಹರೆಯದ ಆ ಬಂಡಾಯಗಾರನ ಹೊಟ್ಟೆಯೊಳಗೆ ಅದೆಷ್ಟೊ ವರುಷಗಳಿಂದ ಕುದಿಯುತ್ತಿದ್ದ ವಿಚಾರಗಳು ಒಮ್ಮೆಲೇ ತೀವ್ರವಾಗಿ ಹೊರಬಂದವು. ಬಹುಶಃ ಯಾರೊಬ್ಬರೂ ಅವರಿಂದ ಅಂತಹ ಮಾತುಗಳನ್ನು ನಿರೀಕ್ಷೆ ಮಾಡಿರಲಿಲ್ಲ. ಅವರ ಮಾತಿನ ಮಧ್ಯೆ ಸಂಘಟಕರೊಬ್ಬರು ಕುಡಿಯಲು ಬಾಟಲಿಯಲ್ಲಿ ನೀರು ಕೊಡಲು ಹೋದರು. ಬಸವರಾಜು ಅದನ್ನು ನಿರಾಕರಿಸಿದರು. ಮಾತುಗಳನ್ನು ಮುಂದುವರಿಸಿದರು. ಬಹುಶಃ ಪ್ರತಿಯೊಂದು ಮಾತಿಗೂ ಚಪ್ಪಾಳೆ ಹಾಗೂ ಶಿಳ್ಳೆ ಹಾಕಿ ಸೇರಿದ್ದ ಜನಸ್ತೋಮ ಅವರ ಮಾತುಗಳನ್ನು ಸಾಮೂಹಿಕವಾಗಿ ಬೆಂಬಲಿಸಿತು; ಸಮರ್ಥಿಸಿತು. ಇನ್ನೂ ಮಾತಾಡಲಿ ಎಂಬ ಹುರುಪಿನಲ್ಲಿದ್ದ ಜನಸ್ತೋಮಕ್ಕೆ ಬಸವರಾಜು ಅವರ ಭಾಷಣ ಪೂರ್ತಿ ಮುಗಿಯಿತು ಅಂತ ಅನಿಸಲಿಲ್ಲ. ಏನು ಇಷ್ಟೇ ಮಾತಾಡಿದರಲ್ಲ ಅಂತ ಅನಿಸಿತು. ಸಾಹಿತ್ಯ ಸಮ್ಮೇಳನಗಳ ಪರಂಪರೆಯಲ್ಲೆ ಬಹುಶಃ ಈ ಸನ್ನಿವೇಶ ಅಪೂರ್ವವಾದುದು. ಭಾಷಣ ಮುಗಿಸಿ ಎಲ್‌ಬಿ ಅವರು ತಮ್ಮ ಕುರ್ಚಿಗೆ ಬಂದು ಕೂತರು. ಆಗ ಸಂಘಟಕರೊಬ್ಬರು ಕುಡಿಯಲು ಲೋಟದಲ್ಲಿ ನೀರು ಕೊಡಲು ಹೋದರು. ಬಸವರಾಜು ಅದನ್ನು ನಿರಾಕರಿಸಿದರು. ಬಹುಶಃ 'ಬಸವರಾಜು ಅವರು ತಮ್ಮ ಭಾಷಣದ ರಭಸದಿಂದ ಆಯಾಸಗೊಂಡಿದ್ದಾರೆ' ಎಂಬ ಸಂಘಟಕರ ಭ್ರಮೆಯನ್ನು ಬಸವರಾಜು ಅವರು ಛೇದಿಸಿದಂತಿತ್ತು.

ಕನ್ನಡ ಮಾತೆಯನ್ನು, ಕನ್ನಡ ಸರಸ್ವತಿಯನ್ನು, ಕನ್ನಡ ಸಾಹಿತ್ಯದ ಸಾರಸ್ವತ ಲೋಕವನ್ನು, ಕನ್ನಡಕ್ಕೆ ಬಂದಿರುವ 7 ಜ್ಞಾನಪೀಠ ಪ್ರಶಸ್ತಿಗಳನ್ನು ಹಾಗೂ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಅವರು ಕೊಂಡಾಡಲಿಲ್ಲ, ವೈಭವೀಕರಿಸಲಿಲ್ಲ. ಅಷ್ಟಲ್ಲದೆ 'ಈ ಅಧ್ಯಕ್ಷ ಸ್ಥಾನಕ್ಕೆ ನನ್ನನ್ನು ಕನ್ನಡದ ಕುಲಕೋಟಿ ಆಯ್ಕೆ ಮಾಡಿರುವುದು ನನ್ನ ನೂರು ಜನ್ಮಗಳ ಪುಣ್ಯದ ಫಲ' ಎಂಬ ನಾಲಿಗೆಯ ಮೇಲಿನ ತೋರಿಕೆಯ ಮಾತನ್ನೂ ಆಡಲಿಲ್ಲ. ಕಳೆದ 74 ಸಮ್ಮೇಳನಗಳ ಅಧ್ಯಕ್ಷೀಯ ಭಾಷಣದ ಹಳಸಲು ಪರಂಪರೆಯನ್ನು ಬಸವರಾಜು ಅವರು ಧಿಕ್ಕರಿಸಿದರು. 'ಮದಕರಿ ನಾಯಕನ ಜನಾಂಗದವರು ಎಂದು ಹೆಮ್ಮೆ ಪಡುವ ಈ ಜನಾಂಗದ ಮಕ್ಕಳು ಅನ್ನ, ನೀರು, ವಸತಿ, ಶಿಕ್ಷಣ ಇಲ್ಲದೆ ಬೀದಿ ಪಾಲಾಗಿದ್ದಾರೆ. ಅವರಿಗೆ ಸೌಲಭ್ಯ ಒದಗಿಸಲು ಅವರ ಪೋಷಕರಿಗೆ ಸಾಧ್ಯವಾಗುತ್ತಿಲ್ಲ. ಇದನ್ನು ಒದಗಿಸಬೇಕಾದುದು ಸರಕಾರದ ಆದ್ಯ ಕರ್ತವ್ಯ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಕ್ಕಳಿಗೆ ಕಡ್ಡಾಯ ಹಾಗೂ ಉಚಿತ ಶಿಕ್ಷಣ, ನುರಿತ ಅಧ್ಯಾಪಕರ ನೇಮಕ, ತಾಲೂಕುಗಳಲ್ಲಿ ಸರಿಯಾದ ಹಾಸ್ಟೆಲ್‌ಗಳ ನಿರ್ಮಾಣ, ನೆಲ, ಜಲ, ಕೈಗಾರಿಕೆ, ವಿದ್ಯುತ್, ಶಿಕ್ಷಣ ಇವುಗಳ ಸರಕಾರೀಕರಣ' – ಈ ವಿಚಾರ ಗಳನ್ನು ಒತ್ತಿಹೇಳಿದರು. ಖಾಸಗೀಕರಣ, ಜಾಗತೀಕರಣವನ್ನು ಹೀಗೇ ಮುಂದುವರಿಸಿದರೆ ಕರ್ನಾಟಕಕ್ಕೆ ಉಳಿಗಾಲವಿಲ್ಲ ಎಂದು ಹೇಳಿದರು. ಮಠಾಧೀಶರು ಮತ್ತು ಸರಕಾರದ ವಿರುದ್ಧ ಕೆಂಡಕಾರಿದರು. 1980ರ ದಶಕದಲ್ಲಿ ಆಗಿನ ದಲಿತ ಸಂಘರ್ಷ ಸಮಿತಿಯವರು 'ವಿಷದ ಹೆಂಡ ಬೇಡ; ಹೋಬಳಿಗೊಂದು ವಸತಿ ಶಾಲೆ ಕೊಡಿ' ಎಂಬ ಘೋಷಣೆಯಡಿಯಲ್ಲಿ ಮಾಡಿದ್ದ ಹೋರಾಟ ವನ್ನು ನೆನಪಿಸುವಂತಿತ್ತು. ಎಲ್‌ಬಿ ಅವರ ಭಾಷಣ ಮುಗಿದ ತಕ್ಷಣ ಖುಷಿಯಿಂದ ಕೆಲವು ಗೆಳೆಯರಿಗೆ ಫೋನ್ ಮಾಡಿದೆ. ಅವರಲ್ಲಿ ಕೆಲವರು 'ಬಸವರಾಜು ಅವರ ಭಾಷಣದಿಂದ ಇಡೀ ಸಮ್ಮೇಳನ ಸಾರ್ಥಕವಾಯಿತು. ಉಳಿದವರು ಏನಾದರೂ ಮಾತಾಡಿಕೊಂಡು ಸಾಯಲಿ. ನಾನಂತೂ ಇಂತಹ ಭಾಷಣ ಕೇಳುತ್ತೇನೆ ಅಂದುಕೊಂಡಿರ ಲಿಲ್ಲ' ಎಂದು ತಮ್ಮ ಅಭಿಪ್ರಾಯ ಹಂಚಿಕೊಂಡರು. ಎಲ್‌ಬಿ ಅವರ ಮಾತುಗಳ ಬಗ್ಗೆ ವಾಚಕರವಾಣಿಗಾದರೂ ಬರೆಯಬೇಕು ಎಂದು ನನ್ನ ಜೀವ ಹುಯ್ದಾಡುತ್ತಿತ್ತು, ಆದರೆ ವಾಚಕರವಾಣಿಯಲ್ಲಿ ನನ್ನ ಪತ್ರವನ್ನು ಹಾಕುತ್ತಾರೊ ಇಲ್ಲವೊ ಎಂಬ ಹುಯ್ದಾಟ ಕೂಡ ಇತ್ತು, ಹೀಗಿರುವಾಗ ಗುರುವಾರ ಗೌರಿ ಮೇಡಂ ಅವರು ಫೋನ್ ಮಾಡಿ, 'ಬಸವರಾಜು ಅವರ ಭಾಷಣದ ಬಗ್ಗೆ ನಿಮ್ಮ ಪ್ರತಿಕ್ರಿಯೆ ಬರೆದು ಕಳಿಸಿ' ಎಂದರು.



ವಾಸ್ತವವಾಗಿ ಎಲ್‌ಬಿ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬಗ್ಗೆ ಒತ್ತಿ ಹೇಳಿದ್ದರಿಂದ ಸಮ್ಮೇಳನದಲ್ಲಿ ಸೇರಿದ್ದ ಅನೇಕರಿಗೆ 'ಇವರು ಯಾವ ಜಾತಿಯವರು?' ಎಂಬ ಪ್ರಶ್ನೆ ಎದುರಾಯಿತು. ಜೊತೆಗೆ 'ಇವರು ಎಸ್‌ಸಿ ಅಥವಾ ಎಸ್‌ಟಿಯವರೇ ಇರಬಹುದು' ಎಂಬ ಉತ್ತರವನ್ನೂ ಅವರು ಕಲ್ಪಿಸಿಕೊಂಡರು. ಅಂದರೆ 'ಆ ಜಾತಿಯರಾಗಿದ್ದರೆ ಮಾತ್ರ ಆ ಸಮುದಾಯದ ಪರವಾಗಿ ಮಾತಾಡುತ್ತಾರೆ' ಎಂಬ ಸಾಮಾಜಿಕ ಹಾಗೂ ಸಾಹಿತ್ಯಕ ಮೂಢನಂಬಿಕೆಯನ್ನು ಗಟ್ಟಿಗೊಳಿಸಿಕೊಂಡರು. ಆದರೆ ತಮ್ಮ ಪ್ರಖರ ಆಲೋಚನೆಗಳ ಮೂಲಕ ಎಲ್‌ಬಿ ಅವರು ಈ ಮೂಢನಂಬಿಕೆಯನ್ನು ಎಂದೋ ನುಚ್ಚುನೂರು ಮಾಡಿದ್ದರು. ಬಹುಶಃ ಒಬ್ಬ ಎಸ್‌ಸಿ/ಎಸ್‌ಟಿ ಆಗಿದ್ದರೆ ಮಾತನಾಡಲಾರದ ವಿಚಾರಗಳನ್ನು ಎಲ್‌ಬಿ ಅವರು ಮಂಡಿಸಿದರು. ಉದಾಹರಣೆಗೆ 'ಜಾಗತೀಕರಣದಿಂದಲೇ ದಲಿತರ ಬಿಡುಗಡೆ' ಎಂದು ಬೊಬ್ಬೆ ಹೊಡೆಯುತ್ತಿರುವ ಕೆಲವು ದಲಿತ ಚಿಂತಕರ ಅಭಿಪ್ರಾಯಗಳನ್ನು ಬುಡಮೇಲು ಮಾಡಿದರು.

ಸಾಹಿತ್ಯ ಯಾರಿಗಾಗಿ ಮತ್ತು ಯಾತಕ್ಕಾಗಿ? ಎಂಬುದನ್ನು ಎಲ್‌ಬಿ ಅವರು ನೇರವಾಗಿ ಹೇಳಿದ್ದಾರೆ. ಅಷ್ಟು ಮಾತ್ರವಲ್ಲ ಪ್ರಭುತ್ವವು ಅತ್ಯುಗ್ರ ರೂಪದಲ್ಲಿ ದಮನಕಾಂಡವನ್ನು ನಡೆಸುತ್ತಿರುವಾಗ ಸಾಹಿತಿಗಳ ಜವಾಬ್ದಾರಿ ಮತ್ತು ಹೊಣೆಗಾರಿಕೆ ಯಾವುದು ಮತ್ತು ಅದು ಹೇಗಿರಬೇಕು? ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ರಾಜ್ಯದ ಮುಖ್ಯಮಂತ್ರಿ, ಮಠಾಧೀಶರು ಇದ್ದ ವೇದಿಕೆಯಲ್ಲಿ ಅವರಿಬ್ಬರನ್ನೂ ಏಕಕಾಲಕ್ಕೆ ವಿರೋಧಿಸಿ ಮಾತನಾಡಲು ಗುಂಡಿಗೆ ಬೇಕಾಗುತ್ತದೆ. ಅಂತಹ ಎದೆಗಾರಿಕೆಯನ್ನು 90ರ ಹರೆಯದ ಎಲ್‌ಬಿ ತೋರಿಸಿದ್ದಾರೆ. ಸೋಗಲಾಡಿತನದ ಸರಕಾರಿ ಚಿಂತಕರಿಗೆ, ಸಾಹಿತಿಗಳಿಗೆ, ಭಾಷಣಕ್ಕೆ ಕರೆಸಿಕೊಳ್ಳಲು ಕೈಮುಗಿದು [illegible], ಪ್ರಶಸ್ತಿ, ಬಹುಮಾನ, ಪ್ರಚಾರಗಳಿಗೆ ವಿಕೃತ ಪ್ರಯತ್ನ ಮಾಡುವ ಬಿಪಿಎಲ್ (ಬೌದ್ಧಿಕವಾಗಿ ಬಿಲೊ ಪಾವರ್ಟಿ ಲೈನ್)ಬುದ್ಧಿಜೀವಿಗಳಿಗೆ, ಹೇಗೆ ಮಾತನಾಡಿದರೆ ಮತ್ತೊಂದು ಅವಕಾಶ ಸಿಗುತ್ತದೆ ಎಂದು ಲೆಕ್ಕ ಹಾಕುವ ಬಿಸಿನೆಸ್ ಬುದ್ಧಿಜೀವಿಗಳಿಗೆ ಸ್ವಾಭಿಮಾನದ ಪಾಠ ಹೇಳಿದ್ದಾರೆ.

ಎಲ್‌ಬಿ ಅವರು 75ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾತ್ರ ತಮ್ಮ ಪಾತ್ರ ನಿರ್ವಹಿಸಲಿಲ್ಲ, ಅವರು ಕನ್ನಡದ ಎಲ್ಲಾ ಪ್ರಗತಿಪರ ಸಾಹಿತಿಗಳ, ಶೋಷಿತ ಜನರ ಪ್ರತಿನಿಧಿಯಾಗಿ ತಮ್ಮ ಕರ್ತವ್ಯ ನಿರ್ವಹಿಸಿದರು. ಎಲ್‌ಬಿ ಅವರ ಮಾತುಗಳು ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯವು ರೂಪುಗೊಳ್ಳಬೇಕಾದ ಸ್ವರೂಪದ ಮಾರ್ಗಸೂಚಿಯಾಗಿದ್ದವು. ಹಂಗಿನರಮನೆಯಿಂದ ಹೊರಬಂದಾಗ ಮಾತ್ರ ಸಾಹಿತ್ಯ ಜನಪರವಾಗಬಲ್ಲದು ಎಂಬುದು ಅವರ ಮಾತುಗಳ ಆಶಯವಾಗಿತ್ತು, ತಮ್ಮ ತಮ್ಮ ಕಾರ್ಯಕ್ಷೇತ್ರವನ್ನು ಮೀರಿದ ಹಸ್ತಕ್ಷೇಪದ ಬಗೆಗಿನ ತಮ್ಮ ತಕರಾರನ್ನು ಖಚಿತಪಡಿಸಿದರು. ವಿದ್ವಾಂಸನ ಪಾಂಡಿತ್ಯವಾಗಲಿ, ಅಧ್ಯಕ್ಷನೆಂಬ ಪ್ರತಿಷ್ಠೆಯಾಗಲಿ, ಎಲ್ಲರನ್ನು ಮೆಚ್ಚಿಸಬೇಕೆಂಬ ಭಾಷಾಚಾತುರ್ಯವಾಗಲಿ ಅವರ ಮಾತುಗಳಲ್ಲಿ ಇರಲಿಲ್ಲ. ಕಲ್ಮಷವಿಲ್ಲದ ಜನರ ನುಡಿಗಟ್ಟೇ ಅವರ ಭಾಷಣವಾಗಿತ್ತು, 'ಜನರು ಅಭಿವೃದ್ಧಿ ಹೊಂದಲು ಪ್ರೇರೇಪಿಸುವಂತಹದ್ದು ಮಾತ್ರ ಸಾಹಿತ್ಯ' ಎಂಬುದು ಅವರ ಹೊಸ ವ್ಯಾಖ್ಯಾನವಾಗಿತ್ತು, ಅದು ಕೇವಲ ಶಬ್ದಾಡಂಬರವಾಗಿರದೆ ಅದನ್ನು ಸಾಧ್ಯವಾಗಿಸಲು ಕೈಗೊಳ್ಳಬೇಕಾದ ಕಾರ್ಯಗಳನ್ನು ಸರ್ಕಾರ ಮತ್ತು ಸಾಹಿತಿಗಳಿಗೆ ಸೂಚಿಸಿದರು.

ಎಲ್‌ಬಿ ಅವರ ಅಧ್ಯಕ್ಷೀಯ ಭಾಷಣವು ಸಾಹಿತ್ಯ ಸಮ್ಮೇಳನಗಳ ಪರಂಪರೆಯಲ್ಲೇ ಒಂದು ಮೈಲಿಗಲ್ಲು, ಚಿತ್ರದುರ್ಗದ ಸಾಹಿತ್ಯ ಸಮ್ಮೇಳನವು ಈ ಕಾರಣಕ್ಕಾಗಿ ಚರಿತ್ರೆಯಲ್ಲಿ ಉಳಿಯುತ್ತದೆ.


■ ಡಾ.ಬಿ.ಎಂ.ಪುಟ್ಟಯ್ಯ



ನಿರ್ಗಮಿಸಿದ ಶಂಭು ಮತ್ತು....

ಪ್ರಶ್ನೆ ಹಾಗೇ ಉಳಿಯಿತು. ಯಕ್ಷಗಾನದ ಮುಂದಿನ ದಾರಿ ಏನು? ರಾಮನ ವೇಷ ಕಟ್ಟಿದ್ದ ಕೆರೆಮನೆ ಶಂಭು ಹೆಗಡೆಯವರಿಗೆ ಮೊನ್ನೆಯ ರಥಸಪ್ತಮಿಯ ಆ ರಾತ್ರಿ ಇಡಗುಂಜಿ ಕ್ಷೇತ್ರದಲ್ಲಿ, ಕ್ಷೇತ್ರದ ಆರಾಧ್ಯದೈವ ಗಣಪತಿಯ ಎದುರಲ್ಲಿ ವೇಷ ಬಿಚ್ಚಲಾಗಲಿಲ್ಲ ಪೂರ್ತಿಯಾಗಿ. ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ವೇಷ ಕಟ್ಟಲು ಶುರು ಮಾಡಿದ್ದು ಅದೇ ಜಾಗದಲ್ಲಿ, ಅದೇ ರಥಸಪ್ತಮಿಯ ದಿವಸ. ಆರಾಧ್ಯದೈವ ಆಗಲೂ ಇದ್ದ. ಈಗಲೂ ಇದ್ದಾನೆ. ಆದರೆ ನಡುವಿನ ಬದಲಾವಣೆಗಳು ಅಗಾಧ. ಕ್ಷೇತ್ರದ ಮಟ್ಟಿಗೂ ಅನೇಕ ಬದಲಾವಣೆಗಳು. ಶಂಭುಗಳ ಮಟ್ಟಿಗೆ ಕೂಡ.

ನಿಜ, ಕಳೆದ ಮೂರರಂದು ದಿವಸ ಉದಯಿಸಿದ ಸೂರ್ಯನನ್ನು ಶಂಭು ಅವರಿಗೆ ನೋಡಲಾಗಲಿಲ್ಲ. 'ಲವ ಕುಶರ ಕಾಳಗ' ಎಂಬ ಆಖ್ಯಾನದಲ್ಲಿ ರಾಮನಾಗಿ ವೇಷ ನಿರ್ವಹಿಸುತ್ತಿದ್ದ ಕೆರೆಮನೆ ಶಂಭು ಹೆಗಡೆಯವರಿಗೆ ಕಾಲರಾಯಯಮಪಾಶ ಕೊರಳಿಗೆ ಬಿಗಿದಿದ್ದ, ಇನ್ನೆರಡೇ ಪದಗಳು ಬಾಕಿ ಇದ್ದವು. ಅಲ್ಲಿಗೆ ಪ್ರಸಂಗ ಮುಕ್ತಾಯವಾಗಬೇಕು. ಅದರ ನಡುವೆಯೇ ಹೆಗಡೆಯವರ ಜೀವಧ್ವನಿಯಾದ ನೆಬ್ಬೂರು ನಾರಾಯಣ ಭಾಗವತರ ಬಳಿ "ಇಲ್ಕೊ, ನಾ ಬತ್ತೆ ನಡಗೆ...." ಎಂಬುದು ಕೊನೆಯ ಮಾತಾಗಿತ್ತು ಈ ಮೇರುನಟನದು. ಆಡಿದ ಕೊನೆಯ ಮಾತು ಹವ್ಯಕ ಕನ್ನಡದಲ್ಲಿ, "ಇಲ್ಕೊ..." ಎನ್ನುವ ಶಬ್ದ ಅದು ಹವ್ಯಕ ಭಾಷೆಯಲ್ಲಿ ನೋವಿನ ಉಮ್ಮಳವನ್ನೂ ಸೂಚಿಸುವ ಶಬ್ದ. ನಾ ಬತ್ತೆ ಎಂದರೆ ಅದು ನಿರ್ಗಮಿಸುತ್ತಿದ್ದೇನೆ ಎಂಬುದಕ್ಕೇ ಸೂಚನೆ. "ನಡಗೆ..." ಎಂಬ ಉದ್ಗಾರ ಹೇಳಲು ಅಸಾಧ್ಯವಾದ ರೀತಿಯಲ್ಲಿದ್ದೇನೆ ಎಂಬರ್ಥದಲ್ಲಿ, ತಾನು ಸಾವನ್ನು ತಪ್ಪಿಸಿಕೊಳ್ಳಲಾಗದಷ್ಟು ಅಸಹಾಯಕತೆಯಲ್ಲಿದ್ದೇನೆ ಎಂದು ಶಂಭು ತಿಳಿಯದೇ ಹೋಗಿರಬಹುದು. ಆದರೆ ಸಾವು ವೇಷಭೂಷಣಗಳಲ್ಲೇ ಅವರನ್ನು ಆಲಂಗಿಸಿತ್ತು. ಇಂಥದೇ ಸಾವು ಕೆಲ ವರ್ಷಗಳ ಹಿಂದೆ ಬಡಗು ತಿಟ್ಟಿನ ಪ್ರಸಿದ್ಧ ಪುರುಷ ವೇಷಧಾರಿ ಶಿರಿಯಾರ ಮಂಜುನಾಯ್ಕರನ್ನು ಆಲಂಗಿಸಿತ್ತು. ಅದ್ಭುತ ಕಂಠ ಚೇತನದ ಉಪ್ಪೂರು ನಾರಾಯಣ ಭಾಗವತರನ್ನೂ ಹೆಚ್ಚೂ ಕಡಿಮೆ ರಂಗದಲ್ಲೇ ಆಲಂಗಿಸಿತ್ತು ಅಂತಕನ ಅಸ್ತ್ರವಾದ ಹೃದಯಾಘಾತ. ಕೆದಕಿದರೆ ಇನ್ನೂ ಇಷ್ಟು ಈ ಯಾದಿ ಹಿಗ್ಗಿಕೊಳ್ಳಬಹುದು.


ಶಂಭು ಹೆಗಡೆ

ಶಂಭು ಕೇವಲ ಉತ್ತಮ ನಟನಾಗಿ ಕಾರ್ಯ ನಿರ್ವಹಿಸಲಿಲ್ಲ, ನಟನ ಅದ್ಭುತತೆ ರಂಗದ ಹೊರಕ್ಕೂ ಚಾಚಿಕೊಂಡು, ತಾನು ತಾನಾದ ರಂಗಕ್ಕೆ ತನ್ನಿಂದ ಇನ್ನೂ ಏನೋ ಒಂದನ್ನು ಪ್ರಾಮಾಣಿಕವಾಗಿ ನೀಡಿದಾಗ ಮಾತ್ರ. ಆಗ ಅದರ ರಮ್ಯತೆಯೇ ಬೇರೆ. ಶಂಭು ರಂಗದಲ್ಲಿ ಎಷ್ಟು ಅದ್ಭುತವೋ, ವೇಷ ಕಳಚಿದಾಗಲೂ ರಂಗಚಿಂತನೆ ನಡೆಸಿ ಯಕ್ಷರಂಗದ ಅಭ್ಯುದಯಕ್ಕೆ ಕಾರಣವಾಗಿ ಅದ್ಭುತ ಎಂದೆನಿಸಿದವರು. ಇದಕ್ಕೆ ಎರಡು ಮಾತಿಲ್ಲ. ಖ್ಯಾತ ನೃತ್ಯ ಕೋವಿದೆ ಶ್ರೀಮತಿ ಮಾಯಾರಾವ್ ಅವರ ಬಳಿ ಇನ್ನಷ್ಟು ವಿಸ್ತಾರಗಳನ್ನು ನೃತ್ಯದ ವಿಷಯದಲ್ಲಿ ಶಂಭು ಆವಾಹನೆಗಳಿಸಿಕೊಂಡರು. ಕೇವಲ ಕರಾವಳಿ ಹಾಗೂ ಮಲೆನಾಡಿನ ವಿಸ್ತಾರಕ್ಕೆ ಸೀಮಿತವಾದ ಯಕ್ಷಗಾನವನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿನ ಮಹತ್ವಾಕಾಂಕ್ಷೆಯೊಂದಿಗೆ, ಯಕ್ಷ ಕೋಟೆಯ ಗೋಡೆಗಳಿಗೆ ಕಿಟಕಿಯ ಬಾಗಿಲುಗಳು ಸದಾ ಮುಚ್ಚಿಕೊಂಡಿದ್ದ ವಿಷಯವನ್ನು ಬೇಗನೆ ಅರಿತು, ದೇಶದ ಇನ್ನಿತರ ಭಾಗಗಳಲ್ಲಿನ ನೃತ್ಯರಂಗದ ವಿಶೇಷಗಳನ್ನು ಅಧ್ಯಯನ ನಡೆಸಿದವರು. ಈ ಮುಚ್ಚಿದ ಕಿಟಕಿಗಳನ್ನು ತೆರೆಯಲು ಸಾಧ್ಯವಾದದ್ದು ಅವರ ಅಧ್ಯಯನ ಶೀಲತೆಯ ಫಲ. ಇದು ಅವರ ಸಂಸ್ಕಾರ. ಇಡಗುಂಜಿ ಮೇಳದ ಘಟಾನುಘಟಿಗಳ ನೈಪುಣ್ಯದ ಹಿಂದಿನ ಗುಟ್ಟು ಅಧ್ಯಯನಶೀಲತೆ. ಈ ನಿಟ್ಟಿನಲ್ಲಿ ಕೆರೆಮನೆ ಮಹಾಬಲ ಹೆಗಡೆಯವರನ್ನು ನಾವು ನೆನಪಿಸಿಕೊಳ್ಳಬಹುದು. ತನ್ನಿಂದಾಚೆಗೂ ಇರುವ ಜಗತ್ತಿನ ಬಗೆಗಿನ ಕುತೂಹಲ, ಅದರ ಬಗೆಗಿನ ಅಧ್ಯಯನ ಮಹಾಬಲರ ವಿಶಿಷ್ಟತೆ. ಈ ಹಿರಿಯ ಜೀವಕ್ಕೀಗ ವರ್ಷ 82. "ಆತ ನನ್ನ ತಮ್ಮ, ನನ್ನೆದುರು ಸಾಯಬಾರದಿತ್ತು" ಎಂದು ಮಹಾಬಲ ಹೆಗಡೆ, ಶಂಭು ನಿಧನರಾದಾಗ ಖೇದಿಸಿದರು.

ನಿಧನರಾದಾಗ ಅನೇಕಾನೇಕ ಮಾತುಗಳು ಓತಪ್ರೋತವಾಗಿ ಶ್ಲಾಘನೆಯಾಗಿ ಬಂದು ಕಿರಿಕಿರಿ ಎಬ್ಬಿಸುತ್ತಿರುತ್ತವೆ. ಶಂಭು ನಿಜಕ್ಕೂ ಒಂದು ವಿಶ್ವವಿದ್ಯಾಲಯದಂತೆ ಕೆಲಸ ಮಾಡಿದರು. ಇಷ್ಟು ಹೇಳುವುದು ಬಿಟ್ಟು ಅಕಾಡೆಮಿ ಅಧ್ಯಕ್ಷರಾದಾಗ ಹಾಗೆ ಮಾಡಿದರು, ಹೀಗೆ ಮಾಡಿದರು ಎಂಬುದು ಒಂದು ಅಪಲಾಪ. ಸರ್ಕಾರದ ಅನುದಾನದೊಂದಿಗೆ ಒಂದು ಅಕಾಡೆಮಿಯಲ್ಲಿ ಕೆಲಸಗಳನ್ನು ಮಾಡಬಹುದು ಎಂದರೆ ಅದು ಸುಳ್ಳು. ಮಾಡಬಹುದಾದ್ದನ್ನು ಪ್ರಾಮಾಣಿಕವಾಗಿ ಶಂಭು ಮಾಡಿದರು. ಅಕಾಡೆಮಿಗೆ ಅವರು ಒಪ್ಪಿದರು. ಈಗಲೂ ಅಷ್ಟೆ, ಕುಂಬ್ಳೆ ಸುಂದರರಾವ್, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಉತ್ತಮ ಅಭಿರುಚಿಯ ಜನರ ಹೇರಳವಾದ ಕ್ರಿಯಾಶೀಲತೆಯನ್ನು ಬಳಸಿಕೊಂಡು ಉತ್ತಮ ಕೆಲಸಗಳನ್ನು ಮಾಡಬಹುದಾಗಿದೆ.

ಉತ್ತರ ಕನ್ನಡದಲ್ಲಿ ಅಭಿರುಚಿಗಳಿವೆ. ಉತ್ತಮವಾಗೇ ಇವೆ. ಆದರೆ ಕ್ರಿಯಾಶೀಲತೆ? ಬೇಡ ಹೇಳದುಳಿದರೇ ಉತ್ತಮ ಇದನ್ನು. ಇದು ಉತ್ತರ ಕನ್ನಡವನ್ನು ಟೀಕಿಸುವ ದನಿಯಲ್ಲಿ ತೆಗೆದ ವ್ಯಂಗ್ಯದ ಮಾತಲ್ಲ, ಒಂದು ನೋವನ್ನು ಬಹಿರಂಗಕ್ಕೆ ತಂದ ವಿಧಾನ ಅಷ್ಟೆ.

ಶಂಭು ಹೆಗಡೆಯವರಿಗೆ ನೋವಿತ್ತು, ಸರ್ಕಾರದಿಂದ ಹಣವನ್ನು ತರುವುದು ಕಷ್ಟದ ಕೆಲಸ. ಶಂಭು ಅವರನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನ ತಮ್ಮಿಂದ ಏನಾಗಬೇಕು ಎಂದು ಕೇಳಿದರೋ ತಿಳಿಯದು. ಆದರೆ ಶಂಭು ಹೆಗಡೆಯವರ ಬಗ್ಗೆ ಟೀಕೆಯಂತೂ ಇದ್ದವು. ಜನರ ನಡುವೆ ಇದ್ದಾಗ ಎಲ್ಲರ ಗಮನ ಸೆಳೆಯುವ ತಾರೆಗೆ ಟೀಕೆ ಇದ್ದೇ ಇದೆ. ಪ್ರಸಿದ್ಧಿಯನ್ನು ಕಂಡು ಸಹಿಸದಾದವರ ಮಾತುಗಳು ಕ್ರೂರವಾಗಿರುತ್ತವೆ.

ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ವಿಷಯ ಬಂದಾಗ ಕೆಲವರು ಶಂಭು ಅವರನ್ನು ಖಳನಾಯಕನಂತೆ ಕಂಡರು. ಚಿಟ್ಟಾಣಿ ರಾಮಚಂದ್ರ ಹೆಗಡೆ ಯಕ್ಷರಂಗ ಕಂಡ ಅದ್ಭುತ ಪ್ರತಿಭೆ. ಅವರ ತಾರಾ ವರ್ಚಸ್ಸು ಒಂದರ್ಥದಲ್ಲಿ ಯಕ್ಷರಂಗದ ಗಲ್ಲಾಪೆಟ್ಟಿಗೆಯಿಂದಲೂ ಕೊಳ್ಳೆಹೊಡೆಯುವುದು ಸಾಧ್ಯ ಎಂಬುದನ್ನು ತೋರಿಸಿತು. ಶಂಭು ಹೆಗಡೆ ಯಕ್ಷರಂಗದ ಸಿದ್ಧಿಸಿರಿಯ ಅಲೌಕಿಕತೆಯನ್ನು ತೋರಿಸಿದರು. ಇಬ್ಬರೂ ಪ್ರತಿಭಾನ್ವಿತರೇ. ಧ್ರುವಗಳು ಬೇರೆ ಬೇರೆ, ಅಷ್ಟೆ.

ಶಂಭು ನಟನಾಗಿ ನಳದಮಯಂತಿಯ ಬಾಹುಕನಾಗಿ ರಂಗ ಪ್ರವೇಶಿಸಿದಾಗ ಆವರಿಸಿದ ಕುರೂಪಿತನದಲ್ಲಿ ನಳ ಮಹಾರಾಜನನ್ನು ಸಂಭ್ರಮಿಸುತ್ತಿದ್ದ ಬಗೆ, ನೋವನ್ನು ತುಡಿಯುತ್ತಿದ್ದ ಬಗೆ, ರಾವಣ ವಧೆಯಲ್ಲಿ ರಾವಣನು ಒಳಗುದಿಯ ತಲ್ಲಣದಿಂದ ಪರಮಪತಿವ್ರತೆಯಾದ ಮಂಡೋದರಿಯನ್ನು (ತನ್ನ ಹೆಂಡತಿ) ಸೀತೆಯ ಸಲುವಾಗಿನ ತನ್ನ ಅಧಃಪತನದ ಅಪರಾಧಿ ಪ್ರಜ್ಞೆಯಲ್ಲಿ ಎದುರಿಸುವ ವಿಹ್ವಲತೆ, ಪುತ್ರನಾದ ಇಂದ್ರಜಿತುವಿನ ವಧೆಯಾಯಿತು ಎಂಬಾಗ ಪುತ್ರಶೋಕದಿಂದಾಗಿ ಉದಯಿಸುವ ಶೋಕ, ಎಲ್ಲ ಕೇಡಿಗೂ ಕಾರಣಳೇ ಈ ಸೀತೆ ಎಂದು ಉದ್ಭವಿಸುವ ಸೀತೆಯ ಬಗೆಗಿನ ಕ್ರೋಧಗಳು ಶೋಕ ಹಾಗೂ ಕ್ರೋಧದ ಮಿಳಿತದಲ್ಲಿ ಕೆರಳುವ, ಬಿಕ್ಕಳಿಸುವ ಅವರ ಕಣ್ಣುಗಳ ಚಲನವಲನಗಳನ್ನು ಶಬ್ದಗಳಿಂದ ವರ್ಣಿಸಲಸದಳವಾಗಿರುತ್ತಿತ್ತು, ರಾಮ ನಿರ್ಯಾಣದ ರಾಮನಾಗಿ ಲಕ್ಷ್ಮಣನನ್ನು ಕಳೆದುಕೊಳ್ಳುವ ಪರಿಸ್ಥಿತಿ ಎದುರಾದಾಗ ತೋರುತ್ತಿದ್ದ ಉದ್ವೇಗ, ಉಮ್ಮಳಗಳು ಅವರ ಅಭಿನಯ ಪ್ರಬುದ್ಧತೆಯ ಪರಾಕಾಷ್ಠೆಯಾಗಿರುತ್ತಿತ್ತು.


ಸಾಮಾನ್ಯವಾಗಿ ಲಂಕೇಶ್ ನೇರವಾಗಿ ಯಾರನ್ನೂ ಹೊಗಳಲಾರರು. 1996 ರ ವರ್ಷಾಂತ್ಯದ ಕೂಟದಲ್ಲಿ ಅವರ ತೋಟದಲ್ಲಿ ಶಂಭು ಹೆಗಡೆ ಅಭಿನಯಿಸಿದ ರಾವಣ (ಲಂಕೇಶ್)ನನ್ನು ಕಂಡು ದಂಗಾದರು. ಯಕ್ಷ ಧರ್ಮದ ಸಿದ್ಧಿ ಹೀಗೆ ಇಷ್ಟೊಂದು ಅದ್ಭುತವೆಂದು ಇಂದು ತಿಳಿದೆ ಎಂದರು.

ಲಂಕೇಶ್ ಒಬ್ಬರೇ ಅಲ್ಲ, ನಾಡಿನ ತುಂಬ ಶಂಭುವಿಗೆ ಲಕ್ಷಾಂತರ ಮಂದಿ ಅಭಿಮಾನಿಗಳು. ಲಂಕೇಶ್ ಮೊದಲು ಹೋದರು. ಈಗ ಶಂಭು ನಿರ್ಗಮಿಸಿದರು. ಕಾಲ ಕೊನೆಗೂ ಒಬ್ಬ ಭಕ್ಷಕ.

■ ಮಹಾಬಲಮೂರ್ತಿ ಕೊಡ್ಲೆಕೆರೆ

...ಡಲು ...ನ್ನಿ ...ವಿ ಚೀಟಿ


ಕಡಿದಾಳು ಶಾಮಣ್ಣ



ಅಕ್ಷರ ರೂಪ: ಅಕ್ಷತಾ ಕೆ.

...ಫಿಯನ್ನು ಕಾಫಿ ಬೋರ್ಡ್‌ಗೆ ಹಾಕಬೇಕಿತ್ತು. ...ೀಟ್ ಬಂದ್ರು, ಬೇರೆ ಕಡೆ ಮಾರಾಟ ಮಾಡೋ ...ಲ್ಲ, ಕಾಫಿ ಬೋರ್ಡ್‌ನ ಕಾನೂನುಗಳೆಲ್ಲ ದೊಡ್ಡ ...ರಿಗೆ ಅನುಕೂಲಕರವಾಗಿದ್ದವೇ ವಿನಃ ಸಣ್ಣ ...ವಿಗೆ ಬೋರ್ಡ್‌ನಿಂದ ಯಾವುದೇ ಸಾಲ, ಸಹಾಯ ...ದು ಸಿಗ್ತಿರಲಿಲ್ಲ. ಬೋರ್ಡ್‌ನಲ್ಲಿದ್ದವರೆಲ್ಲ ದೊಡ್ಡ ...ನಾಗಿದ್ದರಿಂದ ಅವರಿಗೆ ಬೇಕಾದ ಹಾಗೆ ಕಾನೂನು ...ಾಳ್ಳೋರು. ತೇಜಸ್ವಿ ಸಣ್ಣ ಬೆಳೆಗಾರರಾಗಿದ್ದು ಕಾಫಿ ...ನ ಆಟಾಟೋಪಗಳನ್ನು ಅನುಭವಿಸಿ ಬೇಸತ್ತಿದ್ದರು. ...ಕಿಶನ್ ಪಟ್ನಾಯಕ್ ಬಳಿ ಇದನ್ನು ಹೇಳಿಕೊಂಡಾಗ ...ಾದ್ದೋರು "ಇಂಥ ಸಮಸ್ಯೆಗಳು ಕೇರಳ, ಆಂಧ್ರ ...ದೆಯೂ ಇದೆ. ಆದ್ದರಿಂದ ದಕ್ಷಿಣ ಭಾರತ ಸಣ್ಣ ...ರ ಒಕ್ಕೂಟವೊಂದನ್ನು ಕಟ್ಟಿಕೊಂಡು ಈ ಸಮಸ್ಯೆಗಳ ...ಹೋರಾಡಬಹುದು'' ಅಂಥ ಸಲಹೆ ಕೊಟ್ಟರು. ...ಸಮಾಜವಾದಿಗಳೆಲ್ಲ ಸೇರಿದ ಒಂದು ಸಭೆಯಲ್ಲಿ

ಕಾರಣಗಳು ಬೇಕಿಲ್ಲ ಅಂತ ಸರ್ಕಾರ ಹೇಳ್ತಿತ್ತು. ತಹಶೀಲ್ದಾರ್ ಲೆವಿ ಚೀಟಿ ಕಳಿಸಿಬಿಡೋರು. ಕರೆಂಟ್ ಬಿಲ್ ಕೊಡ್ತಾರಲ್ಲ ಆ ತರ. ಅವರು ಬರೆದಷ್ಟು ಲೆವಿಯನ್ನು ಅವರು ಸೂಚಿಸಿದ ಸ್ಥಳಕ್ಕೆ ಒಯ್ದು ಕೊಟ್ಟ ನಂತರವೇ ರೈತರಿಗೆ ತಮ್ಮ ಧವಸವನ್ನು ಮಾರಾಟ ಮಾಡೋ ಭಾಗ್ಯ ದೊರಕೋದು. ಹೆಚ್ಚಿನ ರೈತರು ಮಿಲ್ಲಿಗೆ ಮಾರಾಟ ಮಾಡೋದರಿಂದ ಲೆವಿಯನ್ನು ಮಿಲ್ಲಿನಲ್ಲೆ ವಸೂಲಿ ಮಾಡ್ತಿದ್ದರು. ಸುಮಾರು ನಾಲ್ಕನೇ ಒಂದು ಭಾಗ ಲೆವಿ ಕೊಡಬೇಕಿತ್ತು ಬೆಳೆಯ ರೂಪದಲ್ಲಿ. ಪುಕ್ಸಟ್ಟೆ ಕೊಡಬೇಕಾಗಿರಲಿಲ್ಲ. ಆದರೆ ಸರ್ಕಾರ ನಿಗದಿ ಪಡಿಸಿದ ಬೆಲೆಗೆ ಕೊಡಬೇಕಿತ್ತು. ಬೆಳೆ ಬೆಳೀಲಿಲ್ಲ ಅಂತಾದ್ರೆ ಕೊಂಡು ಕೊಡಬೇಕಿತ್ತು. ಲೆವಿ ಅನ್ನೋದು ಕೂಡ ಗೇಣಿ ಪದ್ಧತಿಯ ಇನ್ನೊಂದು ಮುಖವೇ ಅನ್ನೋದರಲ್ಲಿ ಅನುಮಾನ ಇರಲಿಲ್ಲ.



ವೊದಲಿಗೆ ನಾವು ಮೂಡಿಗೆರೆ ಹತ್ತಿರದ ಗೋಣಿಬೀಡಿನಲ್ಲಿ ಲೆವಿಗೇಟ್ ಮುರಿಯೋ ಚಳವಳಿ ಹಮ್ಮಿಕೊಂಡ್ವಿ. ಸಣ್ಣ ಕಾಫಿ ಬೆಳೆಗಾರರು ಕಾಫಿ ಬೋರ್ಡ್ ನಿಂದಲೇ ತೊಂದರೆ ಎದುರಿಸುವುದರ ಜೊತೆಗೆ ಸರ್ಕಾರಕ್ಕೆ ಲೆವಿ ಬೇರೆ ಕೊಡಬೇಕಿತ್ತು. ಗೋಣಿಬೀಡಿನಲ್ಲಿ ಚಳವಳಿ ಹಮ್ಮಿಕೊಂಡು ರೈತರನ್ನೆಲ್ಲ ಸಂಘಟಿಸೋ ಸಂದರ್ಭದಲ್ಲಿ ದೊಡ್ಡ ಬೆಳೆಗಾರರನ್ನ ಸಂಪರ್ಕಿಸಿ "ನಾವೆಲ್ಲ ರೈತರು ಸೇರಿಕೊಂಡು ಹೋರಾಡಬೇಕು'' ಅಂತ ಕರೆದರೆ "ರೈತರಾ? ಇಲ್ಲಿಂದ ಒಂದಿಪ್ಪತ್ತು ಕಿ.ಮೀ ಹೋಗಿ, ಅಲ್ಲಿ ಸ್ವಲ್ಪ ರೈತರು ಸಿಗ್ತಾರೆ. ನಾವ್ಯಾರು ರೈತರಲ್ಲ'' ಅನ್ನೋರು. ಅವರಿಗೆ ತಾವು ಎಸ್ಟೇಟ್ ಓನರ್ಸ್ ಅನ್ನೋದು ತಲೆಗೇರಿತ್ತು. ನಾವು ಹೋರಾಟಕ್ಕೆ ಕರೆದರೆ ನಮ್ಮನ್ನೇ ಗೇಲಿ ಮಾಡೋರು. ಆದರೆ ಕಾಲ ಹೇಗೆ ಬದಲಾಗುತ್ತೆ ನೋಡಿ, ಈಗ ಅವರಿಗೆಲ್ಲ ರೈತಸಂಘ ಬೇಕು.

ಲೆವಿ ವ್ಯವಸ್ಥೆ ಕಾನೂನಿಗೆ ವಿರುದ್ಧ. ನಮ್ಮ ಹೋರಾಟ ಕಾನೂನುಬದ್ಧ ಹೋರಾಟವಾದ್ದರಿಂದ ಹೆದರೋ ಅವಶ್ಯಕತೆ ಇಲ್ಲ ಎಂದು ಜನರಿಗೆ ಒತ್ತಿ ಹೇಳತೊಡಗಿದ್ವಿ. ಹೊಳೆಹೊನ್ನೂರು ಸಮೀಪದ ಅರಹತೊಳಲು ಕೈಮರದಲ್ಲಿ ಲೆವಿ ಗೇಟನ್ನು ನೂರಾರು ಜನ ಸೇರಿ ಮುರಿದು ಹಾಕಿದ್ವಿ. ಇದು ಸುತ್ತಮುತ್ತಲ ಗ್ರಾಮದಲ್ಲಿ ಚೆನ್ನಾಗಿ ಪ್ರಚಾರ ಪಡೆದುಕೊಂಡಿತು. ರೈತರು ಲೆವಿ ಕೊಡಲು ನಿರಾಕರಿಸ ತೊಡಗಿದರು. ಇದರ ಬಿಸಿ ಇರುವಾಗಲೇ ಹೊಳೆ ಹೊನ್ನೂರಿನ ರಬ್ಬಾನಿ ರೈಸ್‌ಮಿಲ್ ಆವರಣದಲ್ಲಿ ಲೆವಿ ಚೀಟಿ ಸುಡುವ ಕಾರ್ಯಕ್ರಮ ಇಟ್ಟುಕೊಂಡ್ವಿ. ರಬ್ಬಾನಿ ರೈಸ್‌ಮಿಲ್‌ನ ಓನರ್ ಸಾಬರು. "ಹೀಗೆ ಒಂದು ಹೋರಾಟ ಹಮ್ಮಿಕೊಂಡಿದೀವಿ. ನಿಮ್ಮ ಮಿಲ್ ಎದುರಿಗೆ ಮಾಡ್ತೀವಿ'' ಎಂದಾಗ ಧಾರಾಳವಾಗಿ ಎಂದು ಒಪ್ಪಿಗೆ ಕೊಟ್ಟು ಬಿಟ್ಟರು. ಆದರೆ ಲೆವಿ ವಿರುದ್ಧ ಹೀಗೆ ಹೋರಾಟ ನಡೀತದೆ ಅನ್ನೋ ಸೂಚನೆ ಅವರಿಗಿರಲಿಲ್ಲ. ಗೊತ್ತಿದ್ದರೆ ಕೊಡ್ತಿರಲಿಲ್ಲ ವೇನೋ ಏಕೆಂದರೆ ಲೆವಿ ಬಂದು ಬೀಳ್ತಿದ್ದುದು ಅವರ ಮಿಲ್‌ಗೆ. ಆ ದಿನ ನಂಜುಂಡಸ್ವಾಮಿ, ತೇಜಸ್ವಿ ಬಂದಿದ್ದರು. ಜೊತೆಗೆ ಸುತ್ತಮುತ್ತಲ ಗ್ರಾಮದ ಎಲ್ಲ ರೈತರು. ಹೊಳೆಹೊನ್ನೂರಿನ ಸಂತೆ ಬೇರೆ ಅದೇ ದಿನವಿತ್ತು. ಸಂತೆಗೆ ಬಂದವರು ನಮ್ಮೊಡನೆ ಸೇರಿದರು. ಒಟ್ಟು ಐನೂರು, ಆರನೂರು ಲೆವಿ ಚೀಟಿಗಳು ಬೆಂಕಿಗೆ ಆಹುತಿಯಾದವು. ಅದೇ ದಿನ ಪಕ್ಕದ ಅಶೋಕನಗರದಲ್ಲಿ ಜಮೀನು ಮಾಡಿಕೊಂಡಿದ್ದ ಎನ್.ಡಿ.ಸುಂದರೇಶ್‌ರನ್ನು ಈ ಹೋರಾಟಕ್ಕೆ ಕರೆತಂದ್ವಿ. ಒತ್ತಾಯಪೂರ್ವಕವಾಗೇ ಕರೆತಂದ್ವಿ ಅಂದರೂ ಸರಿಯೇ. ಸುಂದರೇಶ್ ಪಾಲ್ಗೊಂಡ ಮೊದಲ ರೈತ ಹೋರಾಟವಿದು. ರಬ್ಬಾನಿ ರೈಸ್ ಮಿಲ್‌ನ ಎದುರು ನಡೆದ ಈ ಲೆವಿ ಚೀಟಿ ಸುಡುವ ಕಾರ್ಯಕ್ರಮ ನಿಜವಾದ ಪ್ರತಿಭಟನೆಯಾಗಿ ಮಾರ್ಪಟ್ಟು ಹೊಳೆ ಹೊನ್ನೂರು ಭಾಗದಲ್ಲಿ ಲೆವಿ ವಸೂಲಿಗೆ ತೀವ್ರ ಪ್ರತಿರೋಧ ವ್ಯಕ್ತವಾಯಿತು. ಲೆವಿ ವಸೂಲಿ ಮಾಡಲು ಅಧಿಕಾರಿಗಳು ಹೆದರತೊಡಗಿದರು.

ಇವರ ನಂತರ ನಾನು ತೀರ್ಥಹಳ್ಳಿ ಭಾಗದಲ್ಲಿ ಲೆವಿ ಹೋರಾಟ ನಡೆಸಲು ನಿರ್ಧರಿಸಿದೆ. ತೀರ್ಥಹಳ್ಳಿಯಲ್ಲಿ ಜನಪರ ಹೋರಾಟಕ್ಕೆ ಜನರನ್ನು ಸಂಘಟಿಸುವುದು ಸಮಸ್ಯೆಯೇ ಅಲ್ಲ. ಲೆವಿ ಚಳವಳಿಗೂ ಕೋಡ್ಲು ವೆಂಕಟೇಶ, ಹೊರಬೈಲು ರಾಮಕೃಷ್ಣ ಹಣಗೆರೆ ರಾಮಪ್ಪ ಬೆಜ್ಜವಳ್ಳಿ ದೇವರಾಜ, ತುಂಬೇಕೊಡಿಗೆ ಜಗನ್ನಾಥ, ದೇವಂಗಿ ಸುಭಾಷ್ ಮತ್ತಿತರ ಯುವಕರ ಪಡೆ ಸಜ್ಜಾಯಿತು. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬೆಳೆದ ಭತ್ತಕ್ಕೆ ಸೌತ್ ಕೆನರಾ ಮಾರುಕಟ್ಟೆ. ಆಗುಂಬೆ ಮೂಲಕ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಬೇಕಿದ್ದರಿಂದ ಆಗುಂಬೆಯಲ್ಲಿ ಲೆವಿ ಗೇಟ್ ಇತ್ತು. ಆ ಲೆವಿ ಗೇಟನ್ನು ಮುರಿದು ದಕ್ಷಿಣ ಕನ್ನಡ ಜಿಲ್ಲೆಗೆ ಎತ್ತಿನಗಾಡಿಯಲ್ಲಿ ಭತ್ತ ತುಂಬಿಕೊಂಡು ಹೋಗಿ ಮಾರಾಟ ಮಾಡಿಕೊಂಡು ಬರಲು ನಿರ್ಧರಿಸಿದ್ವಿ. ಆದರೆ ಘಾಟಿಯ ಇಳಿಜಾರು ಪ್ರದೇಶದಲ್ಲಿ ಗಾಡಿಯ ಕಬ್ಬಿಣದ ಹಳಿ ಸ್ವಲ್ಪ ಹೊತ್ತು ಬ್ರೇಕ್ ಹಾಕಕ್ಕೂ ಬಿಸಿಯೇರಿ ಕಳಚಿಹೋಗುವ ಅಪಾಯವಿದೆ. ಅದೂ ಒಟ್ಟಿಗೆ ಐವತ್ತು, ಅರವತ್ತು ಗಾಡಿಗಳು ದೌಡಾಯಿಸುವಾಗಂತೂ ಇಂತಹ ಅಪಾಯ ತುಂಬಾ ಹೆಚ್ಚು. ಆದ್ದರಿಂದ ಸಾಮಾನ್ಯದ, ಹಳೆಯದಾದ ಎತ್ತಿನ ಗಾಡಿ ಇರೋರೆಲ್ಲ ಬರಕಾಗಲ್ಲ ಎಂದು ಹೇಳತೊಡಗಿದರು. ಗಾಡಿಗಳನ್ನು ಒಟ್ಟು ಹಾಕುವುದೇ ದೊಡ್ಡ ತಲೆ ನೋವಾಯಿತು. ನಿಧಾನಕ್ಕೆ ಹೋಗೋಣ. ನಾವೇನು ಕಾನೂನಿಗೆ ವಿರುದ್ಧವಾದದು ಮಾಡ್ತಾ ಇಲ್ಲ, ಹೆದರೋ ಅಗತ್ಯ ಇಲ್ಲ ಅಂತ ಪದೇ ಪದೇ ಹೇಳಬೇಕಾಯಿತು. ಅಂತೂ ಪ್ರತಿಭಟನೆ ದಿನ

ಇಪ್ಪತ್ತೈದು ಮೂವತ್ತು ಗಾಡಿಗಳು ಆಗುಂಬೆಯಲ್ಲಿ ಸೇರಿದವು. ನಮ್ಮೀ ಹೋರಾಟಕ್ಕೆ ಆಗುಂಬೆಯಲ್ಲಿ ಇಷ್ಟು ಬೆಂಬಲ ಸಿಗಲು ಇನ್ನೊಂದು ಅಂಶ ಕಾರಣವಾಯಿತು. ಆಗುಂಬೆ ದೇವಸ್ಥಾನದ ಧರ್ಮದರ್ಶಿ ನಾಬಳದ ನಾಗಪ್ಪ ಹೆಗ್ಡೆಯವರು. ಅವರನ್ನ ಅಜ್ಜಯ್ಯ ಅಂತ ಕರೀತಿದ್ವಿ. ನನ್ನ ತಂಗಿ ಲಕ್ಷ್ಮೀದೇವಿಯ ಮಾವ. ಅವರು ನಮ್ಮ ಈ ಹೋರಾಟಕ್ಕೆ ತುಂಬಾ ಬೆಂಬಲ ಕೊಟ್ಟರು. ಅವರ ಬಗ್ಗೆ ಸುತ್ತ ಮುತ್ತಲವರಿಗೆ ತುಂಬಾ ಗೌರವ ಇತ್ತು. ಅವರು ಹೇಳಿದ್ರು ಅಂದ್ರೆ ಸೈ ಅಲ್ಲಿನ ಜನ ಏನನ್ನಾದರೂ ಮಾಡ್ತಿದ್ದರು.

ಹೆಬ್ರಿಯ ವ್ಯಾಪಾರಿಗಳ ಜೊತೆ ಮೊದಲೇ ಒಪ್ಪಂದ ಮಾಡಿಕೊಂಡು ಬಿಟ್ಟಿದ್ವಿ. ಇಂತ ದಿನ ಲೆವಿ ಗೇಟ್ ಮುರಿದು ಇಷ್ಟು ಭತ್ತ ತರ್ತೀವಿ, ನೀವು ಕೊಂಡು ಕೊಳ್ಳಬೇಕು ಎಂದು. ಲೆವಿ ವಿಚಾರ ನಿಮಗೆ ಬಿಟ್ಟಿದ್ದು ನಾವು ಇರೋದಕ್ಕಿಂತ ಹೆಚ್ಚಿನ ಬೆಲೆಗೆ ಭತ್ತ ಕೊಂಡು ಕೊಳ್ತೀವಿ ಅಂತ ಅವರು ಭರವಸೆ ಕೊಟ್ಟರು. ಮೊದಲೇ ನಮ್ಮ ಹೋರಾಟದ ಸುಳಿವು ಸಿಕ್ಕಿದ್ದರಿಂದ ಗಾಡಿ ಕಟ್ಟಿಕೊಂಡು ರೈತರೆಲ್ಲ ಬರುವ ಮೊದಲೇ ಆಗಿನ ಅಸಿಸ್ಟಂಟ್ ಕಮೀಷನರ್ ಅನಿತಾ ಕೌಲ್ ಪೊಲೀಸ್ ವ್ಯಾನ್‌ನೊಂದಿಗೆ ಪಹರೆ ನಿಂತಿದ್ದರು. ನಾವೆಲ್ಲ ಗಾಡಿ ಕಟ್ಟಿಕೊಂಡು ಹೋದಾಗ "ನೀವು ಮಾಡ್ತಾ ಇರೋದು ಕಾನೂನಿಗೆ ವಿರುದ್ಧ ನಿಮಗೆ ಲೆವಿ ಕಟ್ಟದೆ ಹೋಗೋಕೆ ಅವಕಾಶ ಕೊಡೋದಿಲ್ಲ'' ಎಂದು ತಡೆದರು. ನಾವು ಮಾಡ್ತಾ ಇರೋದು ಕಾನೂನಿಗೆ ವಿರುದ್ಧ ಅಲ್ವೆ ಅಲ್ಲ ನೋಡಿ ಸಂವಿಧಾನದಲ್ಲೆ ನಮಗೆ ಆ ಹಕ್ಕನ್ನು ಕೊಟ್ಟಿದ್ದಾರೆ ಎಂದು ನಾವು ವಾದಕ್ಕೆ ಬಿದ್ದೆವು. ನಾವೊಂದು ಮೂರ್‍ನಾಲ್ಕು ಜನ ವಾದಕ್ಕೆ ನಿಂತಾಗ ಕೋಡ್ಲು ವೆಂಕಟೇಶ್ ಇದ್ದವರು ಲೆವಿ ಗೇಟ್ ಮುರಿದು ಗಾಡಿಗಳಿಗೆ ಮುಂದುವರೆಯಲು ಸೂಚನೆ ಕೊಟ್ಟರು. ಒಮ್ಮೆಲೆ ಗಾಡಿಗಳೆಲ್ಲ ಲೆವಿಗೇಟಿನ ಸಂಕೋಲೆಯಿಂದ ಪಾರಾಗಿ ಹೆಬ್ರಿಯತ್ತ ಧಾವಿಸತೊಡಗಿದವು. ಪೊಲೀಸರು ತಬ್ಬಿಬ್ಬಾಗಿ ನಿಂತಿದ್ದರು. ಅನಿತಾ ಕೌಲ್ ಸಹ ಗಾಡಿಗಳನ್ನು ತಡೆಯಲು ಸೂಚನೆ ನೀಡಲಿಲ್ಲ, ಘಟನೆಯ ಬಗ್ಗೆ ಬರೆದುಕೊಡಲು ಹೇಳಿದರು.





...ಟದ ಡ್ರಾಫ್ಟನ್ನು ಅವರೇ ಬರೆದು ಕೊಟ್ಟರು. ...ಡಸ್ವಾಮಿ ಒಕ್ಕೂಟದ ಅಧ್ಯಕ್ಷರಾದರು. ತೇಜಸ್ವಿ ...ಕಕ್ಷ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ...ತು. ನನ್ನದು ಶಿವಮೊಗ್ಗ ಘಟಕದ ಉಸ್ತುವಾರಿ. ...ಗಿನ ಯಾವುದೇ ಸಂಚಾರಿ ಸೌಲಭ್ಯ ಮೊಬೈಲ್ ...ಂದು 1970 ರ ದಶಕದಲ್ಲಿ ಇರಲೇ ಇಲ್ಲ ...ನಾವೆಲ್ಲ ತೋಟ, ಗದ್ದೆ ಮಾಡ್ಕೊಂಡು ಜೀವನದಲ್ಲಿ ...ತಾನೇ ನೆಲೆಗೊಳ್ಳಲು ಹೋರಾಟ ನಡೆಸಿದ್ವಿ. ಆದರೆ ... ಮಧ್ಯೆಯೂ ಯುವ ಸಮಾಜವಾದಿಗಳ ನಮ್ಮ ...ನ ಸದಸ್ಯರು ಆಗಾಗ ಒಂದಲ್ಲ ಒಂದು ಕಡೆ ...ತ್ತಾ ಸಂಘಟಿತರಾಗುತ್ತಲೇ ಇರ್ತಿದ್ವಿ. ಆದ್ದರಿಂದಲೇ ...ಲ್ಲ ಹೋರಾಟ ಮಾಡಲಿಕ್ಕಾಯಿತು ಅಂತ ...ನಿಸೋದು. ಸಣ್ಣ ಬೆಳೆಗಾರರ ಒಕ್ಕೂಟದಲ್ಲಿದ್ದ ...ವರು ಸಮಾಜವಾದಿ ಯುವಜನ ಸಭಾದ ಸದಸ್ಯರೇ. ...ಂದು ಸಂಘಟಿತ ಗುಂಪೇ ಇದ್ದಿದ್ದರಿಂದ ಕಿಶನ್ ... ಹೋರಾಟಗಳನ್ನು ಕಟ್ಟಲಿಕ್ಕೆ ಕರ್ನಾಟಕವೇ ಸರಿ ... ಭಾವಿಸುತ್ತಿದ್ದರು. ಮೂಲತಃ ಒರಿಸ್ಸಾದವರಾದ ... ಹೋರಾಟದ ವಿಷಯದಲ್ಲಿ ಕರ್ನಾಟಕವನ್ನೇ ...ದಕ್ಕೆ ಇದೇ ಕಾರಣ.

...ಕ್ಷಿಣ ಭಾರತ ಸಣ್ಣ ಬೆಳೆಗಾರರ ಒಕ್ಕೂಟದಿಂದ ... ಮೊದಲನೆಯದಾಗಿ ನಾವು ಲೆವಿ ಚಳವಳಿಯನ್ನು ...ಕೊಂಡ್ವಿ. ಆಗ ಹೆಚ್ಚಿನ ರೈತರನ್ನು ಲೆವಿ ಸಮಸ್ಯೆ ... ಇತ್ತು. ಬೆಳೆ ಕಟಾವಾಗೋ ಸಂದರ್ಭದಲ್ಲಿ ಎಲ್ಲ ... ಲೆವಿ ಗೇಟ್ ಹಾಕಿಬಿಡೋರು. ಅಲ್ಲಿ ಒಬ್ಬ ...ಯುಗಾರನ್ನ ನೇಮಿಸೋರು. ಅವನಿಗೆ ಲೆವಿ ಚೀಟಿ ...ಸೇ ದವಸ ಧಾನ್ಯ ಏನು ಬೆಳೆದಿದಿವೋ ಅದು ...ಟಕ್ಕೆ ಹೋಗಬೇಕಿತ್ತು. ಬರಗಾಲ ಬತ್ತು, ಬೆಳೆ ...ಾಗಿ ಬರಲಿಲ್ಲ, ಮಳೆಗೆ ಸಿಕ್ಕಿ ಬೆಳೆ ಹಾಳಾಯ್ತು ...ರೆ ಸರ್ಕಾರ ಕೇಳ್ತಿರಲಿಲ್ಲ. ಎಕರೆಗಿಷ್ಟು ಅಂತ ಲೆವಿ ... ಸಾಲ ಮಾಡಿಯಾದರೂ ಲೆವಿ ಕಟ್ಟು ಬೇರೆ

ಆಮತ್ತು ಸಣ್ಣ ಬೆಳೆಗಾರರನ್ನು ಸಂಘಟಿಸಿ ಗೋಣಿಬೀಡಿನಲ್ಲಿ ಲೆವಿಗೇಟ್ ಮುರಿದುಹಾಕಿದ್ವಿ. ಆದರೆ ಸರ್ಕಾರ, ಪೊಲೀಸು ಯಾರೂ ನಮ್ಮ ಹೋರಾಟಕ್ಕೆ ತಲೆ ಕೆಡಿಸಿಕೊಂಡಂತೆ ಕಾಣಲಿಲ್ಲ. ಹೋರಾಟದ ಕಾರ್ಯಕ್ಷೇತ್ರವನ್ನು ಶಿವಮೊಗ್ಗ ಜಿಲ್ಲೆಗೆ ಅದರಲ್ಲೂ ಹೊಳೆಹೊನ್ನೂರು ಭಾಗಕ್ಕೆ ವರ್ಗಾಯಿಸಿಕೊಂಡ್ವಿ. ಯಾಕೆಂದರೆ ಇಲ್ಲಿನ ರೈತರಿಗೆ ಎರಡೆರಡು ಕಷ್ಟಗಳಿದ್ದವು. ಲೆವಿ ಕೊಡುವುದರ ಜೊತೆಗೆ ಇದು ನೀರಾವರಿ ಪ್ರದೇಶವಾದ್ದರಿಂದ ನೀರಾವರಿ ಯೋಜನೆಗಳಿಗೆ ತಗುಲಿದ ವೆಚ್ಚವನ್ನು ಬೆಟರ್‌ಮೆಂಟ್ ಚಾರ್ಜ್ ಎನ್ನುವ ಹೆಸರಲ್ಲಿ ರೈತರಿಂದ ವಸೂಲು ಮಾಡುತಿದ್ದರು. ಹೀಗೆ ಲೆವಿ ಮತ್ತು ಬೆಟರ್‌ಮೆಂಟ್ ಚಾರ್ಜ ಎರಡರ ನಡುವೆ ಇಲ್ಲಿನ ರೈತರು ನುಗ್ಗಾಗಿ ಬಿಟ್ಟಿದ್ದರು. ಆದರೆ ಸಮಸ್ಯೆಗೆ ಪರಿಹಾರ ಮಾತ್ರ ಹುಡುಕಲಾಗಿರಲಿಲ್ಲ. ಯಾವಾಗ ನಾವು ಸಮಾಜವಾದಿಗಳು ಸಾಗರ, ತೀರ್ಥಹಳ್ಳಿ, ಹೊಸನಗರದ ಕಡೆಯ ಜಮೀನು ಕೊಂಡು ಇಲ್ಲಿ ನೆಲೆಸೋದಕ್ಕೆ ಬಂದ್ವೋ ಆಗ ನಿಧಾನಕ್ಕೆ ಅಲ್ಲಿನ ಚಳವಳಿ ಕಾವನ್ನು ಇಲ್ಲೂ ಬಿತ್ತಲಿಕ್ಕೆ ಶುರುಮಾಡಿದ್ವಿ. ಈ ಭಾಗದ ಜನರಿಗೆ ಚಳವಳಿ ಎಲ್ಲ ಗೊತ್ತಿರಲಿಲ್ಲ ಆದರೆ ಹೊಡೆದಾಟ ಬಡಿದಾಟದಲ್ಲೆಲ್ಲ ಎತ್ತಿದ ಕೈ. ತುಂಬಾ ಧೈರ್ಯಸ್ಥರು, ಪ್ರಾಣ ಕೊಟ್ಟು ಹೋರಾಟ ಮಾಡೋವಂತವರು. ನಾವು ಚಳವಳಿ ಬಗ್ಗೆ ಇಲ್ಲಿಯವರಿಗೆ ಹೇಳಿಕೊಟ್ವಿ. ಅವರಲ್ಲಿ ಸ್ವಭಾವತಃ ಇದ್ದ ಧೈರ್ಯ ಮತ್ತು ಬದ್ಧತೆ ಹೋರಾಟದ ಯಶಸ್ಸಿಗೆ ಕಾರಣವಾಯಿತು.

ಹನುಮಂತಾಪುರದಲ್ಲಿ ರುದ್ರಪ್ಪ ಅನ್ನೋ ಯುವಕನಿದ್ದ. ಅವನನ್ನು ನಮ್ಮ ಘಟಕದ ಕಾರ್ಯದರ್ಶಿ ಮಾಡಿಕೊಂಡು ಹಳ್ಳಿ ಹಳ್ಳಿ ಸುತ್ತಿ ಲೆವಿ ಚಳವಳಿಗೆ ರೈತರನ್ನು ಸಂಘಟಿಸ ತೊಡಗಿದೆ. ಹೆಚ್.ಸಿ.ಬಸವರಾಜಪ್ಪ ಶಿವಲಿಂಗಪ್ಪ ಮತ್ತಿತರ ರೈತರೆಲ್ಲ ಬಂದು ನಮ್ಮ ಜೊತೆ ಹೋರಾಟಕ್ಕಿಳಿದರು. ಸಂವಿಧಾನದಲ್ಲೆ ರೈತ ತಾನು ಬೆಳೆದ ಬೆಳೆಯನ್ನು ಯಾರಿಗಾದರೂ ಮಾರಾಟ ಮಾಡಬಹುದು ಅಂತ ಇದೆ.



ನಾವು ಬರೆದುಕೊಟ್ಟು ಉಳಿದ ಗಾಡಿಗಳೊಂದಿಗೆ ಸೇರಿಕೊಂಡು ಹೆಬ್ರಿಗೆ ಹೋದೆವು. ಆಮತ್ತು ವಿಶೇಷವಾಗಿ ಹೆಬ್ರಿಯ ವ್ಯಾಪಾರಿಗಳೆಲ್ಲ ಸೇರಿಕೊಂಡು ನಮಗೆ ಊಟದ ವ್ಯವಸ್ಥೆ ಮಾಡಿದ್ದರು. ಭತ್ತ ಮಾರಾಟ ಮಾಡಿ ಬಂದ ಹಣದಲ್ಲಿ ಸ್ವಾರಲು, ಬಂಗಡೆ ಹೀಗೆ ವಿವಿಧ ಮೀನುಗಳನ್ನು ಕೊಂಡುಕೊಂಡು ಮರಳಿಬಂದೆವು. ಆಗುಂಬೆಯಲ್ಲಿ ನಡೆದ ಹೋರಾಟ ಲೆವಿ ಪದ್ಧತಿ ಕೊನೆಗೊಳ್ಳಲು ಕಾರಣವಾಯಿತು.

(ಮುಂದುವರೆಯುವುದು)

ಜಗದ್ಗುರುಗು ರಾಜ್‌ಕಾರಣಿಗೂ ಸಾಯಿತ್ಯ ಸಭೆಲೇನು ಕ್ಯಲಸಪ್ಪ?

ರೊಟ್ಟಿಲ ಹೊನ್ನವೇಳೆಯಲ್ಲಿ ಉಗ್ರಿ ತುಪಿನಗುತ್ತ "ಈಗೊಂದು ವಾರದಿಂದ ಇದೀ ಕರ್ನಾಟಕದಲ್ಲಿ ತರಾವರ ಮೇಳಗಳ ನ್ಯದಿತಾ ಅದೆ ಕಣಮಾವ" ಎಂದ.

"ಅದೆಲ್ಲಿ ನ್ಯದಿತಾಯಿದ್ದವೂ?"

"ಸಿದ್ದಗಂಗೆ ಸ್ವಾಮಿಗಳಿಗೆ ನೂರೊಂದೊರ್ಸಾಯ್ತು ಅಂತ ನ್ಯದಿತು. ಅದಕ್ಕೆ ದಿಲ್ಲಿಯಿಂದ ರಾಷ್ಟ್ರಪತಿ ಬಂದಿದ್ರು. ಇನ್ನು ಚಿತ್ರದುರಗದಲ್ಲಿ ಸಾಯಿತ್ಯ ಸಮ್ಮೇಳನ ನ್ಯದಿತಾ ಅದೆ."

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಸಾಯಿತ್ಯ ಸಮ್ಮೇಳನ ಅಂದ್ರೆ ಆಗೊಂದು ಸತಿ ಮಂಡೇವುದಲ್ಲಿ ನ್ಯಡದಿತ್ತಲ್ಲ ಅದೇನ್ಲ?" ಎಂದ ಸೀರ.

"ಮಂಡೇವುದಲ್ಲಿ ನ್ಯಡದು ಹನ್ನರಡೊರ್ಸದ ಮ್ಯಲಾಯ್ತು ಕಣಮಾವ. ಅದು ಹೆಚ್ಚುಕಮ್ಮಿ ವರ್ಸವರ್ಸ ನ್ಯದಿತಾ ಅದೆ. ಇನ್ನು ದಾವಣಗ್ಯರೆಲಿ ತರಳಬಾಳು ಹುಣ್ಣಮೆ ನ್ಯದಿತಾ ಅದೆ."

"ತರಳಬಾಳು ಹುಣ್ಣಮೆ ಅಂದ್ರೇನ್ಲ?"

"ಸಾದ ಲಿಂಗಾಯಿತ್ರೆಲ್ಲ ಸೇರಿ ನಮ್ಮ ಚುಂಚನಗಿರಿ ಮಠದ ತರದ್ದೆ ಒಂದು ಮಠ ಮಾಡಿಕಂಡವುರೆ. ಅವರು ಯರಡೊರ್ಸ ಮೂರೊರಸುಕ್ಕೆ ಒಂದು ಸತಿ ಸೇರಿಕಂಡು ವಂಬತ್ತು ದಿನ ತರಳಬಾಳು ಹುಣ್ಣಮೆ ಅಂತ ಮಾಡ್ತರೆ."

"ಬರೀ ಸಾದಲಿಂಗಾಯಿತ್ರೆ ಸೇರತರೆ ಅನ್ನು."

"ಹೆಚ್ಚುಕಮ್ಮಿ ಅವುರೆಯಾ. ಆದ್ರೆ ಭಾಸಣ ಮಾಡಕ್ಕೆ ಬ್ಯಾರೆ ಜಾತಿಯೋರನೂ ಕರಿತರೆ. ಈ ಸತಿಯ ಕರುಣಾಕರ ರೆಡ್ಡಿನೂ ಬಂದಿದ್ದನಂತೆ."

"ಮಿನೀಟ್ರಲವೇನ್ಲ ಅವುನು?"

"ಊ ಕಣಮಾವ. ಎಡೂರಪ್ಪನ ಸರ್ಕಾರದಲ್ಲಿ ರೆವಿನ್ಯೂ ಮಂತ್ರಿಯಾಗವುನೆ. ಅವುನೂ ಬಂದು ಮಾತಾಡೋಯ್ತನೆ ಅಂದ್ರೆ ಆ ತರಳಬಾಳು ಹುಣ್ಣಿಮೆ ಯಾವ ಲ್ಯವೆಲ್ಲಿನ ಪಂಕ್ಷನ್ನು ಅಂತ ನನಿಗೀಗೊತ್ತಾಯ್ತು."

"ಅದ್ಯಾಕಂಗಂತೀ?"

"ಇನ್ನೇನು ಮಾವ ಮತ್ತೆ? ಅವುನು ಧರ್ಮದ ಸಭೆಲಿ ಮಾತಾಡೊ ಸಗತಿ ಇಲ್ಲೊನಂತೆ. ಗಣಿಗಾರಿಕೆ ಮಾಡ್ತನೆ. ಕರ್ನಾಟಕದ ಗಡಿನೆ ತಿದ್ದವುನಂತೆ. ಅವುನ ಮ್ಯಾಲೆ ಬೇಕಾದೋಟು ಕೇಸು ಇದ್ದವಂತೆ. ಅಂಥೋನ್ನ ಕರಿತರೆ ಅಂದ್ರೆ ಈ ಸಿರಿಗ್ಯರೆ ಮಠದೋರು ಇನ್ಯಾವ ಸಿರಿಗೆ ತರಳಬಾಳು ಹುಣ್ಣಮೆ ಮಾಡ್ತರೆ ಅಂತ ಲಿಂಗಾಯಿತ್ರು ಬ್ಯೆತ ಕುಂತವುರೆ."

"ಬೇಕಾದೋಟು ದುಡ್ಡು ಕೊಟ್ಟನೇನೊ, ಕರದವುರೆ ಬುಡ್ರ" ಎಂದ ಸೀರ.

"ಅದು ಇರಬವುದೇನಪ್ಪ, ನಮ್ಮ ಮಂಡೇವುದಲ್ಲಿ ಸಮ್ಮೇಳನ ಮಾಡಿದಾಗ ಜಪುರ್ಲ್ಲಾಖಾನ್ ಅನ್ನೊನತ್ರ ದುಡ್ಡೀಸಗಂಡಿದ್ರು. ಈ ಸಭೆ ಸಮಾರಂಭ ಮಾಡವುಕೆ ದುಡ್ಡು ಎಲ್ಲಿ ತಗಬೇಕು, ಯಾರತ್ರ ಈಸಗಬೇಕು ಅನ್ನದೇ ಗೊತ್ತಿಲ್ಲವಲ್ಲಾ ಏನ್ಹೇಳನಾ."

"ನೋಡ್ಲಾ, ಒಂದು ಕಾರ್ಯ ಮಾಡಬೇಕು ಅಂದಾಗ ಕಾರ್ಯ ಮುಖ್ಯವೇ ವರತೂ ಕಾಸು ಕೊಡೋರು ಯಾರು ಅಂತ ಕೇಳ್ತ ಕುಂತಗಳಕ್ಕಾಗದಿಲ್ಲ" ಎಂದು ಸೀರ ಗಂಭೀರವಾದ ಸಮಜಾಯಿಸಿ ನೀಡಿದವನ ಗತ್ತಿನಲ್ಲಿ ಕೂತ. ಆಗ ಕಾಣಿಸಿಕೊಂಡ ವಾಟಿಸ್ಸೆ,

"ಅಸ್ ಯಪ್ಪ ಅಂತೂ ಬದುಕಿ ಬಂದನಪ್ಪ" ಎಂದು ಒಳನುಗ್ಗಿದ.

"ಅದ್ಯಾಕ್ಲ ಅಂಗಂತೀ?" ಎಂದಳು ಜುಮ್ಮಿ.

"ಸಾಯಿತ್ಯ ಸಮ್ಮೇಳನಕ್ಕೆ ಹೋಗಿದ್ದೆ ಕಣಕ್ಕ."

"ಯಾರ್ಯಾರೋಗಿದ್ರೀ?"

"ಯಾವ್ರೊ ಒಂದ್ಯರಡು ತರಕಲ ಸಾಯಿತಿಗಳು ಸಿಕ್ಕಿದ್ರೊ. ಯಲ್ಲ ಟಾಟಾ ಸುಮೊ ಮಾಡಿಕಂಡು ಹೋಗಿದ್ದೊ ಕಣಕ್ಕ. ಊಟಲ್ಲ, ಮನಿಕಳಕ್ಕೆ ಜಾಗಿಲ್ಲ, ಚಿತ್ರದುರ್ಗದ ಬಂಡೆಮ್ಯಾಲೆ ಕುಂತಿದ್ದು ಬಂದೊ ಕಣಕ್ಕ."

"ಅಂತ ಬಗಿಸಿಗ್ಯಾಕ್ಲ ಹೋಗಿದ್ರಿ? ಇಲ್ಲೆ ಇದ್ರಾಯ್ತಿರಲಿಲ್ವೆ?"

"ಇದು ಯಲ್ಲ ಸಮ್ಮೇಳನದಂಗಲ್ಲ ಕಣಕ್ಕ. ನಮ್ಮ ಪ್ರೆಂಡು ನಲ್ಲೂರ್ ಪ್ರಸಾದ್ ಅಧ್ಯಕ್ಷಾಗ್ಯವುನೆ. ಚಿತ್ರದುರ್ಗದಲ್ಲಿ ಸಮ್ಮೇಳನ ಮಾಡ್ತ ಅವುನೆ. ಯಂಗೆ ನ್ಯಡಿತದೆ ಅಂತ ನೋಡಕ್ಕೊಗಿದ್ದೆ ಕಣಕ್ಕ. ಯಾಕಾದ್ರು ಹೋದವ್ರೊ ಅನ್ನುಸ್ತು. ಆದ್ರೆ ಸಮ್ಮೇಳನದ ಅಧ್ಯಕ್ಷ ಬಸವರಾಜು ಭಾಸಣ ಕೇ... ಭಾಳ ಖುಷಿಯಾಯ್ತು."

"ಅಷ್ಟು ಚನ್ನಾಗಿ ಭಾಸಣ ಮಾಡಿದ್ರೆ?"

"ಊ ಕಣಕ್ಕ, ಅವುರು ಒಂದು ಸ್ವಲುಪ ಸ... ಕಾಳ ದ್ವಡಪ್ಪನಂಗೆ. ಮಕ್ಕಡದಂಗೆ ಹೇಳ್ತರೆ. ಮುಲಾಜಿಲ್ಲದ... ಮಾತಾಡ್ತರೆ. ಅದಕೆ ಅವುರು ಸಾಯಿತ್ಯ ಸಮ್ಮೇಳನ... ಅಧ್ಯಕ್ಷರಾಗಬೇಕಾದ್ರೆ ತೊಂಬತ್ತೊರ್ಸಾಗಬೇಕಾಯ್ತು. ಅದ... ನಮ್ಮ ದೇಜವರೇಗೌಡ್ರು ನೋಡು, ಚಿಕ್ಕವಯಿಸಿಗೇ ಆಗಿ... ಈಗ ಮುದುಕರಾಯ್ತಾ ಅವುರೆ."

"ಕಂಡಿತವಾದಿ ಲೋಕವಿರೋಧಿ ಅಂತ ಅಂಗ... ಮಾತಾಡೋರಿಗೆ ಜನ ಗೌರವ ಕೊಡದಿಲ್ಲ ಕಂಡ" ಎಂದ ಕಾಳಮಾವ.



ಒಂದು ಸಂಪಂಗಿ ಅಂದರೆ ಎಷ್ಟು?

ಶಾಲೆಗೆ ದಿನಾ ಹೋಗುವುದು ಅಂದರೆ ಮಕ್ಕಳಿಗೆ ಒಂದೊಂದು ಸಲ ರೇಜಿಗೆ ಅನ್ನಿಸಿಬಿಡುತ್ತೆ. ಅಂತಹ ಸಂದರ್ಭಗಳಲ್ಲಿ ಶಾಲೆಗೆ ಚಕ್ಕರ್ ಹೊಡೆಯಲು 'ಯಾತ' ಕಟ್ಟುತ್ತವೆ. 'ಜ್ವರ ಬಂದಿದೆ' ಅಂದ್ರೆ ತಾಯಿ ಹಣೆ, ಎದೆಯ ಮೇಲೆ ಕೈ ಇಟ್ಟು 'ಏಕ್ಕಳ್ಯಾ (ಳ) ಮೈಬೀಸೀನೆ ಇಲ್ವಲ್ಲೋ' ಅಂತ ಹೇಳ್ತಾರೆ. ಗುಟ್ಟು ಬಯಲಾಗಿ ಬಿಡುತ್ತೆ ಅನ್ನೋ ಭಯ ಅವನ್ನ ಕಾಡ್ತದೆ. ಇಂತಹ ಕಳ್ಳಾಟಕ್ಕೆ 'ಹೊಟ್ಟೆ ನೋವು' ಅನ್ನೋದು ಸಿದ್ಧೌಷಧಿ ತರಹ ಕಾಣಿಸುತ್ತೆ. ಕೆಲವೊಮ್ಮೆ 'ತಲೆನೋವು' ಈ ಕೆಲಸ ಮಾಡಬಹುದು. ಇಂತಹವೂ ಕೆಲವೊಮ್ಮೆ ಯಡ ವಟ್ಟಾಗಬಹುದು.

ಬೀchiಯವರ 'ತಿಂಮನ ತಲೆ'ಯಲ್ಲಿ ಓದಿದ ನೆನಪು. ಒಮ್ಮೆ ತಿಂಮ ಹೀಗೇ ಶಾಲೆಗೆ ಚಕ್ಕರ್ ಹೊಡೆದ. ಸರ್ಕಾರಿ ಶಾಲೆಯಾಗಿದ್ದರೆ ಯಾವ ವಿದ್ಯಾರ್ಥಿಯಾದರೂ ತರಗತಿಗೆ ಹಾಜರಾಗದೆ ಇದ್ದರೆ 'ಯಾಕೆ ಬರ್ಲಿಲ್ಲ' ಅಂತ ಕೇಳಲ್ಲ; ಬಂದರೆ 'ಯಾಕೆ ಬಂದಿರಿ' ಅನ್ನೋದೂ ಇಲ್ಲ, ಒಂದು ರೀತೀಲಿ ಇಂತಹ ಹುಡುಗರಿಗೆ ಸ್ವರ್ಗ ಸಮಾನ ಅವು. ಎಲ್ಲಾ ಶಾಲೆಗಳಲ್ಲೂ ಇಂತಹ ಅನುಕೂಲ ಇರಲ್ಲ, ಶಾಲೆಗೆ ತಪ್ಪಿಸಿಕೊಳ್ಳಬೇಕೆಂದಾಗ ರಜವನ್ನು ಮುಂಚೆಯೇ ಪಡೆದಿರಬೇಕು. ಈ ನೋವು ಅನ್ನೋದು ಬರುವ ಸೂಚನೆ ಮೊದಲೇ ತಿಳಿದಿರುತ್ತೆ ಅನ್ನುವುದು ಅವರ ನಂಬಿಕೆ ಇರಬಹುದೇನೋ. ಒಂದು ವೇಳೆ ಮುಂಚೆಯೇ ರಜ ಮಂಜೂರು ಮಾಡಿಸಿಕೊಳ್ಳದಿದ್ದರೆ, ಶಾಲೆಗೆ ಹಾಜರಾದಾಗ ತಪ್ಪಿಸಿಕೊಂಡ ದಿನಗಳಿಗೆ ರಜಾ ಅರ್ಜಿ ಬರೆದರೆ ಸಾಲದು. ಚಕ್ಕರ್ ಹೊಡೆದ ದಿನವೇ ರಜ ಅರ್ಜಿ ತಲುಪಿಸಬೇಕು ಅನ್ನೋ ಕಡ್ಡಾಯ ಮಾಡಿರ್ತವೆ. ಇವನು ವ್ಯಾಸಂಗ ಮಾಡುತ್ತಿದ್ದ ಶಾಲೆಯೂ ಇದೇ ಮಾದರಿಯದ್ದಿರಬೇಕು. ರಜ ಅರ್ಜಿ ಕಳುಹಿಸಲು ಯಾರೂ ಸಿಗಲಿಲ್ಲ, ಆಧುನಿಕ ಸೌಲಭ್ಯ ಬಳಸಿಕೊಳ್ಳಲು ತೀರ್ಮಾನಿಸಿದ. ಶಾಲೆಗೆ ಫೋನ್ ಮಾಡಿದ. ಟ್ರಿನ್ ಟ್ರಿನ್ ಆಗುತ್ತಿದ್ದಂತೆಯೇ ಹೆಡ್ಮಾಸ್ಟರು ರಿಸೀವರ್ ಕೈಗೆತ್ತಿಕೊಂಡರು.

'ಹಲೋ'

'ಸಾರ್ ತಿಂಮನಿಗೆ ಹೊಟ್ಟೆನೋವು ಬಂದಿದೆ. ಅವನು ಶಾಲೆಗೆ ಬರಲ್ಲ, ರಜ ಕೊಡಿ.'



'ಹೌದಾ, ನೀವ್ಯಾರು ಮಾತನಾಡ್ತಿರೋದು?'

'ನಾನು ಸಾರ್ ನಮ್ಮಪ್ಪ' ಅಂದ ತಿಂಮ!

ಇದನ್ನೆಲ್ಲ ಇಲ್ಲಿ ಯಾಕೆ ಪ್ರಸ್ತಾಪಿಸಬೇಕಾಯಿತು ಅಂದರೆ, ಕೆಜಿಎಫ್‌ನ ಶಾಸಕರ ವೀರಗಾಥೆ ಕೇಳಿ. ಯಾವುದೋ ನಿವೇಶನದ ತಕರಾರನ್ನು ಪರಿಹರಿಸಬೇಕು ಅನ್ನೋದು ಇವರ ಮಹಾದಾಸೆ ಆಗಿತ್ತಂತೆ. ದಕ್ಷಿಣೆ ಇಲ್ಲದೆ ಯಾವ ಕೆಲಸವನ್ನೂ ಮಾಡುವುದಿಲ್ಲ ಅಂತ ಶಾಸಕರಾದೋರು ಪ್ರಮಾಣ ವಚನ ಸ್ವೀಕರಿಸುವುದು ಇತ್ತೀಚಿನ ದಿನಗಳಲ್ಲಿ ಸರ್ವೇಸಾಮಾನ್ಯ. ಇವರೂ ಹಾಗೇ ಮಾಡಿದ್ದರು ಅಂತ ಕಾಣುತ್ತೆ. ಈ ಕೆಲಸಕ್ಕೆ ಐದು ಲಕ್ಷ ರೂಪಾಯಿ ದಕ್ಷಿಣೆ ಇಡಬೇಕು ಅಂದಿದ್ದರಂತೆ. ಇದು ನ್ಯಾಯಯುತವಾದ ಒತ್ತಾಯ ಅಂತ ಅವನಿಗೆ ಅನ್ನಿಸಬಾರದಾ. 'ಆಗಲಿ ಸಾರ್' ಅಂತ ಇಲಿ ಇಲಿಯಾಗೆ ಆಡ್ದೋನು ಲೋಕಾಯುಕ್ತರಿಗೆ ದೂರು ನೀಡಿದರಂತೆ. ಆಮೇಲೆ ಎಲ್ಲಾ ಮಾಮೂಲಿನಂತೆ ನಡೀತು. ಸಂಪಂಗಿ ಅನ್ನೋ ಶಾಸಕನ್ನ ಎಳ್ಕೊಂಡೋಗಿ ಲೋಕಾಯುಕ್ತ ಕಚೇರೀಲಿ ಕೂಡಿ ಹಾಕಿದರಂತೆ.

ಈ ಶಾಸಕ ಮಹಾಶಯರು ಸತ್ಯಧರ್ಮ, ನ್ಯಾಯ ನೀತಿ ಅಂತ ಹೊರೆಹೊರೆ ಉಗುಳುವ ಭಾರತೀಯ ಜನತಾ ಪಕ್ಷದವರಾಗಿದ್ದುದು ಅವರ ಪಕ್ಷದ ಇತರೆ ಕೆಲವು ಶಾಸಕರನ್ನು ಕೆರಳಿಸಿತಂತೆ. ನರ್ಸ್ ರೇಣುಕಾಚಾರ್ಯ ಹಾಗೂ ಗಡ್ಡದ ವೀರಯ್ಯ ವೀರಾವೇಶದಿಂದ ಲೋಕಾಯುಕ್ತ ಕಚೇರಿಗೆ ದಾಳಿ ಮಾಡಿದರಂತೆ. ಇದರಲ್ಲೇನೂ ಆಶ್ಚರ್ಯ ಇಲ್ಲ ಬಿಡಿ. ರೌಡಿಗಳು, ಪಾತಕಿಗಳೇ ಶಾಸಕರಾಗಿರುವ ಈ ದಿನಗಳಲ್ಲಿ ಇಂತಹ ನಡವಳಿಕೆಗಳು ಸಾಮಾನ್ಯವೇ. ಇವೆಲ್ಲ ಅಂತೆಕಂತೆಗಳ ವಿಷಯ ಆಯಿತಲ್ಲ. ಇದೆಲ್ಲ ಏನೂ ನಡೀಲೇ ಇಲ್ಲವಂತೆ. ಶಾಸಕ ಮಹಾಶಯರುಗಳು ತಮ್ಮ ವೃತ್ತಿ ಬಾಂಧವನ ಆರೋಗ್ಯ ವಿಚಾರಿಸಲು ಹೋಗಿದ್ದಾಗ ಕಾವಲಿದ್ದ ಪೊಲೀಸರು ಅವಕಾಶ ನೀಡಲಿಲ್ಲವಂತೆ. ಶಾಸಕರು ಅಂದರೆ ಏನು? ಅವರನ್ನೇ ಒಳಕ್ಕೆ ಬಿಡಲಿಲ್ಲ ಎಂದರೆ ಏನರ್ಥ ಅಂತ ಬಾಯಿ ಮಾತಿನ ಜೋರು ಮಾಡಿದರಂತೆ. ಅಷ್ಟೆಯಂತೆ ನಡೆದದ್ದು. ಇವರು ಬಾಗಿಲನ್ನು ಒದ್ದದ್ದು, ಕೈಕೈ ಮಿಲಾಯಿಸಿದ್ದು ಅವೆಲ್ಲ ಟಿವಿಯಲ್ಲಿ ತೋರಿಸಿದರಲ್ಲ ಅಂದರೆ ಅದು ಫೋಟೋ ಟ್ರಿಕ್ ಅಂತೆ! ಅಲ್ಲಾ ಮಾನಧನರಾದ ಶಾಸಕರಿಗೆ ಅವಮಾನ ಮಾಡಲು ಅದೇನು ಆಟ ಆಡ್ತಾರೆ ಈ ಟಿವಿ ಜನ ಅಂತ!

ಭಾರತೀಯ ಜನತಾ ಪಕ್ಷದ ಅನೂಚಾನ ಪದ್ಧತಿ ಬಂದಿದೆ. ತಮ್ಮ ಪಕ್ಷದ ಯಾರಾದರೂ ಅಪರಾಧವೆಸಗಿ ಸಿಕ್ಕಿಕೊಂಡರೆ 'ಅವರು ನಮ್ಮ ಪಕ್ಷದವರೇ ಅಲ್ಲ' ಅಂತ ಸಾಧಿಸೋದು. ಇದು ಸಾಧ್ಯವಾಗಲಿಲ್ಲ ಅನ್ನುವ ಪರಿಸ್ಥಿತಿ ಉದ್ಭವಿಸಿದರೆ 'ಅವರನ್ನ ಪಕ್ಷದಿಂದ ಉಚ್ಚಾಟನೆ ಮಾಡಿದ್ದೇವೆ' ಎಂದು ಸಾರುವುದು. ಭಾಜಪ ಮಾಜಿ ರಾಷ್ಟ್ರಾಧ್ಯಕ್ಷ ಬಂಗಾರು ಲಕ್ಷ್ಮಣ ಅವರು ಒಂದು ಲಕ್ಷ ರೂಪಾಯಿಗೆ ಬಾಯಿಬಾಯಿಬಿಟ್ಟು ಸಿಗಾಕಿಕೊಂಡಾಗ ಅನುಸರಿಸಿದ್ದೂ ಇದೇ ವಿಧಾನವನ್ನ. ಈಗಲೂ ಹಲ್ಮುಖಿ ಗೌಡರು ಮಾಡಿದ್ದೂ ಅದನ್ನೇ!

ಅಂಕ

ಎಚ್.ಎಲ್. ಕೇಶವಮೂರ್ತಿ

ಇದು ತೋರಿಕೆ ಬೂಟಾಟಿಕೆ ಎಂದು ಜನರು ಹೀಯಾಳಿಸಬಹುದು. ಆದರೆ ಭಾಜಪಗೆ ತಲೆ ಕೊಡಲು ಸಿದ್ಧರಿರುವವರಿಗೆ ಹಾಗೆ ತೋರುತ್ತಿಲ್ಲವಲ್ಲಾ. ಎನ್. ವೆಂಕಟಾಚಲ ಅವರು ಗೊತ್ತಲ್ಲ, ಅದೇ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷರು, ಲಂಚ ಸ್ವೀಕರಿಸುವ ಸರ್ಕಾರಿ ಅಧಿಕಾರಿಗಳ ಮೇಲೆ ಹೌಹಾರಿ ಬೀಳ್ತಿದ್ದೋರು. ಈಗ ಭಾಜಪಕ್ಕೆ ಬಲೆಗೆ ಬಿದ್ದಿದ್ದಾರೆ. ಅವರು ಸೇರಿದ್ದು ಯಾಕೆ ಅಂದರೆ ಚಿಕ್ಕಬಳ್ಳಾಪುರದಿಂದ ಪಕ್ಷದ ಸಂಸದನಾಗುವ ಬಯಕೆಯಿಂದ ಅಲ್ಲ ಪರಂತು ಆ ಪಕ್ಷ ಭ್ರಷ್ಟಾಚಾರ ವಿರುದ್ಧ ಹೋರಾಡುತ್ತಾರಂತೆ! ಸಂಪಂಗಿ ಪ್ರಸಂಗ ನಡೆದ ಮೇಲೂ ಹೀಗಾಗಲೂ ಸಾಧ್ಯವಾ ಅಂದರೆ ಭ್ರಷ್ಟಾಚಾರದ ಆರೋಪ ಬಂದ ತಕ್ಷಣ ಪಕ್ಷದಿಂದ ಉಚ್ಚಾಟಿಸಿತಲ್ಲಾ. ಯಾವ ಪಕ್ಷ ಹೀಗೆ ಮಾಡುತ್ತೆ ಹೇಳಿ ಅಂತಾರಂತೆ. ಭಾಜಪ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ಅಂತೇನಾದರೂ ಮಾಡಿದರೆ ಅಧ್ಯಕ್ಷರಾಗಲು ಲಾಯಕ್ಕಾದ ಆಸಾಮಿ ಅಂದ ಹಾಗಾಯಿತು.

ಇತ್ತ ಸನ್ಮಾನ್ಯ ಶಾಸಕರಾದ ಸಂಪಂಗಿಯವರ ಕತೆ ಬರೋಣವಂತೆ. ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಿದಾಗಿನಿಂದ ಮಾನ್ಯರ ಆರೋಗ್ಯ ಕೈಕೊಡಲಾರಂಭಿಸಿತು. ಅದು ಮೊದಲು ತಿಳಿದಿದ್ದು ಮಾನ್ಯ ಶಾಸಕರಿಗಲ್ಲ, ವಿಧಾನಸೌಧದಲ್ಲಿ ಆರಾಮವಾಗಿ ಕುಳಿತಿದ್ದ ಅಧಿಕಾರಿಗೆ! ಹೀಗೆ

ಎಲ್ ಬಸವರಾಜು ನಮ್ಮ ದ್ವಡಪ್ಪನಂಗೆ ೀಡು, ಅದ್ಕೆ ನಮ್ಮ ದ್ವಡಪ್ಪ ಬಸುರಾಜು ಮಾತಾಡ್ತ ಅವ್ರುನೆ. ದ್ವಡಪ್ಪಾ, ಬಸುರಾಜು ಒಂದೇ ದ್ವಣ್ಣೆ ಯಲ್ಲಾರಿಗೂ ಮುಟ್ಟುಸ್ತರೆ. ದಲ್ಲೂ ಅಂಗೆ ಆಯ್ತು."

ನಾಯ್ತು?"

ಕಾರಣಿಗಳಿಗೂ, ಜಗದ್ಗುರುಗಳಿಗೂ ಈ ಮ್ಮೇಳನದಲ್ಲಿ ಏನು ಕ್ಯಲಸ, ನಡಿರಿ ಅಂದ್ರು."

ಕಂಗದುರ್ಲ?" ಎಂದಳು ಜುಮ್ಮಿ.

ದಕ್ಕ, ನಿನಿಗೆ ಅರ್ಥಾಗದಿಲ್ಲ ಆದ್ರು ಹೇಳ್ತಿನಿ ಸಾಯಿತ್ಯ ಅಂತ ಅದಲ್ಲ, ಅದರ ಲೋಕನೆ ಕ್ಕೆ. ಅಲ್ಲಿ ಜಾತಿಪಾತಿ ಇಲ್ಲ, ದೇಸದ ಗಡಿನೂ ಗ್ಲೆಂಡ್ ದೇಸದಲ್ಲಿ ಬರಿತಾಯಿರೋನು ಗೆ ಇವ್ರುನು ನಮ್ಮೋನು ಅನ್ನಸಬವುದು. ಅಂಗೆ ಂಪು ಬ್ಯಾರೆ ದೇಸದೋರಿಗೆ ಅವುರೋನಂಗೆ ು. ಅಂಗೆ ಆ ಲೋಕನೆ ಜಾತಿ, ಮತ, ಗಡಿ, ಲೋಕ. ಅಂಥಾ ಲೋಕದ ಚರ್ಚೆ ನ್ಯಡಿಯೋ ಒಂದು ಜಾತಿ ತಲೆಮ್ಯಾಲೆ ಕುಂತಿರೊ ಕ್ಕ ಕ್ಯಲಸ?"

ರು ಕರಿಯೊ ವತ್ತಿಗೆ ಹೋಗ್ಯವ್ರುರೆ, ೋದರು?"

ೇಳದು ಕರಟ್ಟೆ. ಇಂಥೋರನ್ನಲ್ಲ ಬುದ್ಧ , ಹಂಪ ನಾಗರಾಜಯ್ಯ ಅಂತ ಮಬ್ಬಿದ್ವ. ಅವ್ರುನು ಾಡಿದ. ಇವತ್ತಂಗಾಗ್ಯದೆ ಅಂದ್ರೇ ಸ್ವಾಮಿಗಳ ಮಾಡದ್ಯಂಗೆ ಅನ್ನಂಗಾಗ್ಯದೆ. ಬಸವರಾಜನಂಥ ನು ಮುಂದು ಬಂದ್ರೆ ಈ ಮಠಾಧಿಪತಿಗಳು. ಗಳ ದೂರ ಮದಿಗಿ ಸಾಯಿತ್ಯ ಸಮ್ಮೇಳನ ೃದು."

ಕಾರಣಿಗಳ್ಯಂಗೆ ದೂರ ಇಡತಿಯೋ? ದುಡ್ಡು ದು ಅವ್ರುರೆಯಂತೆ" ಎಂದ ಉಗ್ರಿ.

ಸ್ಟರ್ ಉಗ್ರಿ, ರೆಡ್ಡಿಗಳ ತರ ಮಾತಾಡಬ್ಯಾಡ. ಸಮ್ಮೇಳನಕ್ಕೆ ರಾಜಕಾರಣಿಗಳು ದುಡ್ಡು ಕೊಡ್ತರೆ ಾರ ದುಡ್ಡು ಗೊತ್ತ? ಈ ನಮ್ಮ ಶೀರ ಚಿಗಪ್ಪ ದಿನಕ್ಕೆ ಒಂದು ಕಟ್ಟು ಬೀಡಿ ಸೇತ್ತನೆ. ಅದರ ಬಾಪ್ತು ನಾಲ್ಕಾಣೆ ಸೇರಿ ಇಪ್ಪತ್ತೈದು ಪೈಸೆ ಸರ್ಕಾರದ ಖಜಾನೆಗೋಗಿ ಠಣಾರಂತ ಬೀಳ್ತದೆ. ಅಲ್ಲಿಗೆ ಅದ್ಯಾರ ದುಡ್ಡು ಅಂತ ಗೊತ್ತಾಯ್ತಾ?"

"ಸರಿಯಪ್ಪ, ಅಧಿಕಾರದಲ್ಲಿರೊ ರಾಜಕಾರಣಿ ನಾನು ದುಡ್ಡು ಕೊಡದಿಲ್ಲ ಅಂತನೆ, ಆಗ?"

"ಅನ್ನದೆ ಆದ್ರೆ ಅವುನ್ನ ನಾನು ಮೆಚ್ಚತಿನಿ. ಧೀರ ಕಣಯ್ಯ ನೀನು ಅಂತಿನಿ. ಆಗ ಸಾಯಿತಿಗಳ್ಯಲ್ಲ ಒಟ್ಟಾಗಿ, ಚಿಲ್ರೆನ್ಯಲ್ಲ ಸೇರಿಸಿ, ಒಂದು ಸಮ್ಮೇಳನ ಮಾಡಿ ತಾವು ಬರದಿರದು, ಕಡುದು ಕಟ್ಟೆ ಹಾಕಿರದ್ನಲ್ಲ ಅಳುದು ಸುರುದು ಹಂಚಗಂಡು ಮನಿಗೋಯ್ತರೆ. ಈಗ ಚಿತ್ರದುರ್ಗದಲ್ಲಿ ನ್ಯಡದದಲ್ಲಾ, ಅಂತ ಅದ್ವಾನದ ಜಾತ್ರೆ ನಿಂತೋಯ್ತದೆ. ಊಟಕೂ ವಡದಾಡಂಗಿಲ್ಲ, ಕಿಟ್ಟಿಗೂ ವಡದಾಡಂಗಿಲ್ಲ, ಸರ್ಕಾರಿ ಜನ ರಜಾ ಚೀಟಗೂ ವಡದಾಡಂಗಿಲ್ಲ, ಯಲ್ಲ ತಣ್ಣಗೆ ನ್ಯಡಿತದೆ. ಹಳ್ಳದ ಸಾಲಲ್ಲಿ ಝುರಿ ಹರದಂಗೆ."

"ನೀನೇಳತರ ಆದತೇನೊ?"

"ಈಗಾಗ್ಲೆ ಒಂದೊ ಯರಡೊ ಬೆಂಗಳೂರಲ್ಲಿ ಆಗ್ಯವೆ ಕಣೊ ಉಗ್ರಿ. ಒಟ್ಟನಲ್ಲೇನಪ್ಪ ಅಂದ್ರೆ, ಸಾಯಿತಿಗಳು ಮನಸು ಮಾಡಬೇಕು. ಯಲ್ರು ನಲ್ಲೂರು ಪ್ರಸಾದನಂಗಾದ್ರೆ ಇಲ್ಲೇನು ನ್ಯಡಿಯದಿಲ್ಲಾ."

"ಇಲ್ಲ ನಿನ್ನಂಗಾದ್ರೆ ಚನ್ನಾಗಿ ನ್ಯಡಿತವೆ ಅನ್ನು" ಎಂದಳು ಜುಮ್ಮಿ.

"ನಾವು ಯಾವತ್ನು ಕಾರ್ಯಕ್ರಮ ಮಾಡಕ್ಯೊಗದಿಲ್ಲ ಕಣಕ್ಕ. ಅದರಿಂದ ನಮಿಗೇನು ಆಗಬೇಕಾಗಿಲ್ಲ, ಮಾಡದೇ ಆದ್ರೆ ಸಲಹೆ ಕೊಡ್ತಿವಿ. ಸಜೇಶನ್ ಕೊಡ್ತಿವಿ. ಇಂಗಲ್ಲ ಹಿಂಗೆ ಅಂತ ತಿಳಿವಳಿಕೆ ಹೇಳ್ತಿವಿ."

"ಆತನ್ನ ಪೆದತಿಬುಟ್ಟು ಆರು ತಿಂಗಳಾಗಿತ್ತಂತೆ, ಅಂಥೋನ್ನ ನೀತಿ ಹೇಳಕ್ಕೆ ಕರಿಸಿದರಂತೆ. ಅಂಗಾಯ್ತು ಕಂಡ್ಯ ನೀನೇಳದು."

"ನನ್ನ ನೀತಿ ನ್ಯಾರವಾಗಿದ್ರೆ ತಗಳ್ಳಬೇಕಾಯ್ತದೆ. ನಾನು ನ್ಯಟ್ಟಗಿಲ್ಲ ಅಂತ ನನ್ನ ನೀತಿ ಬುಟ್ರೆ ನಿಮಗೇ ಲಾಸು, ಅಲವೆ ದ್ವಡಪ್ಪ?"

" ?!"

■

ಗ್ಯದಿಂದ ಬಳಲುತ್ತಿರುವ ಮಾನ್ಯ ಶಾಸಕರನ್ನು ಕೊಳಿಸುವುದು ಅನ್ಯಾಯದ ಪರಮಾವಧಿ ಅಧಿಕಾರಿವರ್ಯರಿಗೆ. ಸಂಬಂಧಿಸಿದ ಗಳಿಗೆ ಫೋನಾಯಿಸಿ ರೋಗಿಯನ್ನು ಆಸ್ಪತ್ರೆಗೆ ಮುವಂತೆ ಸೂಚಿಸಿದರು. ರೋಗಿಗಿಂತಲೂ, ಂತಲೂ ಮುನ್ನವೇ ಈ ಕಾಯಿಲೆಯನ್ನು ವಂತಹ ಚಾಣಾಕ್ಷ ಅಧಿಕಾರಿಗಳನ್ನು ಹೊಂದಿರುವ ಸರ್ಕಾರದ ಕಾರ್ಯವೈಖರಿಯನ್ನು ಮೆಚ್ಚಲೇಬೇಕು! ಾರ್ಯದಕ್ಷತೆಗೆ ಸನ್ಮಾನ್ಯ ಲೋಕಸೇವಾ ಆಯೋಗದ ಅಧ್ಯಕ್ಷರೇನೆನ್ನುವರೋ ತಿಳಿಯಲಾ ಲವಾಗಿದೆ.

ಬದೇವ ಹೃದ್ರೋಗ ಆಸ್ಪತ್ರೆಗೆ ಸನ್ಮಾನ್ಯ ಶಾಸಕರನ್ನು ಾಯಿತು. ಅಕಟಕಟಾ... ಸಂಪಂಗಿಯ ಕೇನೆಂಬೆನು. ಅಲ್ಲಿಯ ನಿರ್ದೇಶಕರು ಹೃದ್ರೋಗ ಹುದಾದರೂ ಅವರು ಮಾಜಿ ಪ್ರಧಾನಿಯವರ ಾಗಿರಬೇಕೆ! ಇತರೆ ವೈದ್ಯರಿಗೆ ಪತ್ತೆಯಾಗುವ ಕಾಯಿಲೆ ಅವರಿಗೆ ಕಂಡುಬರಲೇ ಇಲ್ಲ! ತ ಇಕ್ಕಟ್ಟಿನ ಪರಿಸ್ಥಿತಿ ನೋಡಿ. ರೋಗ ಇದೆ ಸರ್ಟಿಫಿಕೇಟ್ ನೀಡಿ ಎಂದು ಹೇಳುವಂತಿಲ್ಲ, ರೂ ಕಡುವೈರಿ ದೇವೇಗೌಡರ ಅಳಿಯ ತೆಯೂ ಇರಲಿಲ್ಲ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪರಮಾತ್ಮನೇ ಮಾರ್ಗ ತೋರಿಸಿದ ಸನ್ಮಾನ್ಯ ಹೃದಯಬೇನೆ ತಲೆಗೆ ತಟ್ಟಿತು!

ಸಕರಿಗೆ ಇಂತಹ ಸಹಿಸಲಾರದ ತಲೆಬೇನೆ ಬಂದಾಗ ದ್ಯರಿಗೆ ಹೇಳುವಂತೆ 'ಬೆಡ್ ಖಾಲಿ ಇಲ್ಲ' ಂತೆ! ಖಾಲಿ ಇಲ್ಲದಿದ್ದರೂ ಮಾಡಿಸಿ ಕೊಡಬೇಕು. ಕೊಬ್ಬನ ಹಾಸಿಗೆಯನ್ನು ಬಲವಂತವಾಗಿ ತೆರವು ತಲೆ ಶೂಲೆಯಿಂದ ನರಳುತ್ತಿರುವ ಶಾಸಕರನ್ನು ರಿಸಲಾಯಿತು. ಸಂಪಂಗಿಯವರ ದುರದೃಷ್ಟ ು. ನುರಿತ ವೈದ್ಯರಿಗೆ ಶೂಲೆಯ ಯಾವುದೇ ಕಂಡುಬರಲಿಲ್ಲ!

ಡೂ ಕಡೆ ಇವರು ನಿರೋಗಿ ಎಂದು ಾಯಿತು. ಸಾಮಾನ್ಯರಾಗಿದ್ದರೆ ಒದ್ದು ಒಳಕ್ಕೆ ಹುದಿತ್ತು. ಇತ್ತು ಏನು ಬಂತು, ಹಾಕುತ್ತಿದ್ದರು ಆದರೆ ಇವರು ಸನ್ಮಾನ್ಯ ಶಾಸಕರು! ಹೃದಯದಿಂದ ರಿದ್ದ ಬೇನೆ ವಾಂತಿಬೇಧಿ ರೂಪದಲ್ಲಿ ರಲಾರಂಭಿಸಿತು. ಆದರೆ ಏನಾಶ್ಚರ್ಯ ಅಂದರೆ ಅನುಭವ ಆಗುತ್ತಿದ್ದ ಅದು ಬೇರೆಯವರ ಕಾಣಿಸುತ್ತಲೇ ಇರಲಿಲ್ಲ! ಇನ್ನೂ ಆಶ್ಚರ್ಯಕರ ಎಂದರೆ ಸನ್ಮಾನ್ಯರಿಗೆ ಶರತ್ತು ಬದ್ಧ ಜಾಮೀನು ದೊರೆಯುತ್ತಿದ್ದಂತೆ ಅವರನ್ನು ಅಮರಿಕೊಂಡಿದ್ದ ರೋಗಗಳೆಲ್ಲ ತಿಂಗಳ ಬೆಳಕು ಮಂಗಳ ಮಾಯ ಆದವು! ಅಂದಹಾಗೆ ಇಷ್ಟೆಲ್ಲ ರಂಪ ರಾಮಾಯಣ ಆದದ್ದು ಸರ್ಕಾರದ ಖರ್ಚಿನಲ್ಲಿ!

ಒಂದು ಸಂಪಂಗಿ!

ಸಂಪಂಗಿ ಭ್ರಷ್ಟಾಚಾರದ ಆರೋಪಿ.

ಅವರು ಹಣ ಪಡೆದದ್ದು ಯಾಕೆ?

ವಿವಾದಿತ ನಿವೇಶನದವನಿಗೆ ನೀಡಲು!

ಹೀಗಿದ್ದರೂ ಅವರ ಮೇಲೆ ಯಾಕೆ ಈ ಆಪಾದನೆ?

ಅವರು ದಲಿತ ಎಂದು!

ಕವಿ ಸಿದ್ಧಲಿಂಗಯ್ಯ ಮೈಸೂರಿನಲ್ಲಿ 'ಲಂಕೇಶ್ 60' ಸಮಾರಂಭದಲ್ಲಿ ಹೇಳಿದ್ದು ನೆನಪಾಗುತ್ತಿದೆ. ಅವರು ಹೇಳಿದ್ದು "ಮರ ಬಿದ್ದು ದಲಿತ ಸಾವು" ಅಂತ ಪತ್ರಿಕೆಯಲ್ಲಿ ಬಂದಿದೆ. ಮರಕ್ಕೆ ಗೊತ್ತಿತ್ತ ಇವನು ದಲಿತ ಅಂತ!"

ಭ್ರಷ್ಟಾಚಾರಕ್ಕೂ ಜಾತಿಯ ಮೊರೆ!

ತೆಹಲ್ಕಾ ಹಗರಣದಲ್ಲಿ ಬಂಗಾರುಗಾರು ಒಂದು ಲಕ್ಷ ರೂಪಾಯಿ ಗೋರಿಕೊಂಡದ್ದು ಟಿವಿಯಲ್ಲಿ ಗೋಚರಿಸಿ ಜಗಜ್ಜಾಹೀರು ಆಯಿತಲ್ಲ, ಆಗ ಕೇಳಿಬರುತ್ತಿದ್ದ ಮಾತು:

ಒಂದು ಬಂಗಾರು ಅಂದರೆ ಎಷ್ಟು?

ಒಂದು ಲಕ್ಷ!

ಇದೇ ಮಾನದಂಡ ಅಳವಡಿಸಿದರೆ...

ಒಂದು ಸಂಪಂಗಿ ಅಂದರೆ ಎಷ್ಟು?

ಐದು ಬಂಗಾರು!

* * * * * *


ಭಾರತೀಯ ಜನತಾ ಪಕ್ಷ ಜನರು ಮೂರ್ಖರು ಅಂತ ನಿರ್ಧರಿಸುವಂತಿದೆ. ಸಂಪಂಗಿ ಕೇಸಿನಲ್ಲಿ ಈ ರೀತಿ ಆಡಿತಲ್ಲ ಆ ಪಕ್ಷ. ಕರಾವಳಿ ಅಲೆ ಪತ್ರಿಕೆಯ ಸೀತಾರಾಂ ಕೈಗೆ ಬೇಡಿ ಹಾಕಿದ್ದು ಯಾಕೆ ಅಂತ ಹೈಕೋರ್ಟು ಕೇಳಿರುವುದು ವರದಿಯಾಗಿದೆ. ಅಲ್ಲ ಇದನ್ನು ಈಗ ಕೇಳಿತು ಅಂತ. ಸನ್ಮಾನ್ಯ ವಿ.ಎಸ್. ಆಚಾರ್ಯ ಎಂಬ ಗೃಹಮಂತ್ರಿ ಅದನ್ನು ಆಗಲೇ ವಿವರಿಸಿದ್ದಾರಲ್ಲ!

ಅದೇನು ಅದು?

ಸೀತಾರಾಂ ಅವರೇ ನನ್ನ ಕೈಗೆ ಕೋಳ ಹಾಕಿ ಎಂದು ಒತ್ತಾಯ ಮಾಡಿ ಬೇಡಿ ಹಾಕಿಸಿಕೊಂಡರಂತೆ!

ಆಹಾ ಎಂತಹ ಗೃಹಮಂತ್ರಿ! ಎಂತಹ ಸಬೂಬು!

■



ಪಿ. ಲಂಕೇಶ್ ಏಪ್ರಿಲ್ 28, 1991

ಪ್ರಾಮಾಣಿಕ ಚಲನೆ

"ನೋಡು, ನೀನು ನೃತ್ಯಗಾತಿ. ನಿನ್ನ ಪ್ರತಿಯೊಂದು ಚಲನೆಯೂ ಪ್ರಾಮಾಣಿಕವಾಗಿರಬೇಕು. ಈಗ ನೀನು ನಡೆದಾಡುವುದು ಕೂಡ ಅಪ್ರಾಮಾಣಿಕವಾಗಿದೆ!" ಅಂದ ಅಪ್ಪ ಆತ ಡಾಕ್ಟರು. ಮಗಳ ಹೆಸರು ಮಾರ್ಥಾ ಗ್ರಹಾಂ. ನೃತ್ಯವನ್ನು ಅಷ್ಟಾಗಿ ಸಹಿಸದ, ತನ್ನ ಮಗಳು ನೃತ್ಯಗಾತಿಯಾಗುವುದನ್ನು ಇಷ್ಟಪಡದ ತಂದೆ ಹಾಗೆ ಹೇಳಿದಾಗ ಮಾರ್ಥಾ ಬೆಚ್ಚಿ ನಿಂತಳು, ಯೋಚಿಸಿದಳು. ಹೌದು. ಮಾತು, ಕಲೆ, ಬರವಣಿಗೆ, ಚಿತ್ರಕಲೆ-ಎಲ್ಲದರಲ್ಲೂ ಅಪ್ರಾಮಾಣಿಕತೆಯನ್ನು ಬಚ್ಚಿಡಬಹುದು. ಚಲನೆಯಲ್ಲಿ ಅದನ್ನು ಬಚ್ಚಿಡಲಾಗುವುದಿಲ್ಲ, ಬಚ್ಚಿಡಕೂಡದು. ಹೀಗೆಂದು ಚಿಂತಿಸಿದ ಮಾರ್ಥಾ ತನ್ನ ತಂದೆಯ ಮಾತನ್ನು ತನ್ನ ಜೀವನವಿಡೀ ನೆನಪಿಟ್ಟು ನೃತ್ಯಕಲಾವಿದೆಯಾದಳು. ಮೊನ್ನೆ ತನ್ನ 63ನೇ ವಯಸ್ಸಿನಲ್ಲಿ ತೀರಿಕೊಂಡ ಮಾರ್ಥಾ ಗ್ರಹಾಂ ಅಮೆರಿಕದ ಈ ಶತಮಾನದ ಶ್ರೇಷ್ಠ ನರ್ತಕಿ ಮತ್ತು ನರ್ತನದ ಅಧ್ಯಾಪಕಿ.



ಆಕೆಯ ಪ್ರತಿಯೊಂದು ನಡಿಗೆಯೂ, ಹೆಜ್ಜೆಯೂ, ಚಲನೆಯೂ ಪ್ರಾಮಾಣಿಕವಾಗಿರುತ್ತಿತ್ತು, ಅವಳ ಅಂತರಂಗದಿಂದ ಬಿಂಬಿಸಿದಂತಿರುತ್ತಿತ್ತು, ಭೂಮಿಯ ಪರಿಭ್ರಮಣೆಯಿಂದ, ವಿಶ್ವದ ಸ್ಪಂದನವನ್ನೊಳಗೊಂಡು ಜನಸಾಮಾನ್ಯರ ಆಳಲನ್ನು ಕೂಡ ಚಲನೆಯ ಮೂಲಕ ಹೇಳುವುದು ಆಕೆಗೆ ಸಾಧ್ಯವಾಯಿತು. ಪ್ರಖ್ಯಾತ ನಟರು, ನರ್ತಕರು ಅವಳಲ್ಲಿಗೆ ಬಂದು ಪ್ರಾಮಾಣಿಕ ಚಲನೆಯನ್ನು ಕಲಿತರು; ತಮ್ಮ ಅನುಭವಕ್ಕೆ ಆಕೆಯ ನಿಷ್ಠುರ, ಖಚಿತ, ಕಲಾತ್ಮಕ ಪ್ರತಿಭೆಯ ನೆರವು ಪಡೆದರು.

ವಿಶೇಷ ದರ್ಜೆಯಿಂದ ದೇವತೆಗೆ ತಕ್ಕಂಥ ಉಡುಪು ಧರಿಸಿ ಸಾರ್ವಜನಿಕವಾಗಿ ಮಿಂಚುತ್ತಿದ್ದ ಈ ಗೌರವಾನ್ವಿತ ಕಲಾವಿದೆಯನ್ನು ಒಮ್ಮೆ ಕೇಳಿದರು, "ನೀನು ಹೀಗೆ ದೇವತೆಯಂತೆ ವರ್ತಿಸುವುದು ಸರಿಯೆ?"

"ಒಂದು ವೇಳೆ ನಾನು ದೇವತೆಯೇ ಆಗಿದ್ದರೆ ಅದಕ್ಕೆ ನೀವೇನೆನ್ನುತ್ತೀರಿ?" ಅಂದಳು ಮಾರ್ಥಾ.

ಈ ಮರ್ತ್ಯಲೋಕ ದೇವಲೋಕ ಅನ್ನಿಸುವುದು ಮಾರ್ಥಾ ಗ್ರಹಾಂ ತರಹದ ಪ್ರತಿಭಾನ್ವಿತ, ಪ್ರಾಮಾಣಿಕ ಕಲಾವಿದರಿಂದ.

ಎಲ್ಲ ಕ್ರಿಯೆಗೂ ಅರ್ಥವಿದೆ

ಯಾರೋ ಒಬ್ಬರ ಬಗ್ಗೆ ಮಾತಾಡ್ತಿದ್ದೆವು. "ಅವರ ಫೋನ್ ನಂಬರ್ ಏನ್ ಸಾರ್?" ಅಂತ ಕೇಳಿದ. ನಾನು ಫೋನ್ ನಂಬರ್‌ಗಳನ್ನು ನೆನಪಿಟ್ಟುಕೊಳ್ಳುವುದಿಲ್ಲ, ಡೈರಿ ತೆಗೆದು ಆ ನಂಬರ್‌ಗಾಗಿ ಹುಡುಕಿ ಹೇಳಿದರೆ ಆತ ಸರಕ್ಕನೆ ಪೆನ್ ತೆಗೆದು ಎಡ ಅಂಗೈ ಮೇಲೆ ಬರೆದುಕೊಳ್ಳತೊಡಗಿದ. ಇಂಥ ಬಹಳ ಜನ ನೋಡಿದ್ದೆ. "ಅಲ್ಲಯ್ಯ, ಅಂಗೈ ಇರೋದು ಕಾಗದದ ಕೆಲಸ ಮಾಡೋದಕ್ಕಲ್ಲ- ನೀನು ನಾಲ್ಕು ಕಾಲಲ್ಲಿ ನಡೆಯುವ ಪ್ರಾಣಿಯಲ್ಲ ಅಂತ ತೋರೋದಕ್ಕೆ, ಸ್ಪರ್ಶ, ಹಿಡಿತ, ನೃತ್ಯ, ನಮಸ್ಕಾರ ಇತ್ಯಾದಿಗೆ...." ಅಂತ ಶುರುಮಾಡಿದೆ.

ಆತ ನಕ್ಕು ಅಂಗೈ ತೋರಿಸಿ, "ನಾನು ಯಾವಾಗಲೂ ಫೋನ್ ನಂಬರ್ ಬರೆದುಕೊಳ್ಳೋದು ಇಲ್ಲೇ" ಅಂದ. ಆಗಲೇ ಅಲ್ಲಿ ಬೆಳಗ್ಗೆಯಿಂದ ಬರೆದುಕೊಂಡಿದ್ದ ಒಂದೆರಡು ನಂಬರುಗಳು ಮಾಸತೊಡಗಿದ್ದವು.

ಅವನನ್ನು ವಿವರವಾಗಿ ನೋಡಿದೆ. ಆತನ ಮೀಸೆ, ಅವನ ಅಂಗೈ ತೋರಿದ ರೀತಿ, ಸ್ವಲ್ಪ ಊದಿಕೊಂಡಿದ್ದ ಕಣ್ಣು-ಅವುಗಳಲ್ಲಿ ಒಂದು ಚಿಕ್ಕದು, ಕೆಂಪು ಪಟ್ಟೆಯ ಶರ್ಟ್-ಸ್ವಲ್ಪವೇ ಊದಿಕೊಳ್ಳತೊಡಗಿದ್ದ ಹೊಟ್ಟೆ. "ಈ ಶರ್ಟ್ ನಿನಗೆ ತುಂಬ ಪ್ರಿಯವಾದದ್ದ?" ಅಂದೆ. ಆದರೆ ನನ್ನ ಮನಸ್ಸಿನಲ್ಲಿದ್ದದ್ದು, "ಹೊಸ ಶರ್ಟ್ ಹಾಕಿಕೊಂಡಾಗಲೂ ಅದು ಮಾಸಿದಂತೆ ಇರುತ್ತಲ್ಲ ಯಾಕೆ?" ಆತ ಏನು ತೊಟ್ಟರೂ ಮಾಸಿದಂತಿರುತ್ತೆ, ಬಟ್ಟೆ ಒಬ್ಬನ ಮನಃಸ್ಥಿತಿಯನ್ನು ಬಿಂಬಿಸುತ್ತವೆಯೆ?

ಯಾಕೆ ಹೇಳುತ್ತಿದ್ದೇನೆಂದರೆ ಅವನು ಹಸ್ತದ ಮೇಲೆ ಫೋನ್ ನಂಬರ್ ಬರೆದುಕೊಳ್ಳುವುದರಿಂದ ಹಿಡಿದು ಆತನ ಮಾತಿನ ಶೈಲಿ, ಕೈ ಅಲ್ಲಾಡಿಸುವ ರೀತಿ, ಬಟ್ಟೆ, ನಡೆದಾಡುವ ರೀತಿ... ಎಲ್ಲವನ್ನೂ ನಾವು ಮನಸ್ಸಿಟ್ಟು ಗಮನಿಸಿದರೆ ಮಾತ್ರ ನಮ್ಮ ಮನಸ್ಸು ಇಡೀ ಚಿತ್ರವನ್ನು ಸ್ವೀಕರಿಸುತ್ತದೆ. ಇಲ್ಲದಿದ್ದರೆ ನಾವು ನೋಡಿದಂತೆ ತಿಳಿದಿರುತ್ತೇವೆ, ಆದರೆ ನೋಡಿರುವುದಿಲ್ಲ, ಇದನ್ನು ವಿವರಿಸಲು ಒಂದು ಉದಾಹರಣೆ ಕೊಡುತ್ತೇನೆ. ನೀವು ನಿಮ್ಮ ಹತ್ತಾರು ಜನ ಗೆಳೆಯ, ಗೆಳತಿಯರೊಂದಿಗೆ ಒಂದು ಗ್ರೂಪ್ ಫೋಟೋ ತೆಗೆಸಿಕೊಂಡಿರುತ್ತೀರೆನ್ನಿ. ಆ ಫೋಟೋ ಅಚ್ಚಾಗಿ ಸ್ಟುಡಿಯೋದಿಂದ ಬಂದೊಡನೆ ನೋಡುವುದು ನಿಮ್ಮ ಫೋಟೋವನ್ನೇ-ಇತರರು ಅಲ್ಲಿ ಹೆಸರಿಗೆ ಮಾತ್ರ. ಇತರರನ್ನು ನೋಡಿದರೂ ಅದು ನಿಮ್ಮೊಂದಿಗೆ ಹೋಲಿಸಿಕೊಳ್ಳುವುದಕ್ಕೆ ಮಾತ್ರ. ಹೀಗಾಗಿ ಹೊರಗಿನದನ್ನು ಗಮನಿಸುವ ಶಕ್ತಿ ಕಡಿಮೆಯಾಗುತ್ತ ಹೋಗುತ್ತದೆ. ಭಾರತದಲ್ಲಿ ಚಿತ್ರಕಲೆ, ಸಾಹಿತ್ಯಕಲೆ ದುರ್ಬಲವಾಗಿರುವುದೇ ಇದಕ್ಕೆ. ಒಂದು ಶಕ್ತಿಹೀನ ಸಮಾಜ ಗಮನಿಸುವ ಶಕ್ತಿಯನ್ನು ಕಳೆದುಕೊಂಡಿರುತ್ತದೆ. ಇದಕ್ಕೆ ವಿರುದ್ಧವಾದ ಗುಣ ನೋಡಿ. ಸಮೂಹ ಫೋಟೋ ಬಂದೊಡನೆ ತನ್ನನ್ನು ಬಿಟ್ಟು ಬೇರೆಯವರನ್ನು ಮಾತ್ರ ನೋಡುವವನಿದ್ದರೆ ಆತ ಕೂಡ ಆರೋಗ್ಯವಂತನಲ್ಲ. ತನ್ನ ಮುಖದ ಬಗ್ಗೆ ಅಸಹ್ಯ ಆತಂಕ ಅಷ್ಟೊಂದಿದ್ದರೆ ಆತ ಬದುಕಿರುವುದೂ ಸಾಧ್ಯವಿಲ್ಲ, ಇಂಥವನನ್ನು ಆತ್ಮಗೌರವದ ವ್ಯಕ್ತಿಯನ್ನಾಗಿಸುವುದು ಕಷ್ಟ.

ಒಂದು ಸಂಕೋಚದ, ಮುಖೇಡಿಯಾದ ಸಮಾಜ ಬಾಹ್ಯವನ್ನು ಗಮನಿಸುವ ವ್ಯಕ್ತಿಗಳನ್ನು ಸೃಷ್ಟಿಸುತ್ತದೆ ಎಂಬುದು ನನ್ನ ಊಹೆ. ಕೆಲವರು ಹೇಳುವಂತೆ, ನೆರೆಮನೆಗೆ ಬಂದವನು, ಅವನು ಹೇಗಿದ್ದ, ಹೇಗೆ ಬಾಗಿಲು ತಟ್ಟಿದ, ಎಷ್ಟು ಎತ್ತರವಿದ್ದ, ಯಾವ ಬಣ್ಣದ ಬಟ್ಟೆ ಹಾಕಿದ್ದ ಎಲ್ಲವನ್ನೂ ಇಂಗ್ಲಿಷ್ ತರುಣಿಯೊಬ್ಬಳು ಗಮನಿಸಿರುತ್ತಾಳಂತೆ. ಶೆರ್ಲಾಕ್ ಹೋಮ್ಸ್ ಇಂಗ್ಲಿಷ್‌ನವನು ತಾನೆ?



ಇನ್ನೊಂದು ಫೆಬ್ರವರಿ 6...

ಬಿಡಿ ಚಿತ್ರಗಳು

• ಈಶ

ಸೋದರ ಸಾಕೇತನ ಕೊಲೆಯಾದಿ ಇಲ್ಲಿಗೆ ನಾಲ್ಕು ವರ್ಷ ಆಯಿತು. ತನ್ನ ಸಂಗಾತಿಗಳ ಪಾಲಿಗೆ ಸಾಕ್ಷಿಯಾಗಿರುತ್ತಾ ಕರ್ನಾಟಕದ ಜನರಿಗೆ ಪ್ರೇಮ್ ಆಗಿ ಪರಿಚಯವಾಗಿದ್ದ ಸಾಕೇತ್‌ನ ದೇಹ ಈಗ ನುಸಿಹೋಗಿದೆ ಬಿಡಿ. ಆದರೆ ಆತ ಬದುಕಿದ ನಲವತ್ತೈದು ವರ್ಷಗಳ ಬದುಕನ್ನು ಒಮ್ಮೆ ನೋಡಿದರೆ ಆಶ್ಚರ್ಯ, ಬೆರಗುಂಟಾಗುತ್ತದೆ. ಅದೇರೀತಿ ಸಾಕೇತ್‌ನ ದಾರುಣ ಸಾವು ಸಾವಿರಾರು ಜನರಲ್ಲಿ ಸಂಕಟ ಉಂಟು ಮಾಡಿದ್ದೂ ಹೌದು. ಆದರೆ ಅಂತಾದ್ದನ್ನು ಹೇಳಿಕೊಳ್ಳುವಷ್ಟು Democratic Space ನಮ್ಮಲ್ಲಿನ್ನೂ ಇಲ್ಲ. ಆ ಘಟನೆಯ ಬೆನ್ನ ಹಿಂದೆಯೇ ಸಾಕೇತ್‌ನ ಹತ್ಯೆಯ ಸೇಡು ತೀರಿಸುತ್ತಿದ್ದೇವೆಂದು ಆಂಧ್ರ ನಕ್ಸಲರು ಪಾವಗಡದಲ್ಲಿ ಏಳು ಪೊಲೀಸರನ್ನು ಕೊಂದರು. ಇದೊಂದು ರೀತಿ ಮೃತ ಸಾಕಿಯ ಬಗ್ಗೆ ಜನರ ಮನಸ್ಸಿನಲ್ಲಿ ಬೆಳೆಯುತ್ತಿದ್ದ ಕುತೂಹಲ, ಸಹಾನುಭೂತಿಯನ್ನೂ ಹೊಸಕಿ ಹಾಕಿದ ಘಟನೆ. ಆ ಮೂಲಕ ಮರುಜನ್ಮ ಪಡೆಯಬಹುದಾಗಿದ್ದ ಸಾಕೇತನ ಇಮೇಜಿನ ಹತ್ಯೆಯೂ ಆಗಿತ್ತು ಅದು.

2005ರ ಫೆಬ್ರವರಿ 6ರಿಂದ ಮಾರ್ಚ್ 8ರವರೆಗೆ ಆ ಸರಣಿ ಘಟನೆಗಳ ಬಿರುಗಾಳಿಯಲ್ಲಿ ನಮ್ಮ ಪತ್ರಿಕಾ ತಂಡವೂ ಸಿಕ್ಕು ತತ್ತರಿಸಿತ್ತು. ಆಮೇಲೆ ಬಿಡಿ, ಎದೆಗುಂದದ ನಾವು ಕೇವಲ ಇಪ್ಪತ್ತು ದಿನದ ತಯಾರಿಯಲ್ಲೇ ಈ ನಿಮ್ಮ 'ಲಂಕೇಶ್' ಶುರುಮಾಡಿ ಈಗ ದೃಢವಾಗಿ ನಿಂತಿದ್ದೇವೆ.




ತಾಯಿ ರಾಜಲಕ್ಷ್ಮಿಯವರೊಂದಿಗೆ ಸಾಕೇತ್

ಆಫೀಸ್‌ನಲ್ಲಿ ಯಾವಾಗಲಾದರೊಮ್ಮೆ ಇದನ್ನೆಲ್ಲಾ ಮಾತನಾಡುತ್ತಿರುವಾಗ ನಾನು ನೆನೆದುಕೊಳ್ಳುವುದು ಒಂದು ಫೋನ್ ಕರೆಯನ್ನು, ನಮ್ಮ ಬದುಕಿನಲ್ಲಿ ಅನಿರೀಕ್ಷಿತ ತಿರುವು ತಂದ ಕರೆ ಅದಾಗಿತ್ತು.

ಬಹುಶಃ ಅದು 2004ರ ಜೂನ್ ಮೊದಲ ವಾರ. ಸಂಜೆ 8ರ ಸುಮಾರಿಗೆ ಟೆಲಿಫೋನ್ ರಿಂಗಾಯಿತು. ಅತ್ತ ಕಡೆಯಿಂದ ಮಾತನಾಡಿದ ವ್ಯಕ್ತಿ ಒಂದೆರಡು ವಿವರ ಕೇಳಿ ನಂತರ 'ಮಲೆನಾಡಿಗೆ ಇಬ್ಬರು ಪತ್ರಕರ್ತರು ಬರಲಾಗುತ್ತದೆಯೇ?' ಎಂದ.


ಅದು ನಕ್ಸಲರ ಆಹ್ವಾನ.

ಕರ್ನಾಟಕದ ಮಾವೋವಾದಿ ನಕ್ಸಲರು ಕಾಡಿನಲ್ಲೇ ಒಂದು ಪತ್ರಿಕಾಗೋಷ್ಠಿ ನಡೆಸುತ್ತಿರುವುದಾಗಿಯೂ ಅದಕ್ಕೆ ಹತ್ತು ಹನ್ನೆರಡು ಆಯ್ದ ಪತ್ರಕರ್ತರನ್ನು ಆಹ್ವಾನಿಸುತ್ತಿರುವುದಾಗಿಯೂ ಆತ ವಿವರಿಸಿದ. ಅವತ್ತಿಗೆ ಕರ್ನಾಟಕದ ಮೀಡಿಯಾಗೆ ಅದೊಂದು ಸೆನ್ಸೇಷನಲ್ ಸುದ್ದಿಯಾಗುವುದು ಖಚಿತವಿತ್ತು. ಜೂನ್ 17ಕ್ಕೆ ಹಾಗೆ ಅರೆಂಜ್ ಆದ ಗೋಷ್ಠಿಯಲ್ಲಿ ಕರ್ನಾಟಕದ ಬಹುಚರ್ಚಿತ



ಕ್ರಾಂತಿಕಾರಿ ನಕ್ಸಲ್ ನಾಯಕ ಸಾಕೇತ್ ಯಾನೆ ಪ್ರೇಮ್ ಇರುತ್ತಾನೆಂಬ ಕಲ್ಪನೆಯೇ ನಮಗಿರಲಿಲ್ಲ, ಅಷ್ಟು ಹೊತ್ತಿಗೆ ಆತ ಆಂಧ್ರದ ದಂಡಕಾರಣ್ಯ, ಜಾರ್ಖಂಡ್, ಅಸ್ಸಾಂ.. ಹೀಗೆ ಎಲ್ಲೆಲ್ಲೋ ಇರುವುದಾಗಿ ಪೊಲೀಸರು ಕಲ್ಪಿಸಿಕೊಂಡಿದ್ದರು. ಬಹುಶಃ ಇಪ್ಪತ್ತು ವರ್ಷಗಳ ಸರ್ಚ್ ಅದು. ಆ ವಿಚಾರವೂ ನಮಗೆ ಗೊತ್ತಾಗಿದ್ದು ಸಾಕೇತ್ ಹತ್ಯೆಯಾದ ನಂತರವೇ.

ಹಾಗೆ ಏರ್ಪಾಡಾಗಿದ್ದ ನಕ್ಸಲರ ಸಂದರ್ಶನಕ್ಕೆ ರಾಜ್ಯದ ಯಾವ್ಯಾವುದೋ ಭಾಗಗಳಿಂದ ಪತ್ರಕರ್ತರು ಹೊರಟರು. 'ಲಂಕೇಶ್' ಪತ್ರಿಕಾ ಬಳಗದಿಂದ ನಾನೂ, ಗೌರಿ ಹೋಗುವುದೆಂದು ತೀರ್ಮಾನವಾಯಿತು. ಇಂತಾ ತಾರೀಕು ಇಂತಲ್ಲಿಂದ ಹೊರಡಿ, ಇಂತಲ್ಲಿಗೆ ಬಂದಿಳಿಯಿರಿ... ಎಂಬ ಅಗೋಚರ ವ್ಯಕ್ತಿಯ ಸೂಚನೆಯಾನುಸಾರ ಜೂನ್ 16ರಂದು ಶುರುವಾದ ನಮ್ಮ ಪ್ರಯಾಣ ಜೂನ್ 17ರ ಮಧ್ಯಾಹ್ನದ ವೇಳೆಗೆ ಬೆಂಗಳೂರಿನಿಂದ ಮುನ್ನೂರು ಕಿ.ಮೀ ದೂರದ ಮಲೆನಾಡಿನ ದಟ್ಟ ಕಾಡಿನ, ನಾವು ಕಂಡು ಕೇಳಿರದಿದ್ದ ಒಂದು ತಾವಿನೆಡೆಗೆ ಕರೆದೊಯ್ದು ತಲುಪಿಸಿತ್ತು.



ಆಗ ತಾನೇ ಮುಂಗಾರು ಮಳೆ ಭರ್ಜರಿಯಾಗೇ ಚಾಲೂ ಆಗಿತ್ತು. ಸುರಿವ ಮಳೆಯಲ್ಲೂ ಬೆವರು ಸುರಿಸುತ್ತಾ, ಬೆಟ್ಟ-ಗುಡ್ಡ ಹತ್ತಿಳಿಯುತ್ತಾ, ಚಿಕ್ಕ ಪುಟ್ಟ ತೊರೆ, ಹಳ್ಳಗಳನ್ನು ದಾಟುತ್ತಾ ಮುಂದಡಿಯಿಡುತ್ತಿರುವಾಗಲೇ ನಮ್ಮ ತಂಡದ ಸಂಖ್ಯೆ ಡಜನ್ ತಲುಪಿತ್ತು. ಕೈಲಿ ಛತ್ರಿ ಹಿಡಿದಿದ್ದ ಮಧ್ಯ ವಯಸ್ಸಿನ ಪಂಚೆದಾರಿ ರೈತನೊಬ್ಬ ನಮ್ಮ ಪೈಲೆಟ್ ಆಗಿದ್ದ.

ಅಷ್ಟರಲ್ಲಿ ಮಲೆನಾಡಿನಲ್ಲಿ ನಕ್ಸಲರ ದಳಗಳು ಕಾಣಿಸಿಕೊಂಡು ನಾಲ್ಕು ವರ್ಷಗಳಾಗಿದ್ದವೆಂದು ಕಾಣುತ್ತದೆ. ಉಡುಪಿಯ ಈದು ಬಳಿ ಕೊಪ್ಪದ ಪಾರ್ವತಿ ಹಾಗೂ ಸಿಂಧನೂರಿನ ಹಾಜಿಮಾ ಪೊಲೀಸರ ಎನ್‌ಕೌಂಟರಿನಲ್ಲಿ ಪ್ರಾಣ ಕಳೆಕೊಂಡಿದ್ದರು. ತಮ್ಮ ಗುರಿ-ಉದ್ದೇಶಗಳ ಬಗ್ಗೆ ನಕ್ಸಲರು ಕರಪತ್ರ, ಪುಸ್ತಕಗಳು ಈಮೇಲ್ ಮೂಲಕ ಪತ್ರಿಕಾ ಕಚೇರಿಗಳಿಗೆ ಮಾಹಿತಿ ಕೊಡುತ್ತಿದ್ದರು.

ಇವತ್ತಿನ ಪತ್ರಿಕಾಗೋಷ್ಠಿಯಲ್ಲಿ ವಿಶೇಷ ಏನಿರುತ್ತೆ ಎಂದು ಯೋಚಿಸುತ್ತಾ ದಟ್ಟ ಹಸಿರು ಕಾಡಿನ ಮಧ್ಯೆ ಒಂದು ತೊರೆ ಹಾದು ದಡ ಹತ್ತುತ್ತಿರುವಾಗಲೇ ನಮಗೆ ಬಂದೂಕುಧಾರಿ ಗೆರಿಲ್ಲಾಗಳಿಬ್ಬರು ಕಾಣಿಸಿದರು. ಆಲೀವ್ ಬಣ್ಣದ ಯೂನಿಫಾರ್ಮ್‌ನಲ್ಲಿದ್ದ ಅವರು ಬರಿದೇ ನಕ್ಕು 'ಮುಂದಕ್ಕೆ' ಎಂಬಂತೆ ಕೈ ಸನ್ನೆ ಮಾಡಿದರು.


ಸೆಂಟ್ರಿ ಡ್ಯೂಟಿಯಲ್ಲಿದ್ದ ಜನ ಅವರು. ಅವರನ್ನು ದಾಟಿ ಮುಂದೆ ಹೋಗುತ್ತಿರುವಾಗಲೇ ದಿಢೀರನೇ ಪ್ರತ್ಯಕ್ಷನಾದ ತರುಣ ಗೆರಿಲ್ಲಾ ಒಬ್ಬ 'ವೆಲ್ ಕಂ...' ಎಂದು ಸ್ವಾಗತಿಸಿ ನಸುನಕ್ಕು 'ಸುಸ್ವಾಯಿತಾ' ಎಂದೆಲ್ಲಾ ವಿಚಾರಿಸುತ್ತಾ ಮುಂದಡಿಯಿಟ್ಟ. ನಾವು ಆ ಸ್ಥಳ ತಲುಪಿದ್ದೆವು ಮತ್ತು ಆ ವ್ಯಕ್ತಿ ಪ್ರೇಮ್ ಆಗಿದ್ದ. ನಂತರ ಸುಮಾರು ಎರಡೂವರೆ ಗಂಟೆಕಾಲ ನಡೆದ ಪ್ರೇಮ್ ಸಂದರ್ಶನ, ಪತ್ರಿಕಾ ಗೋಷ್ಠಿಯ ವಿವರಗಳನ್ನು ಅದೇ ವಾರ ಪ್ರಕಟಿಸಿದೆವು. ಅತ್ಯಂತ ಮೃದು ಮಾತಿನ ಆದರೆ ಖಚಿತ ನಿಲುವಿನ ಪ್ರೇಮ್ ಕನ್ನಡ-ಇಂಗ್ಲಿಸ್ ಎರಡನ್ನೂ ಸೊಗಸಾಗಿ ಮಾತನಾಡುತ್ತಿದ್ದ. ಅದೊಂದು ರಾಜಕೀಯ ತರಗತಿಯೋ ಎಂಬಂತೆ ಮಲೆನಾಡಿನ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳಿಂದ ಶುರುಮಾಡಿ ಕರ್ನಾಟಕ, ಇಂಡಿಯಾ, ಅಮೆರಿಕಾ, ರಷ್ಯಾ ಚೀನಾದವರೆಗೆ ನಮ್ಮನ್ನು ಸುತ್ತಾಡಿಸಿ ವಿವರಿಸಿದ. ಆತನ ಮಾತಿನಲ್ಲಿ ಹಿಂಸೆ, ಆವೇಶ ಇರಲಿಲ್ಲ, ಆದರೆ ಅವರ ಹಾದಿಯಲ್ಲಿ ಹಿಂಸೆಯ ಮುಖಾಮುಖಿಯಾಗುವುದಿತ್ತಷ್ಟೇ. ಮಾತಿನ ನಡುವೆ ಒಮ್ಮೆ ಮೋಣಕಾಲೂರಿ ಕುಳಿತಿದ್ದ ಪ್ರೇಮ್ ತನ್ನ ಸೊಂಟದಲ್ಲಿ ನೇತಾಡುತ್ತಿದ್ದ ಪಿಸ್ತೂಲ್ ಹೊರತೆಗೆದು ಅಂಗೈನಲ್ಲಿರಿಸಿಕೊಂಡು ಪ್ರದರ್ಶಿಸಿದ. ಸ್ವತಃ ಗೆರಿಲ್ಲಾ ಯೂನಿಫಾರಂ, ಕ್ಯಾಪ್‌ನಲ್ಲಿದ್ದರೂ ಆರಡಿ ಎತ್ತರದ ದೃಢದೇಹಿ ಪ್ರೇಮ್ ಕೈನಲ್ಲಿದ್ದ ಆ ಪಿಸ್ತೂಲ್ ನನಗವತ್ತು ಒಂದು ಹೂವಿನಂತೆ ಕಂಡಿತ್ತು. ತನ್ನ ಇಪ್ಪತ್ತು ವರ್ಷಗಳ ನಕ್ಸಲ್ ಬದುಕಿನಲ್ಲಿ ಪ್ರೇಮ್ ಯಾನೆ ಸಾಕೇತ ಯಾರನ್ನೂ ಕೈಯಾರೆ ಕೊಂದಿರಲಿಲ್ಲವೆಂದು ನಂತರ ಸಾಕೇತನ ಸಂಗಾತಿಗಳೇ ಹೇಳಿಕೊಂಡರು. ಆದರೆ ಬಿಡಿ, ಸಾಕೇತ್‌ನಂತವರ ಶಿಕಾರಿಗೆ ಹೊರಡುವ ಸರ್ಕಾರಿ ಪಡೆಗಳಿಗೆ ಅಂತಹ ಮಾನದಂಡಗಳಿರುವುದಿಲ್ಲವಲ್ಲ.

ಅವತ್ತಿನ ಇಂಟರ್‌ವ್ಯೂ ಮುಗಿಸಿ ಬಂದು ಬರೆದಾದ ನಂತರ ನಮ್ಮ ಕೆಲಸದ ಭರಾಟೆಯಲ್ಲಿ ಮುಳುಗಿ ಹೋದರೂ ನನಗೆ ಸಾಕೇತ್ ಬಗೆಗಿನ ಕುತೂಹಲ ತಣಿಯಲಿಲ್ಲ, ಈತ ಯಾರು, ಎಲ್ಲಿಂದ ಬಂದ, ಇಷ್ಟು ಜ್ಞಾನ ಹೇಗೆ ಸಂಪಾದಿಸಿದ. ಈತನ ಗುರು ಯಾರು, ಶಿಷ್ಯಪಡೆ ಎಲ್ಲೆಲ್ಲಿದೆಯೆಂಬ ಪತ್ರಕರ್ತನ ಸಹಜ ಕುತೂಹಲ ಅದು. ಆಗಲೇ ಸಾಕೇತ ತನ್ನ Making History ಕೃತಿಯ ಎರಡು ಸಂಪುಟಗಳನ್ನು ವಿಮರ್ಶೆಗಾಗಿ ಎಲ್ಲಾ ಪತ್ರಿಕೆಗಳಿಗೂ ಕಳುಹಿಸಿಕೊಟ್ಟದ್ದು. ನಮ್ಮ ಕಚೇರಿಗೂ ಆ ಪುಸ್ತಕ ಬಂತು.

ರಾಜೇಶ್ವರಿ ಎಂಬ ಹೆಣ್ಣುಮಗಳ ವಿಚಾರ ಪ್ರಸ್ತಾಪ ಬರುವುದು ಅಲ್ಲಿಯೇ. ಆಕೆ ಸಾಕೇತನ ಜೀವನ ಸಂಗಾತಿ. ಪತ್ರಕರ್ತೆಯಾಗಿದ್ದಾಕೆ. ಕರ್ನಾಟಕ ಇತಿಹಾಸವನ್ನು ಸಮಗ್ರವಾಗಿ ಶೋಧಿಸಿ ಆದಿಮ ಕಾಲದಿಂದ ವ್ಯವಸಾಯ ಸಮಾಜದವರೆಗಿನ, ರಾಜರುಗಳ ಸಾಮ್ರಾಜ್ಯಗಳ ಹುಟ್ಟು-ಬೆಳವಣಿಗೆ-ಪತನಗಳ ಬೃಹತ್ ಕಥನ ಅದು. ಹಾಗಂತ ಆ ಪುಸ್ತಕ ಬೇರೆ ಪುಸ್ತಕಗಳಂತೆ ಕೇವಲ ರಾಜರುಗಳ ಸಾಹಸಗಾಥೆ, ನಡೆಸಿದ ಯುದ್ಧ ನಿರ್ಮಿಸಿದ ದೇವಾಲಯಗಳ ವಿವರ ನೀಡುವಂತದ್ದಲ್ಲ. ಅದೆಲ್ಲದರ ಹಿಂದೆ ಇದ್ದ, ಚಾಲಕ ಶಕ್ತಿಯಾಗಿದ್ದ ಜನರ ಬದುಕಿನ, ಸಾಮಾಜಿಕ ಶಕ್ತಿಗಳ, ಆರ್ಥಿಕ ಚಲನೆಯ ಒಂದು ಮಹಾನ್ ಸಂಘರ್ಷ ಕಥನ ಅದು.

ಈ ಪುಸ್ತಕಕ್ಕಾಗಿ ಸರಿಸುಮಾರು 20 ವರ್ಷ ಶ್ರದ್ಧೆಯಿಂದ ದುಡಿದಿದ್ದ ಸಾಕೇತ್. ಇತಿಹಾಸ ದಾಖಲಿಸಲು ಕೇವಲ ಪೆನ್ ಮಾತ್ರವಲ್ಲ, ಹೊಸ ಇತಿಹಾಸ ನಿರ್ಮಿಸಲು ಗನ್ ಅನ್ನೂ ಕೈಗೆತ್ತಿಕೊಂಡು ಹೊರಟಿದ್ದ.

ನಾವು ಸಂದರ್ಶನ ಮಾಡಿ ಬಂದ ಎಂಟೇ ತಿಂಗಳಲ್ಲಿ ಸಾಕೇತ್ ಜೀವನ ಮುಗಿದೇ ಹೋಯಿತು. 2005ರ ಫೆಬ್ರವರಿ 6ರ ಬೆಳಗಿನ ಜಾವ ಮೆಣಸಿನ ಹಾಡ್ಯದ ಬಳಿ ಸಾಕೇತನಿಗೆ ಸಾವು ಕಾದಿತ್ತು. ಅದರ ವಿವರಗಳಿಲ್ಲಿ ಅನಗತ್ಯ. ಆದರೆ ಒಂದು ಮಾತನ್ನಂತೂ ಇಲ್ಲಿ ಹೇಳಲೇಬೇಕು. ಸಾಯುವ ಕೆಲವೇ ಕ್ಷಣಗಳ ಮೊದಲು ತನ್ನ ಸಂಗಾತಿಗಳೊಂದಿಗೆ ವಾಕಿಟಾಕಿಯಲ್ಲಿ ಮಾತನಾಡಿದ ಸಾಕೇತ 'ವಿದಾಯ ಗೆಳೆಯರೆ, ರೆಡ್ ಸೆಲ್ಯೂಟ್' ಎಂದರೆಂದು ನಕ್ಸಲ್ ವೆಬ್‌ಸೈಟ್‌ಗಳಲ್ಲಿ ಪ್ರಕಟವಾಯಿತು.





ನಗರ ಕೋಟೆಯಲ್ಲಿ ಸಾಕೇತ್ ತೆಗೆದ ರಾಜೇಶ್ವರಿಯ ಫೋಟೋ

ಇದು ಆತನಿಗಿದ್ದ ಇಚ್ಛಾಶಕ್ತಿಗೆ ಸಾಕ್ಷಿ. ಆದರೆ ಹಿಂಸೆ-ಪ್ರತಿಹಿಂಸೆಯ ಆ ಹಾದಿಗೆ ಹೊರತಾದ ಒಂದು ಚುಂಬಕ ಆಕರ್ಷಕ ಶಕ್ತಿ ಹಾಗೂ ಮೃದು ಗುಣ ಸಾಕೇತನಿಗಿತ್ತು ಎನ್ನಲು ಮೇಕಿಂಗ್ ಹಿಸ್ಟರಿ ಪುಸ್ತಕದ ಮುನ್ನುಡಿಯ ಕೆಲ ಮಾತುಗಳನ್ನು ನೋಡಬೇಕು. ತನ್ನ ಜೀವನ ಸಂಗಾತಿಯ ಬಗ್ಗೆ ಹೇಳುತ್ತಾ ಸಾಕಿ "ಈ ಪುಸ್ತಕ ಸಾಧ್ಯವಾಗಿದ್ದೇ ರಾಜಿಯಿಂದ" ಎನ್ನುತ್ತಾ ಆಕೆಯ ಜ್ಞಾನ ದಾಹ, ಓದು, ಕಂಪ್ಯೂಟರ್ ಕುಶಲತೆಗಳನ್ನು ವಿವರಿಸಿ "She had graduated as a DTP beautician" ಎನ್ನುತ್ತಾನೆ.

ಈ ಮಾತಿನಲ್ಲಿರುವ ಮೃದುತ್ವ ಹಾಗೂ ಕಾವ್ಯಗುಣ ನೋಡಿ. ನಾವು ಡಿಟಿಪಿ ಆಪರೇಟರ್, ಡಿಸೈನರ್ ಅನ್ನುವುದನ್ನು ಸಾಕಿ ಡಿಟಿಪಿ ಬ್ಯೂಟಿಷಿಯನ್ ಎಂದಿದ್ದಾನೆ.

ಸಾಕೇತನೊಂದಿಗೆ ದಶಕಕಾಲ ಭೂಗತ ಜೀವನ ನಡೆಸಿದ ರಾಜೇಶ್ವರಿಯನ್ನು 2001ರ ಮಾರ್ಚ್‌ನಲ್ಲಿ ಆಂಧ್ರ ಪೊಲೀಸರು ಕೊಲೆ ಮಾಡಿದರು. ಅಲ್ಲಿನ ಗ್ರಾಮೀಣ ಬದುಕಿನ ಸಂಘರ್ಷದ ಬಗ್ಗೆ ಅಧ್ಯಯನ ನಡೆಸಲು ಹೋಗಿದ್ದ ರಾಜೇಶ್ವರಿ ವಿಶಾಖಪಟ್ಟಣಂ ಕಾಡಿನಲ್ಲಿ ಪೊಲೀಸರ ಕೈಗೆ ಸಿಕ್ಕು ಹತರಾದರು. ಆಕೆಯ ಕೊನೆಯ ಕ್ಷಣಗಳನ್ನು ಕಣ್ಣಾರ ಕಂಡ ಇಬ್ಬರು ಆದಿವಾಸಿ ಮಕ್ಕಳ ವರದಿ ತೀರಾ ದಾರುಣವಾಗಿದೆ. ನಿರಾಯುಧಳಾಗಿದ್ದ ರಾಜೇಶ್ವರಿಯ ತಲೆಯ ಹಿಂಭಾಗಕ್ಕೆ ಗುಂಡು ಹಾರಿಸುವ ಮುನ್ನ ಪೊಲೀಸರು ಆಕೆಯ ಮೇಲೆ ಪೈಶಾಚಿಕ ದೇಹ ದೌರ್ಜನ್ಯ ನಡೆಸಿದ್ದರು. ಇದನ್ನು ದಾಖಲಿಸುವಾಗಲೂ ಸಂಯಮ ಕಳೆದುಕೊಳ್ಳದ ಸಾಕಿ "Bullets burnt through her brains, blood was on her cheek, Raji rested on the forest floor like a carefree child" ಎನ್ನುತ್ತಾನೆ.

ಪೊಲೀಸರ ಕ್ರೌರ್ಯ, ದೌರ್ಜನ್ಯಗಳೆದಿರು ಸಾವಿನ ಬಾಗಿಲಲ್ಲೂ ರಾಜೇಶ್ವರಿ ಬೆದರದೆ ನಿಂತಿದ್ದನ್ನು "Raji had passed her test as a revolutionry, she defied her assassins to live beyond them" ಎನ್ನುತ್ತಾನೆ.

ಬಹುಶಃ ಸ್ವತಃ ಸಾಕೇತನ ಕೊನೆಯ ಕ್ಷಣಗಳಿಗೂ ಇದೇ ಮಾತು ಅನ್ವಯಿಸಬಹುದು.

ಇಲ್ಲಿ ರಾಜೇಶ್ವರಿಯ ಒಂದು ಫೋಟೋ ಇದೆ. ಸಂಗೊಳ್ಳಿ ರಾಯಣ್ಣನ ಕುರಿತು ಅಧ್ಯಯನಕ್ಕೆಂದು ನಗರ ಕೋಟೆಗೆ ಈ ಜೋಡಿ ಹೋದಾಗ ಸಾಕೇತ್ ತೆಗೆದ ಫೋಟೋ ಇದು....

ಇದೊಂದು ದೃಶ್ಯ ಕಾವ್ಯದಂತಿಲ್ಲವೇ?

ಸಾಕೇತ್ ಸಾವಿನ ನಂತರ ನಾನೊಮ್ಮೆ ಮೈಸೂರಿಗೆ ಹೋದೆ. ಅಲ್ಲಿ ಅವರ ತಾಯಿ ರಾಜಲಕ್ಷ್ಮಿ ಇದ್ದರು. ಅಪರೂಪದ ಗುಣಗಳ, ವ್ಯಕ್ತಿತ್ವದ ಮಹಿಳೆ ಆಕೆ. ಅವರೊಂದಿಗೆ ಮಾತನಾಡಿದ್ದು, ಸಾಕೇತನ ಬಾಲ್ಯ, ಮೈಸೂರಿನ ಕಾಲೇಜು ದಿನಗಳು, ಗೆಳೆಯರು, ಸಾಕೇತ್‌ನ ಆಶ್ರಯದಲ್ಲೇ ಬೆಳೆದ ರಾಷ್ಟ್ರಪಿತನ ಹೆಸರಿನವನೊಬ್ಬನ ದುಷ್ಟತನ... ಸಾಕೇತನ ಪುಸ್ತಕ, ಕವನಗಳ ಬಗ್ಗೆ... ಇನ್ನೊಮ್ಮೆ ಹೇಳಬಹುದು.

ಸರ್ಕಾರಕ್ಕೆ ಬೇಡವೆಂದ ಮಾತ್ರಕ್ಕೆ ಅಂತಾ ವ್ಯಕ್ತಿಗಳು ಜನರಿಗೂ ಬೇಡ ಅಂತಾಗಬಾರದು. ಸಾಕೇತ್ ನಡೆದ ಹಾದಿಯಲ್ಲಿ ನಾವು ಸಮರ್ಥಿಸಿಕೊಳ್ಳಲಾಗದ ನಿಲುವುಗಳಿದ್ದವು ಸರಿ. ಆದರೆ ಆತನ ವ್ಯಕ್ತಿತ್ವದ ಪ್ರಭೆ, ಜ್ಞಾನ, ಚಿಂತನೆಗಳು ಅದನ್ನು ಮೀರಿದ್ದಾಗಿತ್ತು. ಸರ್ಕಾರ ಸಾಕೇತನ ತಲೆಗೆ ಗುಂಡು ಹೊಡೆಸಿದ್ದು ಬಹುಶಃ ಆ ಕಾರಣಕ್ಕೇ ಇರಬೇಕು.



ಬಾಲಕನೊಬ್ಬ ಎಂದೂ ತನ್ನ ಕುಂಡಿಯನ್ನು ನೋಡಿಕೊಂಡಿರಲಿಲ್ಲ. ಒಂದು ದಿನ ಶಾಲೆಯಲ್ಲಿ ಆತ ಕಿತಾಪತಿ ಮಾಡಿದ್ದಕ್ಕೆ ಟೀಚರ್ ಆತನ ಕುಂಡಿಗೆ ಎರಡು ಬಾರಿಸಿದಳು.

ಶಾಲೆಯಿಂದ ಮನೆಗೆ ಹಿಂದಿರುಗಿದ ಬಾಲಕ ಪ್ರಥಮ ಬಾರಿಗೆ ತನ್ನ ಕುಂಡಿಯನ್ನು ಕನ್ನಡಿಯಲ್ಲಿ ನೋಡಿಕೊಂಡು "ಥೂತ್, ನನ ಕುಂಡೀನಾ ಎರಡು ಪೀಸ್ ಮಾಡಿಬಟ್ಟಿದ್ದಾಳೆ" ಎಂದು ಕಣ್ಣೀರಿಟ್ಟ!

* * * * *

ಮುತಾಲಿಕ್ : ಹೋಗು ಯಡ್ಡಿ, ಶೋಭಾಗೆ ಮಂಗಳಸೂತ್ರ ಕಟ್ಟು!

ಶೋಭಾ : ಬೇಡ, ಬೇಡ, ನಾವು ಹೀಗೇ ಇರುತ್ತೇವೆ. ಅವರನ್ನ ಮದುವೆಯಾದ್ರೆ ಕೊಲೆ ಆಗುವ ಸಂಭವವಿದೆ!

* * * * *

ದೇವರಿಂದ ಪುರುಷನೊಬ್ಬನಿಗೆ ಎರಡು ವರಗಳು ಪ್ರಾಪ್ತಿಯಾದವು. ಆಗ ಆ ಪುರುಷ ಅತಿ ಶ್ರೇಷ್ಠ ಪಾನಕಕ್ಕೂ, ಅತಿ ಶ್ರೇಷ್ಠ ಮಹಿಳೆಗೂ ಬೇಡಿಕೆ ಸಲ್ಲಿಸಿದ.

ಮರುಕ್ಷಣ ಆ ಪುರುಷನ ಮುಂದೆ ಒಂದು ಬಿಸ್ಲೇರಿ ಬಾಟಲಿ ಮತ್ತು ಮದರ್ ತೆರೇಸಾ ಪ್ರತ್ಯಕ್ಷರಾದರು.

ನೀತಿ: ನಿಜವಾಗಲೂ ಏನು ಬೇಕೆಂದು ಸ್ಪಷ್ಟವಾಗಿ ಹೇಳಬೇಕು.

* * * * *

ಹುಡುಗಿಯೊಬ್ಬಳೊಂದಿಗೆ ಗಣಿತಶಾಸ್ತ್ರ ಕಲಿಯುವುದು ಹೇಗೆ? ತುಂಬಾ ಸಿಂಪಲ್, ಹಾಸಿಗೆಯೊಂದರಲ್ಲಿ 'ಕೂಡು', ಆಕೆಯ ವಸ್ತ್ರಗಳನ್ನು 'ತೆಗೆ', ಕಾಲುಗಳನ್ನು 'ವಿಭಾಗಿಸು', ನಿನ್ನ 'ವರ್ಗಮೂಲ'ವನ್ನು ಉಪಯೋಗಿಸು, ಆಕೆ ಜನಸಂಖ್ಯೆಯನ್ನು 'ಗುಣಿಸ'ದಿದ್ದರೆ ನೋಡು!



...ದ್ಯಾ ಮಾಡ್ಯಾರ- ...ಕ್ಕ ಮಾಡ್ಲಿಕ್ಕ!

...ಷ್ಟೆ ದೊಡ್ಡ ಸಿನಿಮಾಗಳಾದ 'ಜಂಗ್ಲಿ', ...ಜೊತೆ ಈ ವಾರ 'ಐಡ್ಯಾ ಮಾಡ್ಯಾರ ...ನ್ನೋ ಪುಟ್ಟ ಸಿನಿಮಾ (!) ಕ್ಷಮಿಸಿ, ...ಮಾ ಕೂಡಾ ಬಿಡುಗಡೆಯಾಗಿದೆ. ...ೋ ಪುಟ್ಟದಾದರೂ ಚಿತ್ರದ ನಿರ್ದೇಶಕ, ... ನಟ ಎಲ್ಲವೂ ಆಗಿರುವ ಯಶವಂತ ...ಡೆಯ 'ಐಡ್ಯಾ' ಮಾತ್ರ ದೊಡ್ಡದಾಗೇ

...ಪಾಂಡೆ ಹೇಳುವಂತೆ ಈ ಚಿತ್ರವನ್ನು ...ನಗಳ ಶೆಡ್ಯೂಲ್‌ನಲ್ಲಿ ಚಿತ್ರೀಕರಿಸಿದರಂತೆ. ...ಲಕ್ಷದ ಬಜೆಟ್ ಎಪ್ಪತ್ತರ ತನಕಾ ... ಸರದೇಶಪಾಂಡೆಯ ಈ ಮಾತನ್ನು ...ವಾಗಿಲ್ವೇ... ಸರದೇಶಪಾಂಡೆಯರಂಥ ... ಎಪ್ಪತ್ತು ಲಕ್ಷ ಖರ್ಚು ಮಾಡೋದು ...ಷ್ಟು ಮಾತೇ?' ಅಂತಾ ಒಂದೇ ಒಂದು ...ಮಾ ನೋಡಿ ಬಂದರೆ ಗೊತ್ತಾಗೋ ... ಬೇರೆ!

...ಣಿಕವಾಗಿ ಹೇಳಬೇಕೆಂದರೆ, ಈ ಚಿತ್ರಕ್ಕೆ ...ಂತ ಹೆಚ್ಚು ಖರ್ಚಾಗಿರುವ ಯಾವ ... ಇಲ್ಲ, ಸರದೇಶಪಾಂಡೆ ಮತ್ತು ಅವರ ...ಮಾಲತಿ ಸೇರಿ ಅಲ್ಲಿರುವ ಎಲ್ಲರೂ ...ನಟಿಯರೇ. ಪಾಂಡೆ ಸಾಹೇಬರು ರೊಕ್ಕ ...ವಿಚಾರದಾಗ ಶ್ಯಾನೆ ಶಿಸ್ತಿನ ಮಂದಿ ...ದಿಂದ ತಲಾ ಒಬ್ಬ ಕಲಾವಿದನಿಗೆ ದಿನಕ್ಕೆ ...ಸಾವಿರಕ್ಕಿಂತ ಹೆಚ್ಚಾಗಲು ನೋ ಚಾನ್ಸ್. ...ಎ. ಕ್ಯಾಮ್‌ನಲ್ಲೆ ಇಡೀ ಸಿನಿಮಾವನ್ನು ... ಒಂದು ಹಾಡು ಮತ್ತು ಎರಡು ದೃಶ್ಯ ...ಟ್‌ಡೋರ್. ಮಿಕ್ಕಿದ್ದೆಲ್ಲಾ ಹುಬ್ಬಳ್ಳಿಯ ...ದರಲ್ಲೇ ಫಿನಿಷ್!

... ನಾಟಕವನ್ನು ನೂರಾರು ಬಾರಿ ಪ್ರದರ್ಶನ ...ಸ್, ತೆಗೆದುಕೊಳ್ಳುವುದಕ್ಕಿಂದ ಯಾವ ...ನ ಅಗತ್ಯವೂ ಇಲ್ಲದೇ 'ಐಡ್ಯಾ ಮಾಡಿ' ...ಜೆಟ್‌ನಲ್ಲಿ ಮಾಡಿ ಮುಗಿಸಿರುವ ಸಿನಿಮಾ ...ಈ ಡ್ರಾಮಾವನ್ನು ರಿಯೀ ಕನ್ನಡದವರು ... ಒಳ್ಳೆಯ ರೇಟು ಕೊಟ್ಟು ಖರೀದಿಸಿದ್ದಾರೆ. ...ಳ 15 ಕೇಂದ್ರಗಳಲ್ಲಿ ಸಿನಿಮಾ ಬಿಡುಗಡೆ ... ಇಡೀ ಸಿನಿಮಾ ಉತ್ತರ ಕನ್ನಡ ಭಾಷೆ ...ರುವುದರಿಂದ ಕಡೇ ಪಕ್ಷ ಭಾಷಾಪ್ರೇಮಿ ...ಗಾಸಕ್ತರಾದರೂ ಸಿನಿಮಾ ನೋಡುತ್ತಾರೆ. ... ಈಗಾಗಲೇ ಲಾಭದಲ್ಲಿರುವ ಪಾಂಡೆಗೆ ...ಾತೇ ಇಲ್ಲ.

...ನ ಸಿನಿಮಾಕ್ಕೆ ಕೋಟಿಗಟ್ಟಲೆ ಖರ್ಚು ...ೀದಿಪಾಲಾಗುವ ನಿರ್ಮಾಪಕರ ಮಧ್ಯೆ ...ಂಡೆ ಮಸ್ತ್ ಮಸ್ತ್ 'ಐಡ್ಯಾ ಮಾಡ್ಯಾರ'! ...ಕ್ಕಲ್ಲ! ರೊಕ್ಕ ಮಾಡ್ಲಿಕ್ಕ!! ■

ಗುರುರಾಜ್ ಹೊಸಕೋಟೆ-ರಾಜ್‌ಗುರು

ಹಳೆ ಬೇರು ಹೊಸ 'ಚಿಗುರು'

ಕಲಾಕ್ಷೇತ್ರದಲ್ಲೋ, ಎಡಿಎ ರಂಗಮಂದಿರದಲ್ಲೋ ಯಾವುದೇ ನಾಟಕ ಅರೇಂಜ್ ಆಗಲಿ, ಅಲ್ಲಿ ಆ ಹುಡುಗ ಕಾಣದೇ ಇರಲು ಸಾಧ್ಯವಿಲ್ಲ. ಸ್ಟೇಜು ಜೋಡಿಸುತ್ತಾ, ರಿಹರ್ಸಲ್ ಮಾಡುತ್ತಾ, ಇರುವ ಎಲ್ಲ ವಾದ್ಯಗಳನ್ನೂ ನುಡಿಸುತ್ತಾ ಲವಲವಿಕೆಯಿಂದ ಓಡಾಡುವ ಆ ಹುಡುಗನ ಹೆಸರು ರಾಜ್‌ಗುರು. ಈತ ಬೇರೆ ಯಾರೂ ಅಲ್ಲ, ಹಿರಿಯ ಜಾನಪದ ಗಾಯಕ ಗುರುರಾಜ್ ಹೊಸಕೋಟೆಯವರ ಒಬ್ಬನೇ ಮಗ.

ತನ್ನದೇ ಶೈಲಿಯ ಗೀತೆಗಳನ್ನು ಹಾಡುತ್ತಾ ಖ್ಯಾತರಾದವರು ಗುರುರಾಜ್ ಹೊಸಕೋಟೆ. ಅದರಲ್ಲೂ 'ತಾಯಿ ಸತ್ತ ಮೇಲೆ ತವರಿಗೆ ಎಂದೂ ಹೋಗಬಾರದವ್ವ' ಎನ್ನುವ ಕಣ್ಣೀರಿನ ಕಥೆಯ ಹಾಡಂತೂ ಕೇಳುಗರ ಕಣ್ಣಲ್ಲಿ ಗಳಗಳ ನೀರು ತರಿಸುತ್ತಿತ್ತು. ಇಂದಿಗೂ ಗುರುರಾಜ್ ಹೊಸಕೋಟೆಯವರ ಕಾರ್ಯಕ್ರಮದಲ್ಲಿ ಆ ಹಾಡು ಇದ್ದೇ ಇರುತ್ತದೆ. ಇತ್ತೀಚೆಗೆ ತಾನೆ ಇದೇ ಹಾಡಿನ ಸಾರಾಂಶವನ್ನೇ ಮೂಲವಾಗಿರಿಸಿಕೊಂಡು 'ನಂದಾದೀಪ' ಎಂಬ ಚಿತ್ರ ಕೂಡಾ ಬಂದಿತ್ತು.


ಜಮಖಂಡಿಯಲ್ಲಿ ಹುಟ್ಟಿಬೆಳೆದು ಲಾವಣಿ ಹಾಡುಗಳನ್ನಾಡುತ್ತಾ ಕ್ರಮೇಣ ಗಾಯಕರಾಗಿ ಸಖತ್ ಪಾಪ್ಯುಲರ್ ಆದವರು ಗುರುರಾಜ್ ಹೊಸಕೋಟೆ. ಈ ಸಂದರ್ಭದಲ್ಲೇ ಬೆಂಗಳೂರಿಗೂ ಬಂದು ನೆಲೆಸಿದ ಅವರಿಗೆ ಸಿನಿಮಾದ ಬಗ್ಗೆ ಎಲ್ಲಿಲ್ಲದ ಮೋಹ ಶುರುವಾಯಿತು. ಆಗ 'ಅಲ್ಲೇ ಇರೋದು ನೋಡಿ' ಎಂಬ ಸಿನಿಮಾವನ್ನು ಸ್ವತಃ ಅವರೇ ನಿರ್ಮಿಸಿ, ನಿರ್ದೇಶಿಸಿ ನಟಿಸಿದರು. ಗಾಯಕ ಹೊಸಕೋಟೆಯುವರನ್ನು ಮನಸಾರೆ ಒಪ್ಪಿದ್ದ ಜನ ನಾಯಕನಾಗಿ ಯದ್ವಾತದ್ವಾ ತಿರಸ್ಕರಿಸಿದರು; ಅಫ್‌ಕೋರ್ಸ್ ನಾಯಕನಾಗುವ ಯಾವ ಪಾಸಿಟೀವ್ ಅಂಶಗಳೂ ಗುರುರಾಜ ಹೊಸಕೋಟೆ ಅವರಲ್ಲಿರಲಿಲ್ಲ ಅನ್ನೋದು ಬೇರೆ ಮಾತು. ಹೀಗಾಗಿ 'ಅಲ್ಲೇ ಇರೋದು ನೋಡಿ'ಯನ್ನು ಯಾರೂ ನೋಡಲಿಲ್ಲ, ಹಾಡಿಹಾಡಿ ದುಡಿದಿಟ್ಟಿದ್ದ ದುಡ್ಡನ್ನೂ ಕಳಕೊಂಡ ಹೊಸಕೋಟೆಯ ಹೆಗಲಿಗೆ ಮತ್ತಷ್ಟು ಸಾಲವೂ ಅಮರಿಕೊಂಡಿತ್ತು. ಆ ಸಂದರ್ಭದಲ್ಲೇ ಸುಂದರ್ ಕೃಷ್ಣ ಅರಸ್ ಅವರು ಹೊಸಕೋಟೆಯನ್ನು ಕರೆದು 'ಸಂಗ್ಯಾ ಬಾಳ್ಯಾ'ದಲ್ಲಿ ಅವಕಾಶ ಮಾಡಿಕೊಟ್ಟರು. ಜೊತೆಗೆ 'ಮಹಾಕ್ಷತ್ರಿಯ'ದಂಥ ಚಿತ್ರಗಳಲ್ಲೂ ನಟಿಸಿದರು... ಸಿನಿಮಾಗಳಿಂದ ಬರುತ್ತಿದ್ದ ಹಣವಾಗಲೀ, ಆರ್ಕೆಸ್ಟ್ರಾ ಕಾರ್ಯಕ್ರಮದಿಂದ ಬರುತ್ತಿದ್ದ ಸಣ್ಣಪುಟ್ಟ ದುಡ್ಡಾಗಲೀ ಮಾಡಿದ ಸಾಲಕ್ಕೇ ಜಮೆಯಾಗುತ್ತಿತ್ತು. ಮನೆಯಲ್ಲಿನ ಕಿತ್ತುತಿನ್ನುವ ಬಡತನದಲ್ಲೇ ಹೆಂಡತಿ ಮತ್ತು ಮೂರು ಮಕ್ಕಳನ್ನು ಸಾಕಬೇಕಾದ ಹೊರೆ.... ಚಿತ್ರರಂಗದಿಂದ ದೂರ ಸರಿದ ಹೊಸಕೋಟೆ ಹೊಟ್ಟೆಪಾಡಿಗಾಗಿ ಸಂಪೂರ್ಣವಾಗಿ ಆಧರಿಸಿದ್ದು ತಮ್ಮ ಹಳೆಯ ಆರ್ಕೆಸ್ಟ್ರಾ ವೃತ್ತಿಯನ್ನು.



ಚಿಗುರು ತಂಡ

ಹೊಸಕೋಟೆಯವರ ಕಡುಬಡತನದ ದಿನಗಳಲ್ಲಿ ತನ್ನ ನಾಲ್ಕನೇ ವಯಸ್ಸಿಗೇ ಸ್ಟೇಜು ಹತ್ತಿದ್ದು ಮಗ ರಾಜ್‌ಗುರು. ಈತ ಈವರೆಗೆ ತನ್ನ ತಂದೆಯೊಂದಿಗೆ 3500ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾನೆ.

ಆಗಿನ್ನೂ ಹಾಸ್ಯನಟ ಬಿರಾದಾರ್ ಸಿನಿಮಾಗಳಲ್ಲಿ ಕಾಣಿಸಿಕೊಂಡಿರಲಿಲ್ಲ, ಹೊಸಕೋಟೆಯವರೊಂದಿಗೆ ಆತ ಕೂಡಾ ಆರ್ಕೆಸ್ಟ್ರಾಗಳಲ್ಲಿ ಹಾಡುತ್ತಿದ್ದರು. ಇವರಿಬ್ಬರೊಂದಿಗೆ ಪುಟ್ಟ ಹುಡುಗ ರಾಜ್‌ಗುರು ಸಹಾ ಮೈಕು ಹಿಡಿದು ದನಿಗೂಡಿಸಿದ್ದ. ಅಷ್ಟು ಚಿಕ್ಕವಯಸ್ಸಿಗೇ ಕೈಲಿ ತಮಟೆ ಹಿಡಿದು ಅಪ್ಪನಿಗೆ ಸರಿಗಟ್ಟುವಂತೆ ಹಾಡುತ್ತಿದ್ದ ರಾಜ್‌ಗುರು ಎದುರಿಗಿದ್ದ ಜನರನ್ನು ಮಂತ್ರಮುಗ್ಧರನ್ನಾಗಿಸಿಬಿಡುತ್ತಿದ್ದ. ಕೆಲವೊಮ್ಮೆ ಹಾಡುತ್ತಾ ಹಾಡುತ್ತಾ ಹಾಗೇ ವೇದಿಕೆಯಲ್ಲೇ ನಿದ್ರಿಸಿಬಿಡುತ್ತಿದ್ದ ಎಂದರೆ ಆ ಪುಟ್ಟ ವಯಸ್ಸಿಗೇ ಈ ಹುಡುಗ ಎಷ್ಟು ಕಷ್ಟಪಟ್ಟಿರಬೇಕು ಊಹಿಸಿ.



ಗುರುರಾಜ್ ಹೊಸಕೋಟೆ

ತನಗೆ ಬುದ್ಧಿಬಂದಾಗಿನಿಂದಲೂ ತಾನೇ ದುಡಿದು, ತನ್ನ ವಿದ್ಯಾಭ್ಯಾಸಕ್ಕೂ ಅಪ್ಪನಿಗೆ ಹೊರೆಯಾಗದ ಈತನ ಬದುಕಿನಲ್ಲಿ ತಿರುವು ಎಂಬುದು ಸಿಕ್ಕಿದ್ದೇ ಕಾಲೇಜು ಮೆಟ್ಟಿಲೇರಿದ ಮೇಲೆ. ಆರಂಭದಲ್ಲಿ ಈತ ಓದುತ್ತಿದ್ದದ್ದು ವಿವಿಪುರಂ ಕಾಲೇಜಿನಲ್ಲಿ. ಈತನ ಅಸಾಧಾರಣ ಪ್ರತಿಭೆಯನ್ನು ಗಮನಿಸುತ್ತಿದ್ದ ಸುರಾನಾ ಕಾಲೇಜಿನ ಪ್ರಿನ್ಸಿಪಾಲರಾದ ಕೆ.ಇ. ರಾಧಾಕೃಷ್ಣ ಸ್ವತಃ ಅವರೇ ವಿವಿಪುರಂ ಕಾಲೇಜಿನ ಆಡಳಿತವರ್ಗದವರನ್ನು ವಿನಂತಿಸಿಕೊಂಡು, ತಮ್ಮ ಕಾಲೇಜಿನಲ್ಲಿ ಆತ ಓದುತ್ತಿದ್ದ ಕಾಂಬಿನೇಷನ್ ಇಲ್ಲದಿದ್ದರೂ ಆತನಿಗೋಸ್ಕರ ಹೊಸದಾಗಿ ಸೃಷ್ಟಿಸಿ ಅಡ್ಮೀಶನ್ ಮಾಡಿಸಿಕೊಂಡು ಮೂರು ವರ್ಷಗಳ ಕಾಲ ಉಚಿತ ವಿದ್ಯಾಭ್ಯಾಸ ನೀಡಿದರು.

ಹೇಳಿಕೇಳಿ ಸುರಾನಾ ಕಾಲೇಜು ಮತ್ತು ಅಲ್ಲಿನ ಮುಖ್ಯಸ್ಥರಾದ ಕೆ.ಇ. ರಾಧಾಕೃಷ್ಣ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದರಿಂದ ಸುರಾನಾದಿಂದ ಹೊರಬರುವ ಹೊತ್ತಿಗೆ ಈ ಹುಡುಗ ಸಂಪೂರ್ಣ ಕ್ರಿಯಾಶೀಲನಾಗಿ ರೂಪುಗೊಂಡಿದ್ದ. ಆ ಸಂದರ್ಭದಲ್ಲೇ ಕೃಷ್ಣಮೂರ್ತಿ ಕವತಾರರ 'ಕಂಸಾಯಣ', ನಟರಾಜ ಹೊನ್ನವಳ್ಳಿಯವರ 'ಮಾಮಾಮೋಶಿ' ನಾಟಕಗಳು ಸೇರಿದಂತೆ ಮಲ್ಲಿಕಾರ್ಜುನ ಮಹಾಮನೆ, ಪ್ರಮೋದ್ ಶಿಗ್ಗಾವ್‌ರಂಥ ರಂಗಕರ್ಮಿಗಳ ಕೈಗೆ ಸಿಕ್ಕು ಹಲವಾರು ರಂಗಪ್ರಯೋಗಗಳಲ್ಲಿ ಪಾಲ್ಗೊಂಡು ಈಗ ಸಾಂಸ್ಕೃತಿಕ ಜಗತ್ತಿನಲ್ಲಿ ಭದ್ರವಾಗಿ ನೆಲೆನಿಂತಿದ್ದಾನೆ.

ಜಾನಪದದ ವಿಶೇಷ ಅಧ್ಯಯನವನ್ನೂ ನಡೆಸಿರುವ ಈತ ಜನಪದದ ಹನ್ನೆರಡು ಪ್ರಾಕಾರಗಳನ್ನು ಕರಗತ ಮಾಡಿಕೊಂಡಿದ್ದಾನೆ. ಬಹುಶಃ ಹನ್ನೆರಡು ಬಗೆಯ ವಿವಿಧ ವಾದ್ಯಗಳನ್ನು ನುಡಿಸುವುದರೊಂದಿಗೆ ಸುಶ್ರಾವ್ಯವಾಗಿ ಹಾಡುವಂಥ ಕಠಿಣ ಕೆಲಸಕ್ಕೆ ಈವರೆಗೆ ಯಾರೂ ಪ್ರಯತ್ನಿಸಿಲ್ಲವೇನೋ? ಕುವೆಂಪು, ಬೇಂದ್ರೆ, ಶರೀಫರ ಪದ್ಯಗಳು ಈತನ ಬಾಯಿಂದ ಪಟಪಟ ಉದುರುತ್ತವೆ. ಇಷ್ಟೆಲ್ಲಾ ರಂಗಭೂಮಿ ಮತ್ತು ಜನಪದ ಕ್ಷೇತ್ರದ ಒಡನಾಟವಿರುವ ರಾಜ್‌ಗುರು ತನ್ನ ಸ್ನೇಹಿತರೊಡಗೂಡಿ 'ಚಿಗುರು' ಎಂಬ ತಂಡವನ್ನೂ ಕಟ್ಟಿಕೊಂಡು ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಿದ್ದಾನಲ್ಲದೇ ಆಡಿಯೋ ಆಲ್ಬಂಗಳನ್ನೂ ರಿಲೀಸ್ ಮಾಡಿದ್ದಾನೆ.

ಈತನ ಈ ಪ್ರತಿಭೆಯನ್ನು ಗಮನಿಸಿದ ಸಂಗೀತ ನಿರ್ದೇಶಕ ವಿ. ಮನೋಹರ್ 'ದುನಿಯಾ' ಚಿತ್ರದಲ್ಲಿ ಈತನಿಂದ 'ಸಾಲ ಮಾಡಿ ಆದ್ರೂ ತುಪ್ಪ ತಿನ್ನು' ಹಾಡು ಹಾಡಿಸಿದ್ದರು. ಈಗಷ್ಟೇ ಬಿಡುಗಡೆಯಾಗಿರುವ 'ಮೇಘವೇ ಮೇಘವೇ' ಚಿತ್ರದಲ್ಲಿ ನಾಗೇಂದ್ರ ಪ್ರಸಾದ್ ಈತನಿಗೆ ಕಲಾ ನಿರ್ದೇಶನದ ಜೊತೆಗೆ ನಟಿಸುವ ಅವಕಾಶವನ್ನೂ ನೀಡಿದ್ದಾರೆ. ಇನ್ನೇನು ಬಿಡುಗಡೆಯಾಗಲಿರುವ 'ತಿಪ್ಪಾರಳ್ಳಿಯ ತರ್ಲೆಗಳು' ಚಿತ್ರದಲ್ಲೂ ಈತ ಹಾಡಿದ್ದಾನೆ.

ಹೀಗೆ ಮಗ ಅಪ್ಪನಿಗಿಂತಾ ಒಂದು ಹೆಜ್ಜೆ ಮುಂದೆ ಸಾಗಿ ಸಾಂಸ್ಕೃತಿಕ ಲೋಕದಲ್ಲಿ ತನ್ನದೇ ಛಾಪು ಮೂಡಿಸುತ್ತಿದ್ದರೆ, ಅತ್ತ ಈತನ ತಂದೆ ಗುರುರಾಜ ಹೊಸಕೋಟೆಯವರ ಬದುಕೂ ಬದಲಾಗಿ ಹೋಗಿದೆ.


'ಕರಿಯ' ಚಿತ್ರದ 'ಕೆಂಚಾಲೋ ಮಂಚಾಲೋ' ಅನ್ನೋ ಹಾಡಿನಿಂದ ಸಿನಿಮಾರಂಗಕ್ಕೆ ಮತ್ತೆ ರೀ ಎಂಟ್ರಿ ಪಡೆದ ಹೊಸಕೋಟೆಯವರಿಗೆ 'ಜೋಗಿ' ಚಿತ್ರದ ಕಾಕಾ ಪಾರ್ಟಿ ಮತ್ತು 'ಹೊಡಿಮಗ' ಹಾಡು, ಕವಿತಾ ಲಂಕೇಶರ 'ತನನಂ ತನನಂ'ನ 'ಕಲಿತ ಹುಡುಗಿ ಕುದುರಿ ನಡಿಗೆ' ಹಾಡುಗಳು ಜನಪ್ರಿಯತೆಯ ಉತ್ತುಂಗಕ್ಕೆ ಕೊಂಡೊಯ್ದಿದೆ. ಇದೆಲ್ಲದರ ಜೊತೆ ಪೋಷಕ ನಟನಾಗಿಯೂ ಫೇಮಸ್ ಆಗಿರುವ ಗುರುರಾಜ ಹೊಸಕೇಟೆ ಈಗ ಬಿಡುಗಡೆಗೆ ಸಿದ್ಧಗೊಂಡಿರುವ 'ಜಾಜಿ ಮಲ್ಲಿಗೆ', 'ಹೊಡಿಮಗ', 'ಯೋಗಿ' ಸೇರಿದಂತೆ ಹಲವಾರು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ.

ಮಗನ ದುಡಿಮೆಯೊಂದಿಗೆ ತಮಗೂ ಸಿನಿಮಾ ಅವಕಾಶಗಳು ಅರಸಿಬರುತ್ತಿರುವುದರಿಂದ ಮನೆಯ ಪರಿಸ್ಥಿತಿಯೂ ಸುಧಾರಿಸಿ ಬದುಕು ಹಸನಾಗುತ್ತಿದೆ. ಇಷ್ಟರಲ್ಲೇ ಇವರೇ ಕಥೆ ಬರೆದಿರುವ ಶಿವರಾಜ್‌ಕುಮಾರ್ ಅಭಿನಯದ ಚಿತ್ರವೊಂದು ಸೆಟ್ಟೇರಲಿದೆ.

'ಕಲಾವಿದನ ಬದುಕು ಹೇಗಿರುತ್ತದೆ?' ಅನ್ನೋ ಪ್ರಶ್ನೆಗೆ ಗುರುರಾಜ ಹೊಸಕೋಟೆ ಉತ್ತರವಾಗಿ ನಿಂತಿದ್ದಾರೆ; ತನ್ನ ಮಗನೊಂದಿಗೆ.

ಅಪ್ಪ ಹಳೆ ಬೇರಾದರೆ ಮಗ ಹೊಸ ಚಿಗುರಾಗಿದ್ದಾನೆ.

■ ಅರುಣ್‌ಕುಮಾರ್ ಜೆ.



ರಾಜ್‌ಗುರು



ತಾರಾಳ ಡಬಲ್ ಆಕ್ಟಿಂಗ್!

ತಾರಾ ತನ್ನ ಹೆಸರನ್ನು ಅನುರಾಧ ಎಂದು ಬದಲಾಯಿಸಿಕೊಂಡಿದ್ದಾರಂತೆ. ಕಳೆದ ಎರಡು ದಶಕಗಳಿಂದಲೂ ತಾರಾ ಎಂಬ ಹೆಸರಿನಲ್ಲೇ ಕರ್ನಾಟಕದ ಜನರ ಮನಸ್ಸನ್ನು ಗೆದ್ದ ಈಕೆ ಈಗ ಯಾಕೆ ಹೆಸರು ಬದಲಾಯಿಸಿಕೊಂಡಿದ್ದಾರೆ? ಎಂಬ ಸಂಶಯ ಎಲ್ಲರನ್ನೂ ಕಾಡುತ್ತಿದೆ. ಹಾಗೆ ನೋಡಿದರೆ ಅನುರಾಧ ಎಂಬುದು ಆಕೆಯ ತಂದೆ-ತಾಯಿ ಇಟ್ಟ ಹೆಸರು. ಸಿನಿಮಾರಂಗಕ್ಕಾಗಿ ಆಕೆ ಪಡೆದ ಹೆಸರು ತಾರಾ.

ಈಗ ಅನುರಾಧ ಆಗುವ ಮುಖಾಂತರ ತಾರಾ ಚಿತ್ರರಂಗಕ್ಕೆ ವಿದಾಯ ಹೇಳಲಿದ್ದಾರೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತವೆ. ಆದರೆ ತಾರಾ ಯಾನೆ ಅನುರಾಧ ಖಂಡಿತವಾಗಿಯೂ ಚಿತ್ರರಂಗಕ್ಕೆ ವಿದಾಯ ...ಪ್ರಶ್ನೆಯೇ ಇಲ್ಲವಂತೆ. ಪ್ರೇಕ್ಷಕರೇ ವಿದಾಯ ಹೇಳುವ ತನಕ ಆಕೆ ಇಲ್ಲೇ ಇರುತ್ತಾರಂತೆ. ...ರೆ ಹೆಸರನ್ನು ಬದಲಾಯಿಸಿಕೊಳ್ಳಲು ಕಾರಣವೇನೆಂದು ಕೆದಕಿದಾಗ ಗೊತ್ತಾಗಿದ್ದದ್ದು ...ಆಕೆಯ ಜ್ಯೋತಿಷಿಗಳ ಸಲಹೆ ಎಂಬುದು. ಆ ಜ್ಯೋತಿಷಿಗಳು "ತಾರಾ ಹೆಸರು ... ಯೋಗ್ಯವಾಗಿತ್ತು, ಆದರೆ ರಾಜಕೀಯಕ್ಕೆ ಇದು ಕೂಡಿ ಬರುವುದಿಲ್ಲ. ನೀವು ...ಮುದಲ್ಲಿ ಮೇಲೇರಬೇಕಾದರೆ ಹೆಸರನ್ನು ಬದಲಾಯಿಸಲೇಬೇಕು" ಎಂದು ಆದೇಶ ...ಂತೆ. ಅದನ್ನು ತಾರಾ ಪಾಲಿಸಿದ್ದಾರೆ.


...ಾಗಲೇ ಮದುವೆಯಾಗಿ ಗ್ಲಾಮರ್‌ಲೋಕದಲ್ಲಿ ಅವಕಾಶಗಳನ್ನು ಕಳೆದುಕೊಂಡಿರುವ ...ಈಗ ರಾಜಕೀಯಕ್ಕೆ ಇಳಿದು 'ಸಮಾಜಸೇವೆ' ಮಾಡಲು ಉತ್ಸುಕರಾಗಿದ್ದಾರೆ. ತಾರೆಯಾಗಿ ...ವೆ' ಮಾಡಿದ್ದ ಈಕೆ ಈಗ ಅನುರಾಧಳಾಗಿ 'ಸಮಾಜಸೇವೆ' ಮಾಡಲು ಹೊರಟಿರುವುದು ...ವಾಗಿದೆ. ಅಲ್ಲಾ, ಪಾತ್ರಕ್ಕೊಂದು ವೇಷ ಎಂಬುದು ಸಿನಿಮಾಗಳಲ್ಲಿ ಮಾತ್ರ ಎಂದು ...ಬಿದ್ದರೆ, ಈ ತಾರಾ ಸೇವೆಗೊಂದು ಹೆಸರು ಎಂಬ ಹೊಸ ತರ್ಕ ಹುಟ್ಟು...ಕ್ಕಲ್ಲಾ?!



ಒಂದೇ ಹೂದೋಟದಲ್ಲಿ ರಾಮು, ರಾವಣ!

ಮೊನ್ನೆ ಕಂಠೀರವ ಸ್ಟುಡಿಯೋದ ಹೂದೋಟದಲ್ಲಿ 'ರಾವಣ' ಚಿತ್ರದ ಮುಹೂರ್ತ ವಿಜೃಂಭಣೆಯಿಂದ ನಡೆಯಿತು. ಲೂಸ್ ಮಾದ ಯಾನೆ ಯೋಗೇಶ್ ಈ ಚಿತ್ರದ ನಾಯಕ. ಇದೊಂದು ರಿಮೇಕ್ ಚಿತ್ರ ಎಂಬುದು ನಿಮಗೆ ಈಗಾಗಲೇ ತಿಳಿದಿರುವ ವಿಷಯ.

ಇದಾದ ನಾಲ್ಕೇ ದಿನಕ್ಕೆ ಅದೇ ಕಂಠೀರವ ಸ್ಟುಡಿಯೋದಲ್ಲಿ ಅದೇ ಹೂದೋಟದ ಮಾವಿನ ಮರದ ಕೆಳಗೆ 'ರಾಮ್' ಎಂಬ ಚಿತ್ರ ಕೂಡಾ ಸೆಟ್ಟೇರಿತು. 'ರಾಮ್' ಚಿತ್ರ ಕೂಡಾ 'ರಾವಣ'ನಂತೆ ಪರಭಾಷೆಯಿಂದ ತಂದಿದ್ದು. ಪುನೀತ್ ರಾಜ್‌ಕುಮಾರ್ ಈ ಚಿತ್ರದ ನಾಯಕನಟ.



ಹೀಗೆ 'ರಾಮ' ಮತ್ತು 'ರಾವಣ' ನಾಲ್ಕೇ ದಿನದ ಅಂತರದಲ್ಲಿ ಗಾಂಧಿನಗರಕ್ಕೆ ಪರಭಾಷೆಯಿಂದ ಬಂದಿದ್ದಾರೆ. ಅದೂ ಒಂದೇ ಸ್ಥಳದಲ್ಲಿ ಇಬ್ಬರೂ ಉದ್ಭವವಾಗಿದ್ದಾರೆ!! ಇನ್ನೇನು ರಾಮಾಯಣ ಆರಂಭವಾಗಬೇಕಾಗಿದೆ ಅಷ್ಟೇ.... ಎಂತಹ ವಿಚಿತ್ರ ತಮಾಷೆಯಲ್ಲವೇ?



ಕಿಶೋರ್‌ನ ಎರಡು 'ಕಬಡ್ಡಿ' ಆಟ

ಕಿಶೋರ್ ಎಂಬ ಸಭ್ಯ ಮತ್ತು ಪ್ರತಿಭಾವಂತ ನಟ ಈಗ ಮತ್ತೊಮ್ಮೆ ವಿವಾದದ ಕೇಂದ್ರಬಿಂದುವಾಗಿದ್ದಾರೆ.

ಕಳೆದ ವರ್ಷ ಕಿಶೋರ್ ತಮ್ಮ ಸ್ನೇಹಿತರೊಡಗೂಡಿ 'ಕಬಡ್ಡಿ' ಎಂಬ ಚಿತ್ರವನ್ನು ಮಾಡಲು ಹೊರಟಿದ್ದರು. ಅವರ ಸ್ನೇಹಿತ ನರೇಂದ್ರ ಬಾಬು ಈ ಚಿತ್ರವನ್ನು ನಿರ್ದೇಶಿಸಲು ಒಪ್ಪಿಕೊಂಡಿದ್ದರು. ಆದರೆ ಈ ಚಿತ್ರ ಮುಗಿಯುವ ಮೊದಲೇ ಕಿಶೋರ್ ಅದೇ ತರಹದ ಕಥಾವಸ್ತುವುಳ್ಳ ತಮಿಳು ಚಿತ್ರದಲ್ಲಿ ನಟಿಸುತ್ತಿದ್ದಾರೆ; ಅಲ್ಲೂ ಕೂಡಾ ಕಿಶೋರ್ ಇದೇ ಮಾದರಿಯ ಪಾತ್ರದಲ್ಲಿ ಕಾಣಿಸುತ್ತಿದ್ದಾರೆ ಎಂದು ನರೇಂದ್ರ ಬಾಬು ಆರೋಪಿಸಿದ್ದರು.

ಆಗ "ಆ ಚಿತ್ರವೇ ಬೇರೆ. ಆ ಚಿತ್ರವನ್ನು 'ಕಬಡ್ಡಿ' ಚಿತ್ರ ಬಿಡುಗಡೆಯ ನಂತರವೇ ಬಿಡುಗಡೆ ಮಾಡುತ್ತೇವೆ" ಎಂದು ಕಿಶೋರ್ ಹೇಳಿದ್ದರು. ಆನಂತರ ಆ ವಿವಾದ ಅಲ್ಲಿಗೆ ತಣ್ಣಗಾಗಿತ್ತು. ಆದರೆ ಕಿಶೋರ್ ನಟಿಸಿರುವ ತಮಿಳು ಚಿತ್ರ 'ವೆನಿಲಾ ಕಬಡ್ಡಿ ಕುಹು' ಈಗ ಬಿಡುಗಡೆಯಾಗಿ ಎರಡು ವಾರಗಳೇ ಸಂದುಹೋಗಿದೆ. ಸಿನಿಮಾ ನೋಡಿದ 'ಕಬಡ್ಡಿ' ತಂಡದ ಸದಸ್ಯರು "ಅದು ಕೂಡಾ ನಮ್ಮ ಕಥೆಯಂತೆಯೇ ಇದೆ. ಅಲ್ಲೂ ಕಿಶೋರ್ ತರಬೇತುದಾರರಾಗಿ ಕಾಣಿಸಿದ್ದಾರೆ" ಎಂದು ಹೇಳುತ್ತಿದ್ದಾರೆ.

ಅದಕ್ಕಿಂತಲೂ ಮುಖ್ಯವಾಗಿ ಈಗ 'ಕಬಡ್ಡಿ' ಬಿಡುಗಡೆಯಾದರೆ ಇದು ತಮಿಳು ಚಿತ್ರದ ರೀಮೇಕ್ ಎಂದು ಜನ ಉಗಿಯುತ್ತಾರಲ್ಲಾ ಎಂಬುದೇ ಇವರ ಕಳವಳ. ಸಜ್ಜನ ಎಂದೇ ಖ್ಯಾತಿಗಳಿಸಿದ ಕಿಶೋರ್ ಯಾಕೆ ಹೀಗೆ ಮಾಡಿದರು?

ಅರ್ಥವಿಲ್ಲದ 'ಜಂಗ್ಲಿ'

ಸೋನಿಯ ಪ್ರಥಮ ನಿರ್ದೇಶನದ 'ದುನಿಯಾ' ಭರ್ಜರಿ ಗೆಲುವು ಗಳಿಸಿತ್ತು. ಆವರ ದ್ವಿತೀಯ ಚಿತ್ರ 'ಇಂತಿ ನಿನ್ನ ಪ್ರೀತಿಯ' ಬಾಕ್ಸಾಫೀಸ್‌ನಲ್ಲಿ ಅಮೋಘ ಸೋಲು ಕಂಡಿತ್ತು. ಹೀಗೆ ಸೋಲು-ಗೆಲುವು ಎರಡನ್ನೂ ಅನುಭವಿಸಿದ ನಂತರ ಸೂರಿ ನಿರ್ದೇಶಿಸಿದ್ದು 'ಜಂಗ್ಲಿ'.

'ದುನಿಯಾ' ಜೋಡಿ ಸೂರಿ ಮತ್ತು ವಿಜಿ 'ಜಂಗ್ಲಿ'ಯಲ್ಲಿದ್ದುದರಿಂದ ಈ ಚಿತ್ರದ ಬಗ್ಗೆ ಏನೋ ಒಂಥರಾ ಕುತೂಹಲವಿತ್ತು. ಮುಖ್ಯವಾಗಿ ಸೂರಿಯ ಪ್ರತಿಭೆ ಮತ್ತು ಹಿನ್ನೆಲೆ ಗೊತ್ತಿರುವವರು ಆತನ ಬಗ್ಗೆ ಅಪಾರ ನಿರೀಕ್ಷೆಯಿಟ್ಟುಕೊಂಡಿದ್ದರು. ಆದರೆ 'ಜಂಗ್ಲಿ' ನೋಡಿದ ನಂತರ "ಈ ಸೂರಿಗೇನಾಗಿದೆ?" ಎನ್ನುವಂತಾಗಿದೆ. ಎರಡನೇ ಚಿತ್ರದ ಸೋಲಿನ ಹತಾಶೆಯಿಂದಾಗಿ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲಲೇಬೇಕೆಂಬ ಏಕೈಕ ಉದ್ದೇಶದಿಂದ ಇಡೀ ಚಿತ್ರವನ್ನು ಸೂರಿ ಮಸಾಲೆ ಚಿತ್ರವಾಗಿಸಿದ್ದಾರೆ. 'ದುನಿಯಾ' ಚಿತ್ರ ರೌಡಿಸಂನ ಕಥಾವಸ್ತು ಹೊಂದಿದ್ದರೂ ಸೂರಿ ಅದನ್ನು ದೃಶ್ಯಕಾವ್ಯವನ್ನಾಗಿಸಿ ವಿಭಿನ್ನ ನಿರ್ದೇಶಕರೆನಿಸಿದ್ದರು. ಸೂರಿ ಮೂಲತಃ ಕಲಾವಿದನಾಗಿರುವುದು ಇದಕ್ಕೆ ಕಾರಣವಾಗಿತ್ತು. ಆದರೆ ಅದ್ಯಾವುದೂ 'ಜಂಗ್ಲಿ'ಯ ಮಾಮೂಲಿ ಮಸಾಲೆಯಲ್ಲಿ ಕಾಣಸಿಗುವುದಿಲ್ಲ.



ಒಂದೆಡೆ 'ಜಂಗ್ಲಿ' ಚಿತ್ರದ ಒಟ್ಟಾರೆ ಉದ್ದೇಶ, ಕಥಾವಸ್ತು ಒಂದೂ ಅರ್ಥವಾಗುವುದಿಲ್ಲ. ಮತ್ತೊಂದೆಡೆ ಎಲ್ಲಾ ಪಾತ್ರಗಳು ನಿರಂತರವಾಗಿ ವಟವಟ ಮಾತನಾಡುತ್ತಾ ತಲೆ ಚಿಟ್ ಅನ್ನಿಸುತ್ತವೆ. ನಿಶ್ಯಬ್ದ ಕೂಡಾ ಮಾತಿನಷ್ಟೇ ಪವರ್‌ಫುಲ್ ಎಂಬುದನ್ನು ಸೂರಿ ಮರೆತಂತಿದೆ. ಈ ಚಿತ್ರದಲ್ಲಿ ಹಿಂದಿಯ 'ಓಂಕಾರ್' ಚಿತ್ರದ ಛಾಯೆ ಕಾಣಿಸುತ್ತದೆ. ತಮಿಳಿನ 'ಅಂಜಾದೆ'ಯೂ 'ಜಂಗ್ಲಿ'ಯನ್ನು ನೋಡಿದಾಗ ನೆನಪಾಗುತ್ತದೆ.

ಈ ಚಿತ್ರದಲ್ಲಿ ನಾಯಕ ವಿಜಿ ಬೇರೆಲ್ಲಾ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಿದ್ದರೂ ಟೈಗರ್ ಪ್ರಭಾಕರ್ ಅವರನ್ನು ಅನುಕರಿಸಿರುವುದು ಹಾಸ್ಯಾಸ್ಪದವಾಗಿದೆ. ರಂಗಾಯಣ ರಘು ಓವರ್ ಆಕ್ಟ್ ಮಾಡಿ ಪ್ರೇಕ್ಷಕನಿಗೆ ಬೋರು ಹೊಡೆಸುತ್ತಾರೆ. ಅವರ ಬಾಯಿಗೆ ಕಡಿವಾಣ ಹಾಕದಿರುವುದು ಸೂರಿಯ ದೌರ್ಬಲ್ಯವನ್ನು ತೋರಿಸುತ್ತದೆ. ನಾಯಕಿ ಐಂದ್ರಿತಾ ರೇಯನ್ನು ಐಟಂ ಸಾಂಗ್ ಹುಡುಗಿ ತರಹ ತೋರಿಸಿದ್ದಾರೆ. ದ್ವಂದ್ವಾರ್ಥದ ಸಂಭಾಷಣೆಗಳು ನಗು ತರಿಸುವ ಬದಲು ಅಸಹ್ಯ ಹುಟ್ಟಿಸುತ್ತವೆ. ಹೊಡೆದಾಟಗಳು ಚೆನ್ನಾಗಿ ಮೂಡಿಬಂದಿದ್ದರೂ ಕಥೆಯ ಓಟಕ್ಕೆ ಪೂರಕವಾಗಿಲ್ಲ. ಯೋಗರಾಜ್ ಭಟ್ ಬರೆದಿರುವ 'ಹಳೇ ಪಾತ್ರೆ...' ಹಾಡಿನ ದೃಶೀಕರಣ, ಸಂಕಲನ ಮತ್ತು ಛಾಯಾಗ್ರಹಣ ಚೆನ್ನಾಗಿದೆ.

ಬರೀ ಅಶ್ಲೀಲ ಮಾತುಗಳು, ಹೊಡೆದಾಟಗಳು ಮತ್ತು ಉನ್ಮಾದ ಹುಟ್ಟಿಸುವ ಹಾಡು-ದೃಶ್ಯಗಳು... ಇವಿಷ್ಟು ಇದ್ದರೆ ಪ್ರೇಕ್ಷಕರ ಮನಸ್ಸು ಗೆಲ್ಲಬಹುದು ಎಂದು ಸೂರಿ ಭಾವಿಸಿ 'ಜಂಗ್ಲಿ'ಯನ್ನು ನಿರೂಪಿಸಿದಂತಿದೆ. ಆದರೆ ಈ ಮೂರೂ ಅಂಶಗಳು ವಾಕರಿಕೆ ಬರುವಷ್ಟು ಅತಿಯಾಗಿ ತುಂಬಿಹೋಗಿರುವುದರಿಂದ ಸಿನಿಮಾ ಗಬ್ಬೆದ್ದು ಹೋಗಿದೆ.

ಒಟ್ಟಾರೆಯಾಗಿ ಈ ಚಿತ್ರ ಗೆಲ್ಲಲೇಬೇಕೆಂಬ ಹುಮ್ಮಸ್ಸಿನಲ್ಲಿ ಸೂರಿ ತನ್ನ ಸಿದ್ಧಾಂತ ಮತ್ತು ತನ್ನತನವನ್ನು ಬದಿಗಿಟ್ಟಿದ್ದಾರೆ.

ಬೀಸದ 'ಬಿರುಗಾಳಿ'

ಹರ್ಷ ಎಂಬ ಚಿಗುರು ಮೀಸೆಯ ಹುಡುಗ 'ಬಿರುಗಾಳಿ'ಯ ನಿರ್ದೇಶಕ. ಮೂಲತಃ ನೃತ್ಯ ನಿರ್ದೇಶಕನಾದ ಈತ ಈಗಾಗಲೇ 'ಗೆಳೆಯ' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾನೆ.

ಹೊಸ ತಲೆಮಾರಿನ ಈ ಹುಡುಗ ಹಳೆ ತಲೆಮಾರಿನ ಕಥೆಯನ್ನು 'ಬಿರುಗಾಳಿ' ಚಿತ್ರಕ್ಕಾಗಿ ಆಯ್ಕೆ ಮಾಡಿದ್ದೇ ಮೊದಲ ತಪ್ಪು. ಹೀಗಾಗಿ ಈ ಚಿತ್ರ ಆರಂಭದಿಂದಲೇ ಬೋರು ಹೊಡೆಸುತ್ತದೆ ಮಾತ್ರವಲ್ಲ, ಈ ಹಿಂದೆ ಎಲ್ಲೋ ನೋಡಿದ ನೆನಪನ್ನು ಮೂಡಿಸುತ್ತದೆ.



ಈ ಚಿತ್ರದ ಕಥೆ ಹೇಳಿ ಪ್ರಿಯ ಓದುಗರಿಗೆ ಬೋರು ಹೊಡೆಸಲು ನಮಗೆ ಮನಸ್ಸಿಲ್ಲ. ಅನಾಥ ಹುಡುಗ ನಗರದ ಭೂಗತ ಜಗತ್ತಿನಲ್ಲಿ ಸಿಲುಕಿ ಹಣ ಮಾಡಿ, ತನ್ನ ಕೇರಿಯ ಜನರನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಈ ಮಧ್ಯೆ ಆತನ ತಾಯಿ ಮಗುವಿಗಾಗಿ ಹುಡುಕಾಡುತ್ತಾ, ಅವನ ಜೊತೆಯೇ ಕಾಲಕಳೆದರೂ ಅವಳಿಗೆ ಇವನೇ ಮಗ ಎಂದು ಗೊತ್ತಾಗುವುದಿಲ್ಲ. ಸಿನಿಮಾದವರ ಪ್ರಕಾರ ಇದು ತಾಯಿ-ಮಗ ಸೆಂಟಿಮೆಂಟ್ ದೃಶ್ಯ. ಆದರೆ ಅದನ್ನು ನೋಡಿದಾಗ ಜನ ನಗುತ್ತಿರುತ್ತಾರೆ. ಹೀಗೆ.... ತಾಯಿ ಮಗನ ಸೆಂಟಿಮೆಂಟ್, ಭೂಗತ ಜಗತ್ತು, ಅದರ ನಡುವೆ ಒಂದು ಪ್ರೇಮಕಥೆ ಹೀಗೆ ಮೂರು ಆ್ಯಂಗಲ್‌ಗಳಲ್ಲಿ ಕಥೆ ಸಾಗುತ್ತದೆ. ಆದರೆ ಎಲ್ಲೂ ಯಾವ ಹಂತದಲ್ಲೂ ಪ್ರೇಕ್ಷಕರಲ್ಲಿ ಈ ಚಿತ್ರ ರೋಮಾಂಚನ, ಕುತೂಹಲ, ಥ್ರಿಲ್ ಉಂಟುಮಾಡುವುದಿಲ್ಲ. ಇದಕ್ಕೆ ಹರ್ಷನ ನಿಧಾನಗತಿಯ ನಿರೂಪಣೆ ಎಷ್ಟು ಕಾರಣವೋ, ನಾಯಕ ಚೇತನ್‌ನ ನಿರ್ಲಿಪ್ತ ನಟನೆಯೂ ಅಷ್ಟೇ ಕಾರಣ. ಇಬ್ಬರೂ ನಾಯಕಿಯರು ಕನ್ನಡತಿಯರು! ಆದರೆ ಇವರು ತುಂಬಾ ಸುಧಾರಿಸಬೇಕಿದೆ.

ಒಂದು ಹಾಡಿನ ದೃಶ್ಯದಲ್ಲಿ ಹರ್ಷನ ನೃತ್ಯ ನಿರ್ದೇಶನದ ಪ್ರತಿಭೆ ಎದ್ದು ಕಾಣುತ್ತದೆ. ಛಾಯಾಗ್ರಾಹಕ ವೇಣು ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಬಿರುಗಾಳಿ' ನಿರೀಕ್ಷಿಸಿದಷ್ಟು ಬಿರುಸಿಲ್ಲದಿದ್ದರೂ 'ಜಂಗ್ಲಿ'ಯಷ್ಟು ಖರಾಬಾಗಿಲ್ಲ ಎನ್ನುವುದೇ ಸಮಾಧಾನ.

■ಶೆಣೈ

ಸೆಂಚುರಿ ಬಾರಿಸಲಿರುವ ಜೋಡಿ



ಕನ್ನಡ ಚಿತ್ರರಂಗದಲ್ಲಿ ಟೆನ್ನಿಸ್ ಕೃಷ್ಣ ಯಾರಿಗೆ ತಾನೇ ಗೊತ್ತಿಲ್ಲ? ಮೂಗಿನಿಂದ ಮಾತನಾಡುತ್ತಾ 'ಅಲ್ಲಕ್ಕಣಕ್ಕೋ...' ಎಂದು ಶ್ರುತಿ ವಾಕ್ಯವನ್ನು ಆರಂಭಿಸುವ ಟೆನ್ನಿಸ್ ಕೃಷ್ಣ ಹಾಸ್ಯನಟರಲ್ಲಿ ತನ್ನದೇ ಆದ ಛಾಪನ್ನು ಒತ್ತಿದ್ದಾರೆ. ತನ್ನ ವಿಚಿತ್ರವಾದ ಕಂಠ ಮಾತ್ರವಲ್ಲ ಹಾವಭಾವಗಳಿಂದಲೂ ಪ್ರೇಕ್ಷಕರನ್ನು ನಕ್ಕು ನಲಿಸುವ ಟೆನ್ನಿಸ್ ಕೃಷ್ಣ ಡಾ. ರಾಜ್ ಜೊತೆ 'ಜೀವನ ಚೈತ್ರ' ಚಿತ್ರದಲ್ಲಿ ಗಂಭೀರವಾದ ಪಾತ್ರದಲ್ಲೂ ಕಾಣಿಸಿಕೊಂಡು ತಮ್ಮ ಪ್ರತಿಭೆಯನ್ನು ತೋರಿದ್ದರು.

ಇತ್ತೀಚೆಗೆ ಟೆನ್ನಿಸ್ ಕೃಷ್ಣ ತಮ್ಮ ಸಾಂಸಾರಿಕ ಜೀವನದಲ್ಲಿ ಸ್ವಲ್ಪ ಯಡವಟ್ಟು ಮಾಡಿಕೊಂಡು ಚಿತ್ರಗಳಲ್ಲಿ ನಟಿಸುವ ಅವಕಾಶಗಳನ್ನು ಕಳೆದುಕೊಂಡಿದ್ದರು. ಆದರೂ ಟೆನ್ನಿಸ್ ಕೃಷ್ಣ ಕನ್ನಡ ಚಿತ್ರರಂಗದಲ್ಲಿ ಯಾರೂ ಮಾಡದಂತಹ ಒಂದು ಅಪರೂಪದ ಸಾಧನೆಯನ್ನು ಮಾಡಿದ್ದಾರೆ.

ಅದೇನೆಂದರೆ ಟೆನ್ನಿಸ್ ಕೃಷ್ಣ ಮತ್ತು ರೇಖಾದಾಸ್ ಜೋಡಿಯಾಗಿ 99 ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈಗ ಇಬ್ಬರು ಜೊತೆಯಾಗಿ ಸೆಂಚುರಿ ಹೊಡೆಯುವ ತವಕದಲ್ಲಿದ್ದಾರೆ. ರೇಖಾದಾಸ್ ಕೂಡಾ ಟೆನ್ನಿಸ್ ಕೃಷ್ಣರಷ್ಟೇ ಪ್ರತಿಭಾವಂತೆ. ನೋಡಲು ಚೀನಿಯರಂತೆ ಮುಖಚರ್ಯೆ ಹೊಂದಿರುವ ಈಕೆ ಕೂಡಾ ವೈಯಾರದ, ಬಿಂಕದ ಪಾತ್ರಗಳಲ್ಲಿ ನಟಿಸಿ ಸೈ ಎನಿಸಿಕೊಂಡವರು. ಚಿತ್ರರಂಗದ ಇತಿಹಾಸದಲ್ಲಿ ಇಂತಹ ಮತ್ತೊಂದು ಜೋಡಿ ಕಾಣಸಿಗುವುದಿಲ್ಲ. ಹತ್ತಿಪ್ಪತ್ತು ಚಿತ್ರಗಳಲ್ಲಿ ನಟಿಸಿದ ನಂತರ ಜೋಡಿಗಳಲ್ಲಿ ಬಿರುಕುಂಟಾಗುವುದು ಸಹಜ. ಆದರೆ ಬಿರುಕಿಲ್ಲದ ಈ ಜೋಡಿ ಶತಕ ಬಾರಿಸಿ ತಮ್ಮದೇ ಆದ ರೀತಿಯಲ್ಲಿ ದಾಖಲೆ ನಿರ್ಮಿಸಲಿದೆ. ನಾಯಕ-ನಾಯಕಿಯರ ಚಿಕ್ಕಪುಟ್ಟ ವಿಷಯಗಳೇ ದೊಡ್ಡ ದಾಖಲೆಯ ರೀತಿಯಲ್ಲಿ ಪ್ರತಿಬಿಂಬಿತವಾಗುತ್ತಿರುವ ಈ ಕಾಲದಲ್ಲಿ ಈ ಪುಟ್ಟ ಜೋಡಿಯ ದೊಡ್ಡ ಸಾಧನೆಯನ್ನು ಯಾರೂ ಗುರುತಿಸದಿರುವುದು ವಿಷಾದನೀಯ. ಈ ಜೋಡಿಗೆ ಅಭಿನಂದನೆ. ■



ಗುಟ್ಯಾಕೆ ಗುಟ್ಯಾಕೆ ರಾಕ್‌ಲೈನು?

ಇದೇ ಶನಿವಾರ ಯೋಗರಾಜ ಭಟ್ಟರ 'ಮನಸಾರೆ' ಮತ್ತು ಸಾಧು ಕೋಕಿಲಾ ನಿರ್ದೇಶನದ 'ದೇವು' ಎಂಬ ಎರಡು ಸಿನಿಮಾಗಳು ಸದ್ದಿಲ್ಲದೆ ಆರಂಭವಾಗಿವೆ.







ಈ ಎರಡೂ ಚಿತ್ರಗಳನ್ನು ರಾಕ್‌ಲೈನ್ ವೆಂಕಟೇಶ್ ನಿರ್ಮಿಸುತ್ತಿದ್ದಾರೆ. ಇತ್ತೀಚೆಗಷ್ಟೇ ರಾಕ್ ಮತ್ತು ಭಟ್ ಕಾಂಬಿನೇಷನ್‌ನಲ್ಲಿ ಬರಬೇಕಿದ್ದ ಲಗೋರಿ ಆರಂಭಕ್ಕೆ ಮುನ್ನವೇ ಲಟಕ್ ಎಂದು ಮುರಿದುಬಿದ್ದಿತ್ತು. ಈ ಸಂದರ್ಭದಲ್ಲಿ ಮಾಧ್ಯಮದವರು ಈ ಬಗ್ಗೆ ಯಕ್ಕಾಚಿಕ್ಕ ಬರೆದು ಜಡಿದಿದ್ದರಿಂದ ಈ ಬಾರಿ ಯಾರಿಗೂ ಹೇಳದೇ ಸದ್ದಿಲ್ಲದೇ ಚಿತ್ರ ಆರಂಭಿಸಿದ್ದಾರೆ. ಭಟ್ಟರ 'ಮನಸಾರೆ' ಚಿತ್ರಕ್ಕೆ ಧ್ಯಾನ್ ನಾಯಕನಾಗಿದ್ದಾನೆ. ಅಸಲಿಗೆ ಮೊಗ್ಗಿನ ಮನಸು, ರಾಕಿ ಚಿತ್ರಗಳ ನಾಯಕ ಯಶ್ ಈ ಚಿತ್ರಕ್ಕೆ ಆಯ್ಕೆಯಾಗಿದ್ದನಾದರೂ, ಚಿತ್ರ ಆರಂಭಕ್ಕೆ ಮುನ್ನವೇ ಭಟ್ಟರೊಂದಿಗೆ ಈತ ವೈಮನಸ್ಯ ಬೆಳೆಸಿಕೊಂಡಿದ್ದರಿಂದ ಕಡೇ ಗಳಿಗೆಯಲ್ಲಿ ಆತನ ಜಾಗಕ್ಕೆ ದಿಗಂತ್ ಬಂದಿದ್ದಾನೆ.

ಇನ್ನು 'ದೇವು' ಚಿತ್ರದಲ್ಲಿ ದುನಿಯಾ ವಿಜಿ ನಾಯಕನಾಗಿದ್ದಾನೆ. ಇದು ತಮಿಳಿನ ಹಳೇ ಚಿತ್ರವೊಂದರ ರಿಮೇಕ್ ಆಗಿರುವುದರಿಂದ ಸಾಧು ಮತ್ತೊಮ್ಮೆ ಕನ್ನಡ ಪ್ರೇಕ್ಷಕರಿಗೆ 'ರಕ್ತಕಣ್ಣೀರು' ತರಿಸುತ್ತಾರಾ? ಕಾದು ನೋಡೋಣ

ರಿಯಲ್‌ನಲ್ಲಿ ತಂದೆ-ಮಗಳು, ರೀಲ್‌ನಲ್ಲಿ ಪ್ರೇಮಿಗಳು!



ಕನ್ನಡ ಚಿತ್ರರಂಗ 75 ವರ್ಷಗಳನ್ನು ಪೂರೈಸಿ ಈಗ ಅಮೃತ ಮಹೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿದೆ. ಇಂತಹ ಕಾಲಘಟ್ಟದಲ್ಲಿ ಕನ್ನಡ ಚಿತ್ರರಂಗ ಯಾವ 'ಎತ್ತರ'ದಲ್ಲಿದೆ ಎಂಬುದಕ್ಕೆ ಇಲ್ಲೊಂದು ಪುಟ್ಟ ಟಿಪ್ಪಣಿ ಇದೆ. ಇದನ್ನು ಕನ್ನಡ ಪ್ರೇಮಿಗಳು ಓದಲೇಬೇಕು.

ಮೊನ್ನೆ 'ಮುಸ್ಸಂಜೆಯ ಗೆಳತಿ' ಎಂಬ ಚಿತ್ರದ ಪತ್ರಿಕಾಗೋಷ್ಠಿ ನಡೆಯಿತು. ಈ ಚಿತ್ರದ ನಿರ್ಮಾಪಕ ಬಿ.ಪಿ.ಶ್ರೀನಿವಾಸ್. ಕನ್ನಡ ಚಿತ್ರರಂಗದ ಇತ್ತೀಚಿನ ಪರಂಪರೆಯ ಪ್ರಕಾರ ಚಿತ್ರಕ್ಕೆ ಹಣ ಹಾಕುವವನೇ ಅದರ ನಿರ್ದೇಶಕ ಮತ್ತು ನಾಯಕನಟ! ಇದಕ್ಕೆ ಬಿ.ಪಿ.ಶ್ರೀನಿವಾಸ್ ಕೂಡಾ ಅಪವಾದವಲ್ಲ. 'ಮುಸ್ಸಂಜೆಯ ಗೆಳತಿ' ಚಿತ್ರದ ನಿರ್ದೇಶಕರೂ ಅವರೇ, ನಾಯಕನಟ ಕೂಡಾ ಅವರೇ.

ಇಷ್ಟೇ ಆಗಿದ್ದರೆ ಯಾರ ಅಭ್ಯಂತರವೂ ಇರಲಿಲ್ಲ. ಯಾಕೆಂದರೆ ಕಳೆದ ಎರಡು ವರ್ಷಗಳಲ್ಲಿ ನಿರ್ಮಾಪಕ-ನಿರ್ದೇಶಕ-ನಾಯಕಟ - ಹೀಗೆ ಮೂರು ಜವಾಬ್ದಾರಿಗಳನ್ನು ಏಕಕಾಲದಲ್ಲಿ ನಿರ್ವಹಿಸಿದ ಅನೇಕ 'ಪ್ರತಿಭಾವಂತ'ರನ್ನು ನಾವು ನೋಡಿದ್ದೇವೆ.

ಆದರೆ ಏನಾದರೂ ಹೊಸತನ್ನು ಮಾಡಬೇಕೆಂಬ ಹುಮ್ಮಸ್ಸಿನಲ್ಲಿ ಬಿ.ಪಿ. ಶ್ರೀನಿವಾಸ್ ಎಂಬ ಮನುಷ್ಯ ಏನು ಮಾಡಿದ್ದಾರೆ ಗೊತ್ತೆ? ಸ್ವತಃ ತನ್ನ ಮಗಳನ್ನೇ ಈ ಚಿತ್ರದ ನಾಯಕಿಯನ್ನಾಗಿ ಮಾಡಿದ್ದಾರೆ! ಹೀಗೆ ನಿಜಜೀವನದಲ್ಲಿ ತಂದೆ-ಮಗಳಾಗಿರುವ ಈ ಜೋಡಿ ಬೆಳ್ಳಿತೆರೆಯ ಮೇಲೆ ನಾಯಕ-ನಾಯಕಿಯರಾಗಿ ಮರ ಸುತ್ತುತ್ತಾರೆ. ಬಹುಶಃ ಪ್ರಪಂಚದಲ್ಲೇ ಯಾರೂ ಎಂದೂ ಕಂಡೂಕೇಳರಿಯದ ವಿಷಯವಿದು. ತಂದೆ-ಮಗಳ ಜೋಡಿಯ ಇಂತಹ ಪ್ರೇಮಕಥೆಯನ್ನು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲಾ ಸಮರ್ಥಿಸುತ್ತಿರುವುದು ಇನ್ನೊಂದು ದುರಂತ.

"ನಾವು ಕಲಾವಿದರು ಯಾವುದೇ ಪಾತ್ರವನ್ನು ಬೇಕಾದರೂ ನಿರ್ವಹಿಸುತ್ತೇವೆ. ಅದರಲ್ಲಿ ತಪ್ಪೇನಿದೆ" ಎಂಬ ವಿಚಿತ್ರ ವಾದವನ್ನು ಆಕೆ ಮುಂದಿಡುತ್ತಾರೆ. ಈಕೆಯ ವಾದವನ್ನು ನೋಡಿ ಸಾರಾ ಗೋವಿಂದು ಗೊಳ್ಳನೆ ನಕ್ಕರು ಎಂಬುದು ಬೇರೆ ವಿಷಯ.



ಅಮೃತ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಚಿತ್ರರಂಗದಲ್ಲಿ ಇಂತಹ ಅಸಹ್ಯ ಹುಟ್ಟಿಸುವ ಪ್ರಯೋಗಗಳು ನಡೆಯುತ್ತಿರುವುದು, ಅಂತಹುದನ್ನು ಜಯಮ್ಮ ಬೆಂಬಲಿಸುತ್ತಿರುವುದು... ಎಲ್ಲವೂ ಚಿತ್ರರಂಗ ದಿನದಿಂದ ದಿನಕ್ಕೆ ಅಧಃಪತನದತ್ತ ಸಾಗುತ್ತಿದೆ ಎಂಬುದನ್ನು ತೋರಿಸುತ್ತಿದೆ ಅಲ್ಲವೇ? ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44